# ಕನ್ನಡದಲ್ಲಿ ಅರ್ಥಶಾಸ್ತ್ರ ಪಠ್ಯ ಪುಸ್ತಕಗಳು
## (ಅನುವಾದ ಮತ್ತು ಸಮಸ್ಯೆಗಳು)

(೨೦೦೪-೦೫ ಪ್ರಥಮ ಪಿ.ಯು.ಸಿ. ಪಠ್ಯಗಳನ್ನು ಅನುಲಕ್ಷಿಸಿ)

ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಪ್ರಬಂಧ

ಸಂಶೋಧಕರು
ಫಕೀರಪ್ಪ ವಜ್ರಬಂಡಿ

ಮಾರ್ಗದರ್ಶಕರು
ಡಾ. ವಿಠಲರಾವ್ ಟಿ. ಗಾಯಕ್ವಾಡ್
ಪ್ರಾಧ್ಯಾಪಕರು
ಭಾಷಾಂತರ ಅಧ್ಯಯನ ವಿಭಾಗ

ಭಾಷಾ ನಿಕಾಯ
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೬

# “ ಕನ್ನಡದಲ್ಲಿ ಅರ್ಥಶಾಸ್ತ್ರ ಪಠ್ಯ ಪುಸ್ತಕಗಳು ”

## (ಅನುವಾದ ಮತ್ತು ಸಮಸ್ಯೆಗಳು)

(2004 – 05 ಪ್ರಥಮ ಪಿಯುಸಿ ಮತ್ತು 2005 –06 ದ್ವಿತೀಯ
ಪಿಯುಸಿ ಪಠ್ಯಗಳನ್ನು ಅನುಲಕ್ಷಿಸಿ)

ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ
ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ



ಸಂಶೋಧಕರು
**ಫಕೀರಪ್ಪ ವಜ್ರಬಂಡಿ**

ಮಾರ್ಗದರ್ಶಕರು
**ಡಾ. ವಿಠಲರಾವ್ ಟಿ. ಗಾಯಕ್ವಾಡ್**
ಪ್ರಾಧ್ಯಾಪಕರು



ಭಾಷಾ ನಿಕಾಯ
**ಭಾಷಾಂತರ ಅಧ್ಯಯನ ವಿಭಾಗ**
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583276
2008

# ದೃಢೀಕರಣ ಪತ್ರ

ಫಕೀರಪ್ಪ ವಜ್ರಬಂಡಿ ಇವರು **ಕನ್ನಡದಲ್ಲಿ ಅರ್ಥಶಾಸ್ತ್ರ ಪಠ್ಯ ಪುಸ್ತಕಗಳು** (ಅನುವಾದ ಮತ್ತು ಸಮಸ್ಯೆಗಳು) ಎಂಬ ವಿಷಯ ಕುರಿತ ಸಂಪ್ರಬಂಧವನ್ನು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ಭಾಷಾಂತರ ಅಧ್ಯಯನ ವಿಭಾಗಕ್ಕೆ ಸಾದರಪಡಿಸುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : /10/2008

**ಡಾ. ವಿಠಲರಾವ್ ಟಿ. ಗಾಯಕ್ವಾಡ್**

ಮಾರ್ಗದರ್ಶಕರು ಮತ್ತು

ಪ್ರಾಧ್ಯಾಪಕರು

ಭಾಷಾಂತರ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – 583276

# ದೃಢೀಕರಣ ಪತ್ರ

ಫಕೀರಪ್ಪ ವಜ್ರಬಂಡಿ ಇವರು **ಕನ್ನಡದಲ್ಲಿ ಅರ್ಥಶಾಸ್ತ್ರ ಪಠ್ಯ ಪುಸ್ತಕಗಳು** (ಅನುವಾದ ಮತ್ತು ಸಮಸ್ಯೆಗಳು) ಎಂಬ ವಿಷಯ ಕುರಿತ ಸಂಪ್ರಬಂಧವನ್ನು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ಭಾಷಾಂತರ ಅಧ್ಯಯನ ವಿಭಾಗಕ್ಕೆ ಸಾದರಪಡಿಸುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : /10/2008

**ಡಾ. ವಿಠಲರಾವ್ ಟಿ. ಗಾಯಕ್ವಾಡ್**

ಮಾರ್ಗದರ್ಶಕರು ಮತ್ತು

ಪ್ರಾಧ್ಯಾಪಕರು

ಭಾಷಾಂತರ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – 583276

# ಪ್ರಮಾಣ ಪತ್ರ

**'ಕನ್ನಡದಲ್ಲಿ ಅರ್ಥಶಾಸ್ತ್ರ ಪಠ್ಯ ಪುಸ್ತಕಗಳು'** (ಅನುವಾದ ಮತ್ತು ಸಮಸ್ಯೆಗಳು) ಎಂಬ ವಿಷಯ ಕುರಿತ ಸಂಪ್ರಬಂಧವನ್ನು ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ 2007 – 08ನೇ ಶೈಕ್ಷಣಿಕ ಸಾಲಿನಲ್ಲಿ ಡಾ.ವಿಠಲ್‌ರಾವ್ ಟಿ. ಗಾಯಕ್ವಾಡ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಸಂಪ್ರಬಂಧದ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : 06/10/2008

**ಫಕೀರಪ್ಪ ವಜ್ರಬಂಡಿ**
ಸಂಶೋಧನಾ ವಿದ್ಯಾರ್ಥಿ
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583276

# ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಪದವಿಗೆ ಅವಕಾಶ ಮಾಡಿಕೊಟ್ಟ ಮಾನ್ಯ ಕುಲಪತಿಗಳಾದ ಡಾ. ಎ. ಮುರಿಗೆಪ್ಪ ಅವರಿಗೆ, ಮಾನ್ಯ ಕುಲಸಚಿವರಾದ ಡಾ. ಹಿ.ಚಿ. ಬೋರಲಿಂಗಯ್ಯ ಅವರಿಗೆ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ. ಡಿ.ಪಾಂಡುರಂಗಬಾಬು ಅವರಿಗೆ ಕೃಜ್ಞತೆಗಳು.

ಈ ಅಧ್ಯಯನದ ಕ್ರಮವನ್ನು ಬೋಧಿಸಿ ಲವಲವಿಕೆಯಿಂದ ನನ್ನಲ್ಲಿ ಪ್ರೇರೇಪಣೆ ಮೂಡಿಸಿ, ಸೂಕ್ತ ಸಲಹೆ ಸೂಚನೆಗಳಿಂದ ಪ್ರೋತ್ಸಾಹ ನೀಡಿದ ನನ್ನ ಗುರುಗಳು ಹಾಗೂ ಮಾರ್ಗದರ್ಶಕರಾದ ಡಾ. ವಿಠಲರಾವ್ ಟಿ. ಗಾಯಕ್ವಾಡ್ ಅವರಿಗೆ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಭಾಷಾಂತರ ಅಧ್ಯಯನ ವಿಭಾಗದ ಮುಖ್ಯಸ್ಥರು ಹಾಗೂ ಸಕಾಲಕ್ಕೆ ಸರಿಯಾದ ವಿಚಾರಗಳನ್ನು ನೀಡಿದ ಡಾ.ತಾರಕೇಶ್ವರ ಅವರಿಗೂ, ನನ್ನನ್ನು ಅಧ್ಯಯನಕ್ಕೆ ಹುರಿದುಂಬಿಸಿದ ಡಾ. ಮೋಹನ್ ಕುಂಟಾರ್ ಹಾಗೂ ಡಾ.ಎಂ. ಉಷಾ ಅವರಿಗೂ ಮತ್ತು ಡಾ.ಕರಿಗೌಡ ಬೀಚನಹಳ್ಳಿಯವರಿಗೆ ಪ್ರಸಾರಾಂಗದ ನಿರ್ದೇಕರಾಗಿದ್ದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೂ ಆತ್ಮೀಯ ಕೃತಜ್ಞತೆಗಳು.

ನನ್ನ ಅಧ್ಯಯನಕ್ಕೆ ಪ್ರೋತ್ಸಾಹವನ್ನಿತ್ತ ತಂದೆ ಹನುಮಪ್ಪ ತಾಯಿ ಹನುಮವ್ವ, ಮಾವ ಶಿವಲಿಂಗಪ್ಪ ಸಿದ್ನೆಕೊಪ್ಪ ಅತ್ತೆ ಶಂಕ್ರಮ್ಮ ನನ್ನ ಶ್ರೀಮತಿ ಜಯಲಕ್ಷ್ಮೀ, ಮಕ್ಕಳಾದ ಸಂಗೀತಾ, ಶ್ವೇತಾದೇವಿ, ಸುನೀಲ್‌ಕುಮಾರ್ ಮತ್ತು ಶಿವಮಲ್ಲು, ಅಳಿಯಂದಿರಾದ ರವಿ, ಚಂದ್ರಪ್ರಕಾಶ, ಮುರಳಿ, ವೀರೇಂದ್ರ ಆಡೂರ, ಆತ್ಮೀಯರಾದ ಫಕ್ಕಪ್ಪ ಗಡಾದ, ರಾಮಣ್ಣ ಪೋಸ್ಟಮಾಸ್ಟರ್, ಯಲ್ಲಪ್ಪ ಮೇಟಿ, ಚಂದ್ರಶೇಖರಯ್ಯ ಹಿರೇಮಠ, ಸಿದ್ಧಯ್ಯ ಲಕ್ಕುಂಡಿ, ಶರಣಯ್ಯ ಇಟಗಿ, ಎ.ಜಿ. ಶರಣಪ್ಪ ಪ್ರಾಚಾರ್ಯರು, ನಿಂಗಪ್ಪ ಕೆಂಚರಡ್ಡಿ, ಎಂ.ಎಂ. ಗುಲಗಂಜಿ, ಕಾಂತಪ್ಪ ಬೇವೂರ, ವೀರಭದ್ರಯ್ಯ, ಶೇಖರಪ್ಪ, ಪದ್ಮರಡ್ಡಿ, ಶ್ರೀಮತಿ ರೇಖಾ ತೆಂಬದಮನಿ, ಶಂಕರ ಪತ್ತಾರ, ಸಹಪಾಠಿ ತಿಪ್ಪೇಶಪ್ಪ, ಮಹೇಶ, ಬಾಬು, ಗಜಾನನ, ಮಿತ್ರರಾದ ಪ್ರಹ್ಲಾದಾಚಾರ್ಯ, ಹೇಮರಡ್ಡಿ, ಎಸ್.ಎಂ.ವೀರಭದ್ರಯ್ಯಸ್ವಾಮಿ, ಶ್ರೀಮತಿ ಪದ್ಮಾವತಿ ಗಾಯಕ್ವಾಡ, ಶಾಲಿನಿ, ಜಗದೀಶ, ಗುರುಗಳಾದ ಅಂದಪ್ಪ ಉಪ್ಪಿನ, ರಂ.ರಾ. ನಿಡಗುಂದಿ, ಶಾಂತಗೌಡ, ಜಿ.ಅನಿಲಕುಮಾರ, ಡಿ.ಕೆ.ಮಾಳೆ, ಎನ್.ಮೋಹನ್, ಮರೇಗೌಡರ ಬಿ.ಪಿ, ಪ್ರಶ್ನಾವಳಿಗಳಿಗೆ ಉತ್ತರಿಸಿ ಸಹಕರಿಸಿದ ಉಪನ್ಯಾಸಕ ಮತ್ತು ವಿದ್ಯಾರ್ಥಿ ಬಂಧುಗಳಿಗೆ, ಲಕ್ಷ್ಮಣ ಹಾಸನ ಮತ್ತು ಕನಕಗಿರಿಇವರೆಲ್ಲರಿಗೂ ಕೃತಜ್ಞತೆಗಳು.

ಸಂಶೋಧನೆಗೆ ಪೂರಕವಾದ ಪುಸ್ತಕಗಳನ್ನು ಪೂರೈಸಿದ ಕರ್ನಾಟಕ ಕಾಲೇಜು ಧಾರವಾಡ ಮತ್ತು ಕನ್ನಡ ವಿಶ್ವವಿದ್ಯಾಲಯ ಹಂಪಿ ಗ್ರಂಥಾಲಯದ ಸಿಬ್ಬಂದಿಯವರಿಗೂ ಮತ್ತು ಈ ನನ್ನ ಸಂಪ್ರಬಂಧವನ್ನು ಸಮಯಕ್ಕೆ ಸರಿಯಾಗಿ ಡಿ.ಟಿ.ಪಿ. ಮಾಡಿದ ಮಹೇಶ ವಿ. ಗೋರಂಟ್ಲೆ ಇವರಿಗೆ ನನ್ನ ಕೃತಜ್ಞತೆಗಳು.

**ಫಕೀರಪ್ಪ ವಜ್ರಬಂಡಿ**

# ಪರಿವಿಡಿ

# ಅಧ್ಯಾಯ ಒಂದು

# ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

# 1. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :

ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಅರ್ಥಶಾಸ್ತ್ರ ವಿಷಯವನ್ನು ಕನ್ನಡ ಭಾಷಾ ಮಾಧ್ಯಮದಲ್ಲಿ ಅಧ್ಯಯನ ಮಾಡಲು ಯಾವ ಪಠ್ಯಪುಸ್ತಕ ಪರಿಪೂರ್ಣವಾಗಿದೆ ಮತ್ತು ವಿದ್ಯಾರ್ಥಿಗಳ ಬೌದ್ಧಿಕ ಮಟ್ಟಕ್ಕಿದೆ ಎಂಬುದನ್ನು ಗುರುತಿಸುವ ಉದ್ದೇಶದಿಂದ ಅಧ್ಯಯನ ಕೈಗೊಳ್ಳಲಾಗಿದೆ. ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು, ಇವರು 2004 – 05 ಮತ್ತು 2005 – 06ನೇ ಶೈಕ್ಷಣಿಕ ವರ್ಷದಿಂದ ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಿಗೆ ಪ್ರಕಟಿಸಿರುವ ಹೊಸ ಪಠ್ಯಕ್ರಮವನ್ನು ಅನುಸರಿಸಿ ರಚಿಸಿದ ಪಠ್ಯಪುಸ್ತಕಗಳನ್ನು ಕುರಿತು ಅಯ್ದ ಉಪನ್ಯಾಸಕರುಗಳು ಮತ್ತು ವಿದ್ಯಾರ್ಥಿಗಳು ನೀಡಿರುವ ಪ್ರಶ್ನಾವಳಿಯ ಮಾಹಿತಿಗಳ ಆಧಾರವೇ ನನ್ನ ಅಧ್ಯಯನಕ್ಕೆ ಪ್ರಮುಖ ಅಂಶವಾಗಿರುತ್ತದೆ.

ಕನ್ನಡ ಮಾಧ್ಯಮದಲ್ಲಿ ಪ್ರಕಟವಾಗಿರುವ ಅರ್ಥಶಾಸ್ತ್ರದ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ಪಠ್ಯಪುಸ್ತಕಗಳನ್ನು ಇಂಗ್ಲಿಷ ಭಾಷೆಯ ನೇರವಾದ ಅನುವಾದಗಳಲ್ಲ. (ಬಿ. ಎಸ್ ರಾಮನ್ ಇವರ ಕೃತಿಯನ್ನು ಪಾರ್ಶ್ವನಾಥ ಅಜ್ರಿ ಇವರು ನೇರವಾಗಿ ಅನುವಾದಿಸಿದ ಕಾರಣ ಇದನ್ನು ಹೊರತು ಪಡಿಸಿ) ಇಂಗ್ಲಿಷ್ ಭಾಷೆಯ ಕೃತಿ ಅಥವಾ ಕೃತಿಗಳನ್ನು ಓದಿ, ಅಧ್ಯಯನ ಮಾಡಿ, ತಿಳಿದುಕೊಂಡು ರಚಿಸಿದ ಪಠ್ಯಪುಸ್ತಕಗಳಾದ ಕಾರಣ ಇವುಗಳನ್ನು ಭಾಷಾಂತರದ ಅಥವಾ ಅನುವಾದದ ಹಿನ್ನೆಲೆಯಲ್ಲಿ ನಾನು ಅಧ್ಯಯನ ಕೈಗೊಂಡಿದ್ದೇನೆ. ಒಂದು ರೀತಿಯಲ್ಲಿ ಇವುಗಳನ್ನು ಭಾವಾನುವಾದಗಳೆಂದು ತಿಳಿದಿದ್ದೇನೆ.

ಈಗ ಚಾಲ್ತಿಯಲ್ಲಿರುವ (ಹೊಸ ಪಠ್ಯಗಳಲ್ಲಿ ಪ್ರಕಟವಾದ) ಕನ್ನಡ ಮಾಧ್ಯಮದ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ಅರ್ಥಶಾಸ್ತ್ರ ಪಠ್ಯಪುಸ್ತಕಗಳಲ್ಲಿ ಯಾವ ಪಠ್ಯಪುಸ್ತಕವು ಯಾವ ತರಗತಿಯ ವಿದ್ಯಾರ್ಥಿಗಳ ಅಧ್ಯಯನದ ದೃಷ್ಟಿಯಿಂದ ಹೆಚ್ಚು ಪರಿಪೂರ್ಣವಾಗಿದೆ ಎಂಬುದನ್ನು ಗುರುತಿಸುವ ಪ್ರಯತ್ನ ನನ್ನದಾಗಿದೆ.

ವಿಶೇಷವಾಗಿ ಗ್ರಾಮೀಣ ಪ್ರದೇಶದ ಹಿನ್ನೆಲೆಯಿಂದ ಬಂದಿರುವ ಹಾಗೂ ಕನ್ನಡ ಮಾಧ್ಯಮದಲ್ಲಿ 1ನೇ ತರಗತಿಯಿಂದ ಅಧ್ಯಯನ ಮಾಡಿರುವ ವಿದ್ಯಾರ್ಥಿಗಳಿಗೆ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ತರಗತಿಯಲ್ಲಿನ ಅರ್ಥಶಾಸ್ತ್ರದ ಯಾವ ಪಠ್ಯಪುಸ್ತಕ ಜ್ಞಾನರ್ಜನೆ ಹೆಚ್ಚಿಸುವ ಮತ್ತು ಪರೀಕ್ಷೆಗಳನ್ನು ಗೊಂದಲಗಳಿಲ್ಲದೆ ಸುಲಭವಾಗಿ ನಿಭಾಯಿಸಲು ಪರಿಪೂರ್ಣ

ಸಹಾಯಕಾರಿ ಎಂಬುದನ್ನು ತಿಳಿಯುವ ಆಶಯ ಹೊಂದಿದ್ದೇನೆ.

ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗೆ ನಿರ್ದಿಷ್ಟ ಪಡಿಸಿದ ಪಠ್ಯಕ್ರಮದಲ್ಲಿ ಕೇವಲ ಕೆಲವು ಅಧ್ಯಾಯಗಳನ್ನು ಮಾತ್ರ ನನ್ನ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡಿರುತ್ತೇನೆ. ಎರಡೂ ತರಗತಿಗಳ ಪಠ್ಯಕ್ರಮವು ವಿಸ್ತೃತವಾಗಿದ್ದು ಅದನ್ನು ಅಧ್ಯಯನ ಮಾಡಲು ತುಂಬಾ ಸಮಯ ಮತ್ತು ಶ್ರಮವನ್ನು ಅಪೇಕ್ಷಿಸುತ್ತದೆ. ಆದ್ದರಿಂದ ಕಾಲ ಮಿತಿಯ ಒಳಗೆ ನನ್ನ ಅಧ್ಯಯನದ ಸ್ವರೂಪವನ್ನು ನಿರ್ಧರಿಸಲಾಗಿದೆ.

ಭಾರತವು ಹಳ್ಳಿಗಳ ದೇಶವಾದ್ದರಿಂದ ಹಳ್ಳಿಗಳ ಉದ್ಧಾರವಾದರೆ ದೇಶದ ಉದ್ಧಾರ ತನ್ನಿಂದ ತಾನೆ ಆಗುತ್ತದೆಂಬ ಹಿನ್ನಲೆಯಲ್ಲಿ ಗ್ರಾಮಾಂತರ ಪ್ರದೇಶದ ಅಧಿಕ ಸಂಖ್ಯೆಯ ವಿದ್ಯಾರ್ಥಿಗಳಿಗೆ ಇಂಗ್ಲಿಷ ಕಲಿಯುವುದು ಮತ್ತು ಇಂಗ್ಲಿಷ ಮಾಧ್ಯಮದಲ್ಲಿ ಅಧ್ಯಯನವನ್ನು ಮುಂದುವರೆಸುವುದು ತುಂಬಾ ಕಷ್ಟಸಾಧ್ಯ. ಆದ್ದರಿಂದ ಕನ್ನಡ ಮಾಧ್ಯಮದ ಅರ್ಥಶಾಸ್ತ್ರದ ಪಠ್ಯಪುಸ್ತಕಗಳು ವಿದ್ಯಾರ್ಥಿಗಳ ಅಧ್ಯಯನಕ್ಕೆ ಸೂಕ್ತ ಮಾರ್ಗದರ್ಶನ ನೀಡಲು ಸಾಧ್ಯವಾಗುತ್ತದೆಂಬುದಕ್ಕಾಗಿ ಈ ವಿಷಯವನ್ನು ಆಯ್ಕೆ ಮಾಡಿಕೊಂಡಿರುತ್ತೇನೆ.

ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿದ ಕನ್ನಡ ಮಾಧ್ಯಮದ ಪ್ರಥಮ ಮತ್ತು ದ್ವಿತೀಯ ಅರ್ಥಶಾಸ್ತ್ರ ಪಠ್ಯಪುಸ್ತಕಗಳನ್ನೇ ಏಕೆ ಮುಖ್ಯ ಕೃತಿಗಳನ್ನಾಗಿ ಆಯ್ದುಕೊಂಡಿದ್ದೇನೆಂದರೆ, ಈ ವಿಶ್ವವಿದ್ಯಾಲಯವು ಒಂದು ವಿಶಿಷ್ಟವಾದದ್ದು ಹಾಗೂ ಇಲ್ಲಿ ಪಠ್ಯಪುಸ್ತಕ ರಚನಾ ಕೇಂದ್ರವಿದೆ. ಅದು ಶಿಕ್ಷಣದ ಎಲ್ಲಾ ಹಂತಗಳಿಗೆ ಮತ್ತು ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಪಠ್ಯಪುಸ್ತಕಗಳು, ಆಕರ ಗ್ರಂಥಗಳು, ಪರಾಮರ್ಶನ ಕೃತಿಗಳು, ಅಧ್ಯಾಪಕರ ಕೈಪಿಡಿಗಳು ಈ ಮೊದಲಾದವುಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಜವಾಬ್ದಾರಿ ಹೊಂದಿರುತ್ತದೆ. ಇಂತಹ ಮಹತ್ವದ ವಿಶ್ವವಿದ್ಯಾಲಯವು ಪ್ರಕಟಿಸಿದ ಪಠ್ಯಪುಸ್ತಕಗಳಲ್ಲಿ ಆಕರ ಗ್ರಂಥಗಳ ಪಟ್ಟಿ, ಶಬ್ದಕೋಶ, ಸೂಕ್ತ ಉದಾಹರಣೆ ಈ ಮೊದಲಾದವುಗಳನ್ನು ಪ್ರಕಟಿಸಿದ್ದರಿಂದ ನನ್ನ ಅಧ್ಯಯನಕ್ಕೆ ಪ್ರಮುಖವಾಗಿರುತ್ತದೆ.

ಪಿಯುಸಿ ಹಂತವು ಪ್ರೌಢ ಮತ್ತು ಪದವಿ ತರಗತಿಗಳ ಮಧ್ಯದಲ್ಲಿ ಬರುವ ಹಂತವಾಗಿದೆ. ಪಿಯುಸಿ ಮೇಲಿನ ಮತ್ತು ಕೆಳಗಿನ ಎಲ್ಲಾ ಹಂತಗಳಲ್ಲಿ ಸೆಮಿಸ್ಟರ್ ಪದ್ಧತಿ ಪ್ರಾರಂಭವಾಗಿದೆ. ಆದರೆ ಈ ಹಂತದಲ್ಲಿ ಮಾತ್ರ ಇದರ ಅನ್ವಯ ಇನ್ನೂ ಆಗಿರುವುದಿಲ್ಲ.

" ಅರ್ಥಶಾಸ್ತ್ರ ವಿಷಯ ಬೆಳವಣಿಗೆಗೆ ಕೊನೆ ಇಲ್ಲ, ಇದು ವಾಸ್ತವಿಕ ಅಧ್ಯಯನವಾಗಿ ಬೆಳೆದಿದೆ. ನಮ್ಮ ದೈನಂದಿನ ಬದುಕಿನ ಅನೇಕ ಸಮಸ್ಯೆಗಳನ್ನು ವೈಜ್ಞಾನಿಕ ತಳಹದಿಯಲ್ಲಿ ವಿಶ್ಲೇಷಿಸುವುದರ ಜೊತೆಗೆ ಗಣಿತ ಹಾಗೂ ಸಂಖ್ಯಾಶಾಸ್ತ್ರದ ಸಹಾಯದೊಂದಿಗೆ ಅನೇಕ ಸಂಕೀರ್ಣ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಹಾಗೂ ಆರ್ಥಿಕ ನೀತಿ ನಿಯಮಗಳನ್ನು ರೂಪಿಸುವುದಕ್ಕೆ ಸಾಧ್ಯವಾಗಿದೆ. ಜಾಗತೀಕರಣದ ಇಂದಿನ ಯುಗದಲ್ಲಿ ಉತ್ತಮ ನಾಗರಿಕರಾಗಲು ಅರ್ಥಶಾಸ್ತ್ರದ ಕನಿಷ್ಠ ಜ್ಞಾನ ಅವಶ್ಯಕ.

ಅರ್ಥಶಾಸ್ತ್ರ ಅನೇಕ ಶಾಖೆಗಳಿಂದ ಹೆಮ್ಮರವಾಗಿ ಬೆಳೆದಿದೆ. ಕೃಷಿ ಅರ್ಥಶಾಸ್ತ್ರ.

ಗ್ರಾಮೀಣ ಅಭಿವೃದ್ಧಿ, ಕೈಗಾರಿಕಾ ಅರ್ಥಶಾಸ್ತ್ರ, ಪರಿಸರ ಅಧ್ಯಯನ, ಜನಸಂಖ್ಯಾ ಅರ್ಥಶಾಸ್ತ್ರ ಆರೋಗ್ಯ ಅರ್ಥಶಾಸ್ತ್ರ, ಯೋಜನಾ ಅಧ್ಯಯನ, ಸಾರಿಗೆ ಅರ್ಥಶಾಸ್ತ್ರ, ಮ್ಯಾನೇಜಿಯರಲ್ ಅರ್ಥಶಾಸ್ತ್ರ– ಹೀಗೆ ಹಲವಾರು ಶಾಖೆಗಳಿವೆ.

**ಉದ್ಯೋಗಾವಕಾಶಗಳು** : ಅರ್ಥಶಾಸ್ತ್ರ ಪದವಿ, ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳಿಗೆ ಉದ್ಯೋಗ ಮಾರುಕಟ್ಟೆಯಲ್ಲಿ ಬೇಡಿಕೆ ಇದ್ದು ಬೇಡಿಕೆಗೆ ತಕ್ಕಂತೆ ವಿಷಯದ ಉತ್ತಮ ಜ್ಞಾನದ ಮೂಲಕ ಬೇಕಾದ ಅರ್ಹತೆ ಗಳಿಸಿಕೊಂಡರೆ ನೌಕರಿ ಪಡೆಯುವುದರಲ್ಲಿ ಸಂಶಯವಿಲ್ಲ. ಮೂಲತವಾಗಿ ಅರ್ಥಶಾಸ್ತ್ರ – ಇಂದು ಅನೇಕ ಪದವಿಗಳಲ್ಲಿ ಪೂರಕ ವಿಷಯವಾಗಿ ವಾಣಿಜ್ಯಶಾಸ್ತ್ರ– ಬಿ.ಕಾಂ, ಬಿ.ಬಿ.ಎಂ., ಎಂ.ಬಿ.ಎ., ಸಿ.ಎ. ಕಂಪೆನಿ ಸೆಕ್ರೆಟರಿ ಹಾಗೂ ಕೃಷಿ ವಿಶ್ವವಿದ್ಯಾಲಯದಲ್ಲಿ ಬಿ.ಎಸ್ಸಿ (ಅಗ್ರಿ) , ಎಂ.ಎಸ್ಸಿ (ಅಗ್ರಿ) ಎಂ.ಎಸ್ಸಿ(ಮಾರ್ಕೆಟಿಂಗ್) ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಬಿ.ಇ. ಪದವಿಯಲ್ಲಿ ಅರ್ಥಶಾಸ್ತ್ರ ಪೂರಕವಾಗಿ ಕಲಿಯಲೇಬೇಕಾಗಿದ್ದು ಇತರ ಸಾಮಾಜಿಕ ವಿಜ್ಞಾನಗಳಿಗಿಂತ ಹೆಚ್ಚು ಉದ್ಯೋಗ ಸೃಷ್ಟಿಸುವ ವಿಷಯವಾಗಿದೆ."[1]

ಈ ಮೇಲಿನ ವಿಷಯವನ್ನು ಗಮನಿಸಿದಾಗ ಅರ್ಥಶಾಸ್ತ್ರದ ಅಧ್ಯಯನದ ಮಹತ್ವ ಎಷ್ಟು ಎಂಬುದು ತಿಳಿಯುತ್ತದೆ. ಇಂತಹ ಮಹತ್ವದ ವಿಷಯವನ್ನು ವಿದ್ಯಾರ್ಥಿಗಳು ಸರಿಯಾಗಿ ಮತ್ತು ಸಮರ್ಪಕವಾಗಿ ಮನನವಾಗುವಂತೆ ಅಧ್ಯಯನ ಮಾಡಿದರೆ ತಮ್ಮ ಮುಂದಿನ ಜೀವನ ಸಾಗಿಸವ ಮಾರ್ಗವನ್ನು ಯಾರ ಸಹಾಯವೂ ಇಲ್ಲದೆ ಅಭಿಮಾನದಿಂದ ಮತ್ತು ದೈರ್ಯದಿಂದ ಯಶಸ್ವಿಯಾಗಿ ತಲುಪಲು ಸಮರ್ಥರಾಗುತ್ತಾರೆ. ಆದರೆ ಪ್ರಾರಂಭದಲ್ಲಿಯೆ ವಿಷಯದ ಗೊಂದಲದಿಂದ ಸರಿಯಾಗಿ ವಿಷಯ ತಿಳಿಯದಿದ್ದರೆ ಅವರ ಬದುಕು ಕತ್ತಲೆಯ ಕೂಪದಲ್ಲಿ ನೂಕಿದಂತಾಗುತ್ತದೆ ಎಂಬುದನ್ನು ಮರೆಯುವಂತಿಲ್ಲ.

" ಉಚ್ಚ ಶಿಕ್ಷಣದ ಮಾಧ್ಯಮವೆಂದು ಕ್ರಮ ಕ್ರಮವಾಗಿ ಎಲ್ಲಾ ಹಂತಗಳಲ್ಲಿ ಪ್ರಾದೇಶಿಕ ಭಾಷೆಗಳನ್ನು ಅನುಗೊಳಿಸಬೇಕೆನ್ನುವ ಕಾರ್ಯಧೋರಣೆಯನ್ನು ನಮ್ಮ ಕೇಂದ್ರ ಸರ್ಕಾರ ಸ್ವೀಕರಿಸಿದೆ ಪಠ್ಯಪುಸ್ತಕ ನಿರ್ಮಾಣದ ಕಾರ್ಯಕ್ಕೆ ವಿಶೇಷ ಗಮನ ಕೊಡುವ ದಿಶೆಯಲ್ಲಿ ರಾಜ್ಯ ಸರ್ಕಾರಗಳನ್ನು ಕೇಳಿಕೊಳ್ಳಲಾಗಿದೆ. ಮೈಸೂರು ರಾಜ್ಯ ಸರ್ಕಾರದ ಪ್ರಾದೇಶಿಕ ಸಮಿತಿಯ ಯೋಜನೆಗನುಗುಣವಾಗಿ ಕರ್ನಾಟಕ ವಿಶ್ವವಿದ್ಯಾಲಯ ಪಠ್ಯಪುಸ್ತಕ ನಿರ್ಮಾಣದ ಕಾರ್ಯವನ್ನು ಕೂಡಲೇ ಕೈಗೊಂಡಿತು. ಇದಕ್ಕಾಗಿ 1968ರಲ್ಲಿ ಒಂದು 'ಕೋಆರ್ಡಿನೇಷನ್' ಕಮಿಟಿ ನೇಮಕವಾಯಿತು..... ಸಮಿತಿಯ ನಿರ್ಣಯದಂತೆ ಪಠ್ಯಪುಸ್ತಕಗಳ ರಚನೆ ಹಾಗೂ ಪ್ರಕಾಶನದ ನಿರ್ದೇಶನಕ್ಕೆಂದು ಪಠ್ಯ ಪುಸ್ತಕ ನಿರ್ದೇಶನಾಲಯವು ಅಸ್ತಿತ್ವದಲ್ಲಿ ಬಂದಿತು......... ಆರ್ಟ್ಸ್ ಮತ್ತು ಸೈನ್ಸ್ ವ್ಯಾಸಂಗ ವಿಭಾಗಗಳಲ್ಲಿಯ ಪದವಿ ಪೂರ್ವ ಹಾಗೂ ಪದವಿ ಪ್ರಥಮ ಭಾಗಗಳ ವರ್ಗಗಳಿಗಾಗಿ ನಾಲ್ವತ್ತು ಪುಸ್ತಕಗಳನ್ನು ಸಿದ್ಧಗೊಳಿಸುವ ಯೋಜನೆಯನ್ನು ಈಗ ರೂಪಿಸಲಾಗಿದೆ........ ಕನ್ನಡಿಗರ ಪ್ರಗತಿಗಾಗಿಯೇ ಕರ್ನಾಟಕ ವಿಶ್ವವಿದ್ಯಾನಿಲಯವು ಅಸಿತ್ವದಲ್ಲಿ

ಬಂದಿದೆಯೆಷ್ಟೆ. ಪ್ರತಿಯೊಂದು ಮಟ್ಟದಲ್ಲಿಯೂ ಕನ್ನಡಕ್ಕೆ ಪ್ರಾಧಾನ್ಯ ಹಾಗೂ ಪುರಸ್ಕಾರ ದೊರೆಯಬೇಕೆಂಬುದು ನಮ್ಮ ಆಶಯವಾಗಿದೆ............ ಧಾರವಾಡದ ಪ್ರಾಥಮಿಕ ಶಾಲೆಗಳಲ್ಲಿ ಕೂಡ ಕನ್ನಡ ಪಠ್ಯಪುಸ್ತಕಗಳು ಇಲ್ಲದ ಕಾಲವು ಒಮ್ಮೆ ಇತ್ತು. ಮುಂಬೈ ಕರ್ನಾಟಕದ ಐತಿಹಾಸಿಕ ಹಿನ್ನಲೆಯ ಪರಿಣಾಮವದು........ ಈಗ ವಿಶ್ವವಿದ್ಯಾನಿಲಯದ ಉಚ್ಚ ವಿದ್ಯಾಭ್ಯಾಸಕ್ಕಾಗಿ ಕನ್ನಡ ಭಾಷೆಯಲ್ಲಿ ಪಠ್ಯಪುಸ್ತಕಗಳನ್ನು ರಚಿಸಿ ಪ್ರಕಟಿಸುವುದು ಒಂದು ಸಂಭ್ರಮದ ಸಂಗತಿಯಾಗಿದೆ....... ಈಗ ಮೊದಲನೆ ಹಂತದ ಪಠ್ಯಪುಸ್ತಕಗಳನ್ನು ಪ್ರಕಟಿಸುತ್ತಿದ್ದೇವೆ. ಪಿಯುಸಿ ಪಠ್ಯಪುಸ್ತಕಗಳನ್ನು ಸೂಚಿಸುವುದಕ್ಕೆ ಆಯಾ ವಿಷಯಗಳ ಮುಂದೆ 'ಪರಿಚಯ' ಎಂಬ ಪದವನ್ನು ಬಳಸಿದ್ದೆವೆ.......... ಪ್ರಸ್ತುತ ಕೃತಿಯು ನಮ್ಮ ಪಠ್ಯಪುಸ್ತಕ ಮಾಲೆಯಲ್ಲಿ ನಾಲ್ಕನೆಯದಾಗಿದೆ."[2]

ಈ ಮೇಲಿನ ಅಂಶಗಳಿಂದ ಕನ್ನಡ ಮಾಧ್ಯಮದ ಮಹತ್ವ ಮತ್ತು ಅದರ ಪರಿಣಾಮ ಎಷ್ಟಿತ್ತು ಎಂಬುದು ಬಹಳ ಹಿಂದೆ ಕಂಡುಕೊಂಡಿರುವುದನ್ನು ಗಮನಿಸಿದರೆ, ಇಂದು ಅದರ ಮಹತ್ವ ಸಾಕಷ್ಟು ಅಧಿಕವಾಗಿದೆ. ಅದರ ಬಳಕೆ ಸಮರ್ಪಕವಾಗಿ ಅನುವಾದದ ಮೂಲಕ ಆಗದೆ ಹೋದರೆ ತುಂಬಾ ಕಷ್ಟವಾಗುತ್ತದೆ.

ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ತರಗತಿಗಳ ಕನ್ನಡ ಮಾಧ್ಯಮದ ಅರ್ಥಶಾಸ್ತ್ರ ಪಠ್ಯಕ್ರಮಗಳಲ್ಲಿ ಆಯ್ದ ಕೆಲವು ಅಧ್ಯಾಯಗಳಲ್ಲಿನ ಪ್ರಮುಖ ಅಂಶಗಳಿಗೆ ಮಾತ್ರ ನನ್ನ ಅಧ್ಯಯವನ್ನು ಸೀಮಿತ ಮಾಡಿಕೊಂಡಿರುತ್ತೇನೆ. ಅಂದರೆ ಸಮಗ್ರ ಪಠ್ಯಕ್ರಮವನ್ನು ನನ್ನ ಅಧ್ಯಯನ ವ್ಯಾಪ್ತಿಗೆ ಒಳಪಡಿಸುವುದಿಲ್ಲ ಎಂಬುದನ್ನು ತಿಳಿಸ ಬಯಸುತ್ತೇನೆ.

## ಕೊನೆ ಟಿಪ್ಪಣಿಗಳು

1. ಡಾ. ಬಿ.ಜಿ.ಜವಳಿ, ಪ್ರಜಾವಣಿ ಕನ್ನಡ ದಿನಪತ್ರಿಕೆ ದಿನಾಂಕ : 16.9.2008 ಕ್ರೀಡಾ ಪುರವಣಿ, ಪುಟ : 3

2. ಸ.ಸ. ಮಾಳವಾಡ, ಅರ್ಥಶಾಸ್ತ್ರ ಪರಿಚಯ, ಮುನ್ನುಡಿ ಮತ್ತು ಪೀಠಿಕೆ

# ಅಧ್ಯಾಯ ಎರಡು

# ವಿಷಯ ಸ್ವರೂಪ

## 2. ವಿಷಯ ಸ್ವರೂಪ :

ಪಿ.ಯು.ಸಿ ಪ್ರಥಮ ಮತ್ತು ದ್ವಿತೀಯ ವರ್ಷದ ಕನ್ನಡ ಮಾಧ್ಯಮದ ಅರ್ಥಶಾಸ್ತ್ರ ಪಠ್ಯಪುಸ್ತಕಗಳಲ್ಲಿನ ವಿಷಯ ವಿವರಣೆ, ವಿಶ್ಲೇಷಣೆ ಬಳಿಸಿರುವ ಭಾಷೆ, ಪದಬಳಕೆ, ಸಂವಹನ ರೀತಿ, ಆಯಾ ಸಂದರ್ಭಗಳಿಗೆ ಅನುಗುಣವಾಗಿ ನೀಡಿರುವ ಅಂಕಿ – ಸಂಖ್ಯೆ, ಉದಾಹರಣೆ ಈ ಮೊದಲಾದ ಅಂಶಗಳ ಹಿನ್ನೆಲೇಯಲ್ಲಿ ವಿದ್ಯಾರ್ಥಿಗಳು ಅಧ್ಯಯನ ಮಾಡುವುದಕ್ಕೆ ಯಾವ ರೀತಿಯಲ್ಲಿ ಪ್ರೇರೇಪಿಸಬಹುದು ಎಂಬುದನ್ನು ತಿಳಿಯುವ ಆಶಯ ಹೊಂದಿದ್ದೇನೆ.

ನಮ್ಮ ಶಿಕ್ಷಣ ಪದ್ಧತಿಯು ಪ್ರಾದೇಶಿಕವಾರು ಭಾಷೆಯ ಹಿನ್ನೆಲೇಯಲ್ಲಿ ಹೆಚ್ಚು ಪ್ರಚಲಿತವಾಗಿರುವದರಿಂದ ಈಗ ಪ್ರಕಟಿಸಿರುವ ಕನ್ನಡ ಮಾಧ್ಯಮದ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ಅರ್ಥಶಾಸ್ತ್ರ ಪಠ್ಯಪುಸ್ತಕಗಳು ಹೇಗೆ ಅಧ್ಯಯನದ ಆಸಕ್ತಿಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬಲ್ಲವು ಎಂಬುದನ್ನು ಗುರುತಿಸುವ ನೆಲೆ ನನ್ನದಾಗಿದೆ.

ಬಾಂಬೆ ಕರ್ನಾಟಕ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಪ್ರಪ್ರಥಮವಾಗಿ ಕನ್ನಡ ಮಾಧ್ಯಮದಲ್ಲಿ ರಾಜ್ಯದ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ತರಗತಿಗಳಿಗೆ ಪಠ್ಯಪುಸ್ತಕಗಳನ್ನು 1969ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರು 'ಅರ್ಥಶಾಸ್ತ್ರ ಪರಿಚಯ' ಪ್ರಥಮ ಪಿ.ಯು.ಸಿ ತರಗತಿಗೆ ಮತ್ತು 'ಭಾರತದ ಅರ್ಥವ್ಯವಸ್ಥೆ' ದ್ವಿತೀಯ ಪಿ.ಯು.ಸಿ ತರಗತಿಗೆ ಪ್ರಕಟಿಸಿದ್ದಾರೆ. ಅಂದಿನಿಂದ ಇಂದಿನವರೆಗೂ ಈ ಎರಡೂ ತರಗತಿಗಳಿಗೆ ಗೊತ್ತುಪಡಿಸಿದ ಪಠ್ಯಕ್ರಮಗಳಲ್ಲಿ ಕೆಲವು ಮೂಲಭೂತ ಪರಿಕಲ್ಪನೆಗಳು ಇತ್ತಿಚೀನ ವಿಮರ್ಶೆ, ವಿಚಾರ, ವಿಶ್ಲೇಷಣೆ, ಅಂಕಿ ಅಂಶಗಳ ಸೇರ್ಪಡೆಯೊಂದಿಗೆ ಅದೇ ಪಠ್ಯಕ್ರಮ ಮುಂದುವರೆದಿದೆ. ಅಲ್ಲದೆ ಇನ್ನೂ ಕೆಲವು ಪಠ್ಯಕ್ರಮದಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಕಂಡಿವೆ. ಮತ್ತೆ ಹಲವು ಅಂಶಗಳು ಕಾಲಮಾನಕ್ಕೆ ತಕ್ಕಂತೆ ಹೊಸ ಹೊಸ ವಿಚಾರಗಳು ಸೇರ್ಪಡೆಗೊಂಡಿವೆ.

ಕನ್ನಡ ಮಾಧ್ಯಮದಲ್ಲಿ ಪ್ರಕಟವಾದ ಪ್ರಥಮ ಮತ್ತು ದ್ವಿತಿಯ ಪಿಯುಸಿ ಪಠ್ಯಕ್ರಮಗಳಲ್ಲಿ ಕಂಡು ಬಂದ ಪ್ರಮುಖ ಸ್ವರೂಪಗಳನ್ನು ಈ ಕೆಳಗಿನಂತೆ ಹೇಳಲಾಗಿದೆ.

Economics : ಇಕನಾಮಿಕ್ಸ್, ಎಕನಾಮಿಕ್ಸ್, ಅರ್ಥಶಾಸ್ತ್ರ,

Oikos : ಓೈಕೋಸ್, ಇಕೋಸ್, ಗೃಹ, ಮನೆ, ಮನೆವಾರ್ತೆ

Adam Smith : ಆ್ಯಡಮ್ ಸ್ಮಿತ್, ಆಡಂ ಸ್ಮಿತ್

Alfred marshall : ಆಲ್‌ಫ್ರೆಡ್ ಮಾರ್ಶಲ್, ಆಲ್‌ಫ್ರೆಡ್ ಮಾರ್ಷಲ್

Micro economics : ಸೂಕ್ಷ್ಮ ಅರ್ಥಶಾಸ್ತ್ರ, ಅಂಶಲಕ್ಷಿ ಅರ್ಥಶಾಸ್ತ್ರ

Macro Economics : ಸಮಗ್ರ ಅರ್ಥಶಾಸ್ತ್ರ, ಸ್ಥೂಲ ಅರ್ಥಶಾಸ್ತ್ರ, ಸಮಗ್ರಲಕ್ಷಿ ಅರ್ಥಶಾಸ್ತ್ರ,

Elementary Mathematical Techniques : ಮೂಲ ಗಣಿತಾತ್ಮಕ ತಂತ್ರಗಳು, ಪ್ರಾಥಮಿಕ ಗಣಿತ ಶಾಸ್ತ್ರದ ತಂತ್ರಗಳು, ಗಣಿತ ಪರಿಕಲ್ಪನೆಗಳು,

Variables : ಚಲಕಗಳು, ಚಲಸಂಖ್ಯೆಗಳು

Functions : ಬಿಂಬಕ, ಅನುಚಲನೆ, ಉತ್ಪನ್ನ ಫಲಗಳು

Constant : ಸ್ಥಿರಕಗಳು, ಸ್ಥಿರ ಸಂಖ್ಯೆ

Parameters : ಪರಾಮಿತಿಗಳು, ಸ್ಥಿರ ಚಲಾಂಕಗಳು

Fractions : ಅಪೂರ್ಣಾಂಕ, ಭಿನ್ನರಾಶಿ

Rational : ಅಕರ್ಣಿ, ಅನುಪಾತ

Perfectly elastic demand : ಬೇಡಿಕೆಯ ಪರಿಪೂರ್ಣ ಸ್ಥಿತಿಸ್ಥಾಪಕತ್ವ, ಪರಿಪೂರ್ಣ ಬೆಲೆ ಬೇಡಿಕೆ ಸ್ಥಿತಿಸ್ಥಾಪಕತೆ

Perfectly inelastic demand : ಬೇಡಿಕೆಯ ಪರಿಪೂರ್ಣ ಅಸ್ಥಿತಿಸ್ಥಾಪಕತ್ವ, ಪರಿಪೂರ್ಣ ಬೆಲೆ ಬೇಡಿಕೆ ಅಸ್ಥಿತಿಸ್ಥಾಪಕತೆ

Unitary elastic demand : ಬೇಡಿಕೆಯ ಸರಿಸಮ ಸ್ಥಿತಿಸ್ಥಾಪಕತ್ವ, ಸರಿಸಮ ಬೆಲೆ ಬೇಡಿಕೆ ಸ್ಥಿತಿಸ್ಥಾಪಕತೆ

Relatively elastic demand : ಬೇಡಿಕೆಯ ಸಾಪೇಕ್ಷ ಸ್ಥಿತಿ ಸ್ಥಾಪಕತ್ವ, ಸಾಪೇಕ್ಷ ಬೆಲೆ ಬೇಡಿಕೆ ಸ್ಥಿತಿ ಸ್ಥಾಪಕತೆ

Relatively inelastic demand : ಬೇಡಿಕೆಯ ಸಾಪೇಕ್ಷ ಅಸ್ಥಿತಿಸ್ಥಾಪಕತ್ವ, ಸಾಪೇಕ್ಷ ಬೆಲೆ ಬೇಡಿಕೆ ಅಸ್ಥಿತಿಸ್ಥಾಪಕತೆ

Consumers surplus : ಅನುಭೋಗಿಯ ಅಧಿಕ ತೃಪ್ತಿ, ಅನುಭೋಗಿಯ ಮಿಗುತೆ,

Quasirent : ಅರೆಗೇಣಿ, ವ್ಯತ್ಯಯ ಗೇಣಿ

Theory of demographic Transition : ಜನಸಂಖ್ಯಾ ಪರಿವರ್ತನ ಸಿದ್ಧಾಂತ, ಜನಸಂಖ್ಯಾ ಸ್ಥಿತ್ಯಂತರದ ಸಿದ್ಧಾಂತ,

Wages : ಕೂಲಿ, ಮಜೂರಿ

Money Wages and real wages : ಹಣರೂಪಿ ಕೂಲಿ ಮತ್ತು ನೈಜ ಕೂಲಿ, ನಾಮಮಾತ್ರ ಕೂಲಿ ಮತ್ತು ವಾಸ್ತವಿಕ ಕೂಲಿ, ಅಂಕಿತ ಮಜೂರಿ ಮತ್ತು ನಿಜವಾದ ಮಜೂರಿ

Organisation : ಸಂಘಟನೆ, ವ್ಯವಸ್ಥಾಪಕತ್ವ ಅಥವಾ ಉದ್ಯಮ ಸಾಹಸ

ವಿದ್ಯಾರ್ಥಿ ಶ್ರೀ ಫಕೀರಪ್ಪ ವಜ್ರಬಂಡಿ ವಿನಂತಿಸಿಕೊಳ್ಳುತ್ತೇನೆ.

1. ಅಧ್ಯಾಪಕರ ಹೆಸರು ಮತ್ತು ಪೋನ್ ನಂಬರ್ :
2. ಕಾಲೇಜು ವಿಳಾಸ :
3. ತಾವು ಯಾವ ಲೇಖಕರ ಪುಸ್ತಕವನ್ನು ಮುಖ್ಯವಾಗಿ ಬಳಸುತ್ತಿರಿ ? ಏಕೆ ?
4. ಈ ಲೇಖಕರ ಪುಸ್ತಕವನ್ನೆ ಮುಖ್ಯವಾಗಿ ಎಷ್ಟು ವರ್ಷಗಳಿಂದ ಬಳಸುತ್ತಿದ್ದೀರಿ ?
5. ಅ) ಅದರಲ್ಲಿ ಬಳಸಿದ ಭಾಷೆ ಸರಳವಾಗಿದೆ ಎಂಬುದರಿಂದಾಗಿಯೇ ?
   ಆ) ಬೇರೆ ಪುಸ್ತಕಗಳು ದೊರೆಯುದ ಕಾರಣ ಇದನ್ನು ಬಳಸುತ್ತಿದ್ದಿರಾ ?
   ಇ) ಬೇರೆಯವರು ಉಪಯೋಗಿಸುತ್ತಿದ್ದಾರೆಂದು ನೀವು ಬಳಸುತ್ತಿದ್ದಿರಾ ?
   ಈ) ನಿಮ್ಮ ಭಾಗದ ಲೇಖಕರೆಂಬ ಕಾರಣಕ್ಕಾಗಿ ಉಪಯೋಗಿಸುತ್ತಿದ್ದರಾ ?
6. ನೀವು ಬಳಸುತ್ತಿರುವ ಪುಸ್ತಕವು ವಿಷಯಕ್ಕೆ ಸಂಬಂಧಿಸಿದಂತೆ ಪರಿಪೂರ್ಣವಾಗಿದೆಯೆ?
7. ಪೂರ್ಣವಾಗಿಲ್ಲದಿದ್ದರೇ ಇದರೊಂದಿಗೆ ಪೂರಕವಾಗಿ ಬಳಸುವ ಬೇರೆ ಪುಸ್ತಕ ಮತ್ತು ಲೇಖಕಕರು ಯಾರು ಯಾರು ?
8. ಈ ಪುಸ್ತಕವನ್ನೆ ಬಳಸಲು ಕಾರಣಗಳೇನು ?
9. ವಿಷಯ ಬೋಧನೆಯಲ್ಲಿ ತೊಂದರೆ ಉಂಟಾಗಿರುವುದೇ ? ಯಾವವು ? ವಿಷಯ ಕುರಿತ ವಿವರಣೆ ?
10. ಬಳಸಿರುವ ಭಾಷೆ ಸಂವಹನದ ದೃಷ್ಠಿಯಿಂದ ಹೇಗಿದೆ. ?
11. ಈ ವರೆಗೆ ಬಳಸುತ್ತಿದ್ದ ಭಾಷೆಯಾದ ಇಂಗ್ಲಿಷಿನಿಂದ ಕನ್ನಡ ಭಾಷೆಗೆ ಬೋಧನೆಗೆ ಬಂದುದರಿಂದ ವಿಷಯವನ್ನು ಸಮರ್ಪಕವಾಗಿ ಹೇಳಲಾಗುತ್ತಿದೆಯೇ ?
12. ತಮ್ಮ ಮುಖ್ಯ ಆಧಾರ ಪುಸ್ತಕವನ್ನು ಇಟ್ಟು ಕೊಂಡು ವಿದಾರ್ಥಿಗಳಿಗೆ ಬೊಧಿಸುತ್ತಿರುವಲ್ಲಿ ಅವರ ಪ್ರತಿಕ್ರಿಯೆ ಹೇಗಿದೆ ?
13. ನೀವು ಕನ್ನಡದ ಪುಸ್ತಕದ ಜೊತೆಗೆ ಇಂಗ್ಲಿಷ ಪುಸ್ತಕವನ್ನು ತುಲನೆಮಾಡಿ ನೋಡುತ್ತಿದ್ದಿರಾ ? ಆ ಪುಸ್ತಕದ ಲೇಖಕರು ಯಾರು ?
14. ಭಾಷಾ ವಿಷಯಗಳಿಗಿರುವಂತೆ ನಿರ್ದಿಷ್ಟ ಪಠ್ಯ ಪುಸ್ತಕ ಇಗಬೇಕೆ ?
15. ಒಂದೆ ವಿಷಯವಾದರು ಬೇರೆ ಬೇರೆ ಲೇಖಕರು ಏಕೆ ಕನ್ನಡಕ್ಕೆ ಅನುವಾದಿಸುತ್ತಾರೆ ಅಥವಾ ಬರೆಯುತ್ತಾರೆ. ?
16. ಅಧ್ಯಾಪಕರ ಸಹಿ ಮತ್ತು ದಿನಾಂಕ :

2. ಕನ್ನಡ ಮಾಧ್ಯಮದಲ್ಲಿ ರಚಿತವಾಗಿರುವ ಅರ್ಥಶಾಸ್ತ್ರ ಪುಸ್ತಕಗಳನ್ನು ಕುರಿತು ಸಂಶೋಧನಾ ಅಧ್ಯಯನಕ್ಕಾಗಿ ಆರಿಸಿಕೊಂಡಿರುತ್ತೇನೆ. ಈ ಕುರಿತಂತೆ ಪ್ರಥಮ ಮತ್ತು ದ್ವಿತೀಯ ಪಿಯುಸಿ ಓದುತ್ತಿರುವ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರಶ್ನಾವಳಿಗಳನ್ನು ರಚಿಸಲಾಗಿದೆ.

ಇದನ್ನು ಪ್ರಾದೇಶಿಕವಾರು ನೇಲೆಯಲ್ಲಿಯು ಅಧ್ಯಯನ ಮಾಡಬೇಕಾಗಿರುವದರಿಂದ ದಯಮಾಡಿ ನನ್ನ ಈ ಕೆಳಗಿನ ಕೆಲವು ಪ್ರಶ್ನೆಗಳಿಗೆ ಮುಕ್ತ ಮನಸ್ಸಿನಿಂದ ಉತ್ತರ ಬರೆದು ಕಳುಹಿಸಬೇಕಾಗಿ ಸಂಶೋಧನಾ ವಿದ್ಯಾರ್ಥಿ ಶ್ರೀ ಫಕೀರಪ್ಪ ವಜ್ರಬಂಡಿ ವಿನಂತಿಸಿಕೊಳ್ಳುತ್ತೇನೆ.

1. ವಿದ್ಯಾರ್ಥಿ / ವಿದ್ಯಾರ್ಥಿನಿಯರ ಹೆಸರು :
2. ಕಾಲೇಜು ವಿಳಾಸ :
3. ತಾವು ಯಾವ ಲೇಖಕರ ಪುಸ್ತಕವನ್ನು ಮುಖ್ಯವಾಗಿ ಬಳಸುತ್ತಿರಿ ? ಏಕೆ ?
4. ಈ ಲೇಖಕರ ಪುಸ್ತಕವನ್ನೆ ಮುಖ್ಯವಾಗಿ ಎಷ್ಟು ವರ್ಷಗಳಿಂದ ಬಳಸುತ್ತಿದ್ದೀರಿ ?
5. ಅ) ಅದರಲ್ಲಿ ಬಳಸಿದ ಭಾಷೆ ಸರಳವಾಗಿದೆ ಎಂಬುದರಿಂದಾಗಿಯೇ ?
   ಆ) ಬೇರೆ ಪುಸ್ತಕಗಳು ದೊರೆಯುದ ಕಾರಣ ಇದನ್ನು ಬಳಸುತ್ತಿದ್ದಿರಾ ?
   ಇ) ಬೇರೆಯವರು ಉಪಯೋಗಿಸುತ್ತಿದ್ದಾರೆಂದು ನೀವು ಬಳಸುತ್ತಿದ್ದಿರಾ ?
   ಈ) ನಿಮ್ಮ ಭಾಗದ ಲೇಖಕರೆಂಬ ಕಾರಣಕ್ಕಾಗಿ ಉಪಯೋಗಿಸುತ್ತಿದ್ದರಾ ?
6. ನೀವು ಬಳಸುತ್ತಿರುವ ಪುಸ್ತಕವು ವಿಷಯಕ್ಕೆ ಸಂಬಂಧಿಸಿದಂತೆ ಪರಿಪೂರ್ಣವಾಗಿದೆಯೆ?
7. ಪೂರ್ಣವಾಗಿಲ್ಲದಿದ್ದರೇ ಇದರೊಂದಿಗೆ ಪೂರಕವಾಗಿ ಬಳಸುವ ಬೇರೆ ಪುಸ್ತಕ ಮತ್ತು ಲೇಖಕಕರು ಯಾರು ಯಾರು ?
8. ಈ ಪುಸ್ತಕವನ್ನೆ ಬಳಸಲು ಕಾರಣಗಳೇನು ?
9. ವಿಷಯ ಓದಿನಲ್ಲಿ ತೊಂದರೆ ಉಂಟಾಗಿರುವುದೇ ? ಯಾವವು ? ವಿಷಯ ಕುರಿತ ವಿವರಣೆ ?
10. ಬಳಸಿರುವ ಭಾಷೆ ಓದಿನ ದೃಷ್ಟಿಯಿಂದ ಹೇಗಿದೆ. ?
11. ಕನ್ನಡ ಭಾಷೆಯಲ್ಲಿ ಪುಸ್ತಕ ಬಂದುದರಿಂದ ವಿಷಯವನ್ನು ಸಮರ್ಪಕವಾಗಿ ತಿಳಿದುಕೊಳ್ಳಲಾಗುತ್ತಿದೆಯೇ ?
12. ತಮ್ಮ ಮುಖ್ಯ ಆಧಾರ ಪುಸ್ತಕದ ಬಗ್ಗೆ ನಿಮ್ಮ ಅಭಿಪ್ರಾಯವೇನು ?
13. ನೀವು ಕನ್ನಡದ ಪುಸ್ತಕದ ಜೊತೆಗೆ ಇಂಗ್ಲಿಷ ಪುಸ್ತಕವನ್ನು ತುಲನೆಮಾಡಿ ನೋಡುತ್ತಿದ್ದಿರಾ ? ಆ ಪುಸ್ತಕದ ಲೇಖಕರು ಯಾರು ?
14. ಭಾಷಾ ವಿಷಯಗಳಿಗಿರುವಂತೆ ನಿರ್ದಿಷ್ಟ ಪಠ್ಯ ಪುಸ್ತಕ ಇರಬೇಕೆ ?
15. ಒಂದೆ ವಿಷಯವಾದರು ಬೇರೆ ಬೇರೆ ಲೇಖಕರು ಏಕೆ ಕನ್ನಡಕ್ಕೆ ಅನುವಾದಿಸುತ್ತಾರೆ ಅಥವಾ ಬರೆಯುತ್ತಾರೆ ?
16. ವಿದ್ಯಾರ್ಥಿ / ವಿದ್ಯಾರ್ಥಿನಿಯರ ಸಹಿ ಮತ್ತು ದಿನಾಂಕ :

ಈ ಮೇಲಿನ ಪ್ರಶ್ನಾವಳಿಗಳನ್ನು ಬಳಸಿಕೊಂದು ಉಪನ್ಯಾಸಕರ ಮತ್ತು ವಿದ್ಯಾರ್ಥಿಗಳಿಂದ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ.

# ಅಧ್ಯಾಯ ಮೂರು

# ಕನ್ನಡ ಅರ್ಥಶಾಸ್ತ್ರದ ಪಠ್ಯಪುಸ್ತಕಗಳ ಸಮೀಕ್ಷೆ

# 3. ಕನ್ನಡ ಕೃತಿಗಳ ಸಮೀಕ್ಷೆ

ಪದವಿ ಪೂರ್ವ ಶಿಕ್ಷಣ ಇಲಾಖೆಯು ಗೊತ್ತುಪಡಿಸಿದ (ನಿರ್ದಿಷ್ಟ ಪಡಿಸಿದ) ಪಿ.ಯು.ಸಿ ಪ್ರಥಮ ಮತ್ತು ದ್ವಿತೀಯ ವರ್ಷದ ಅರ್ಥಶಾಸ್ತ್ರ ಹೊಸ ವಿಷಯದ ಪಠ್ಯಕ್ರಮವನ್ನು ಅನುಸರಿಸಿ ಕನ್ನಡ ಮಾಧ್ಯಮದಲ್ಲಿ ಅನೇಕ ಪಠ್ಯಪುಸ್ತಕಗಳು ಪ್ರಕಟವಾಗುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಅಧರಿಸಿ ಅಧ್ಯಯನ ಮಾಡಲಾಗಿದೆ. ಪ್ರಕಟಿತ ಕೃತಿಗಳು ಈ ಕೆಳಗಿನಂತಿವೆ.

| ಕ್ರಸಂ | ಪುಸ್ತಕದ ಹೆಸರು | ಲೇಖಕರು/ಸಂಪಾದಕರು |
|---|---|---|
| 1 | ಅರ್ಥಶಾಸ್ತ್ರ | ಸಂ.ಡಾ. ಸಿ.ಕೆ.ರೇಣುಕಾರ್ಯ |
| 2 | ಅರ್ಥಶಾಸ್ತ್ರ | ಸಂ.ಡಾ. ಸಿ.ಕೆ.ರೇಣುಕಾರ್ಯ |
| 3 | ಭಾರತದ ಆರ್ಥಿಕ ಅಭಿವೃದ್ಧಿ | ಕೆ.ಡಿ.ಬಸವಾ |
| 4 | ಭಾರತದ ಆರ್ಥಿಕ ಅಭಿವೃದ್ಧಿ | ಆರ್.ರಾಮಕೃಷ್ಣಯ್ಯ |
| 5 | ಅರ್ಥಶಾಸ್ತ್ರದ ಮೂಲ ಅಂಶಗಳು | ಆರ್.ರಾಮಕೃಷ್ಣಯ್ಯ |
| 6 | ಭಾರತದ ಆರ್ಥಿಕ ಅಭಿವೃದ್ಧಿ | ಅನು-ಪಾರ್ಶ್ವನಾಥ ಅಜ್ರಿ |
| 7 | ಮೂಲ ಆರ್ಥಿಕ ಸಿದ್ಧಾಂತ | ಹೆಚ್.ಆರ್. ಕೃಷ್ಣಮೂರ್ತಿ |
| 8 | ಭಾರತದ ಆರ್ಥಿಕ ಅಭಿವೃದ್ಧಿ | ಹೆಚ್.ಆರ್.ಕೃಷ್ಣಮೂರ್ತಿ |
| 9 | ಭಾರತದ ಆರ್ಥಿಕ ಅಭಿವೃದ್ಧಿ | ಹೆಚ್.ಆರ್.ಕೃಷ್ಣಯ್ಯಗೌಡ |
| 10 | ಭಾರತದ ಆರ್ಥಿಕ ಅಭಿವೃದ್ಧಿ | ಹೊನಕೇರಿ ಮತ್ತು ಸಂಗಡಿಗರು |
| 11 | ಭಾರತದ ಆರ್ಥಿಕ ಅಭಿವೃದ್ಧಿ | ಜಿ.ಎನ್.ಕೆಂಪಯ್ಯ |
| 12 | ಅರ್ಥಶಾಸ್ತ್ರದ ಪರಿಚಯ | ಎನ್.ಕೆ.ಗೌಡ |
| 13 | ಆರ್ಥಿಕಾಭಿವೃದ್ಧಿ ಪಥದಲ್ಲಿ ಭಾರತ | ಎನ್.ಕೆ.ಗೌಡ |
| 14 | Economic Development of Indai | R.Ramkrishnaiah |
| 15 | Elements of Indain Economic | H.R. Krishnamurthy |
| 16 | Economic Development of Indai | B.S. Raman |

| | | |
|---|---|---|
| 17 | Economics | B.S. Raman |
| 18 | BASIC ECONOMIC THEORY | Mithani & Others |

ಇನ್ನೂ ಅನೇಕ ಪಠ್ಯಪುಸ್ತಕಗಳು ಪ್ರಕಟವಾಗಿರುವುದು ತಿಳಿದು ಬರುತ್ತದೆ. ಆದರೆ ಅವುಗಳು ಲಭ್ಯವಾಗಿರುವುದಿಲ್ಲ.

ಕೃತಿಗಳಲ್ಲಿನ ಇಂಗ್ಲಿಷ ಮತ್ತು ಕನ್ನಡ ಪಠ್ಯಕ್ರಮಗಳ (Syllebus) ವಿವರವು ಈ ಕೆಳಗಿನಂತಿದೆ

**" TOPIC 1 - INTRODUCTION** (16 hours)

Objectives

To introduce (a) basic concepts, which are most frequently used in the study of Indian economic development, (b) elementary statistical methods and highlight thier usefulness for secondary data descriptions, (c) structure of india`s national income and (d) framework of India`s national economic reforms since july 1991

**Sub- topics**

**1.1 BASIC CONCEPTS AND INDICATORS OF DEVELOPMENT** (6 Hours)

Concept of economic growth and economic development - Essential difference/s between growth and development - Definition of sustainable development in relation to ecology and environment.

Classification of countries : High, middle and low income coutries, as per the world Development Report.

Characterstics of development and developing countries including India in terms of differential growth and levels of economic and demographic indicators.

Difinition and components of physical Quality of life Index (PQLI), Human Development Idex (HDI) and standard of living

Index (SOLI).

**1.2 TYPES AND DESCRIPTION OF DATA** ( 4 hours)

Types of economic data : Primary and secondary data - cross section and time series data - survey and census data.

Description of data - construction of table, graps, pie and bar diagrams - computation of annual growth (%)

**1.3 GROWTH OF NATIONAL INCOME** (3 hours)

Growth of total national income (GDP) - Growth and composition of primary, secondary and tertiary sectors - Growth of per capita income.

1.4 INTRODUCTION TO ECONOMIC REFORMS (3 hours)

National economic reforms since july, 1991 - stabilisation and structural adjustment programmes - Main sectors of reforms : Fiscal, industrial, financial, public and external sectors.

**1.5 PROJECTS AND ASSIGNMENTS**

1.5.1 Demonstration of usefulness of descriptive statisical meth ods by constructing computational indices and exerises.

1.5.2 Measurement aspects of PQLI, SOLI and HDI, using simple numerical examples.

1.5.3 Application of descriptive statistical methods for national income data.

**TOPIC 2 - HUMAN RESOURCE DEVELOPMENT** (11hours)

Objectives

To introduce growth, composition and control of size of population, and the relationship between poverty and unemployment, and between health and educaion, in economic development.

**Sub - topics** (5 hours)

**2.1 POPULATION**

Total size of population - Decadal growth of population - com-

position of population : Age, Sex and rural-urban composition - Density. Occupational distrubution of population : Distribution of population by primary, secondary and tertiary sectors.

Measures to control population growth - Family wellfare Programme : Objectives and measures of maternal and child health services and birth control measures - national population policy 2002 : Objective and targets

**2.2 POVERTY AND UNEMPLOYMENT** (3 hours)

Definition of poverty line as per the planning commision - Total number pepole below the poverty line in rural and urban areas Meaning of unemployment - Types of unemployment : Open and disguised unemployment - Usual status, weekly status and daily status of unemployment, as per the definition of national sample survey organiszation. Programmes for employment generation and poverty alleviation.

**2.3. HEALTH AND EDUCATION** (3 Hours)

Importance of health and education as forms of social infrastructure.

Indicators of health and education status : Literacy rate by male and female and rural - urban categories - Life expectancy - Crude birth and death rates - infant moratality rate.

**2.4 PROJECTS AND ASSIGNMENTS**

2.4.1 Preparation of charts on population growth and composi tion.

2.4.2 Arrange awareness programme for student on child and maternal health services.

2.4.3 Arrange orientation programme for students on highrs education, wage and self-employment opportunitis for Arts & Commerce students, after the comletion of PUC.

**TOPIC 3 - AGRICULTUE** (10 hours)

To introduce the pattern of land use, importance and types of irrigation, food problem and mechanism for food security, and application of science and technology in agriculture.

**Sub - topics**

**3.1 LAND USE** (2 hours)

Meaning of land use - Major patterns of land use disnction between cropped and net sown area.

Meaning of soil erosion - Causes and effect of soil eroion measures for soil conservation.

**3.2 IRRIGATION** (4 hours)

Meaning of minor irrigation, medium irrigation, major irrigation and multipurpose irrigaion - Meaning and extent of dryland farming - Meaning of and need for conservation of water resources measures for water conservation : Drip irrigation and sprinkler irrigation - measures for watershed management : Rain - water harvesting, and desilting of tanks and wells

**3.3 FOOD PROBLEM** (2 hours)

Nature of food problem - Total food production and per capita food availiabality and consumption - Ensuring access to food throgh food security measures : Meaning and working of public distribution system for foodgrains.

**3.4 APPLICATION OF SCIENCE AND TECHNOLOGY**

(2 Hours)

Application of Science and technology : Pre harvest technology _ Green revolution - post harvest technology - Warehousing, markenting and cold storage facilities

Other applications : Meaning of Blue, White and Yellow revolution.

**3.5 PROJECTS AND ASSIGNMENTS**

3.5.1 Location of major and multi - purpose irrigation projects,

and area under dry land farming.

3.5.2 Visit to local irrigation project.

3.5.3 Visit to local fair price shop to understand the working of public distribution system.

3.5.4 Visit to a farm where science and technology in applied. " [1]

ಈ ಮೇಲಿನ ಪಠ್ಯಕ್ರಮವು ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರು ನಿಗದಿ ಪಡಿಸಿದ ಪಠ್ಯಕ್ರಮದ ಒಂದು ಭಾಗವಾಗಿದೆ ಅನೇಕ ಅನುವಾದಕರು ಅದನ್ನೇ ಯಥಾವತ್ತಾಗಿ ಬಳಸಿಕೊಂಡಿರುತ್ತಾರೆ ಹಾಗೂ ಕನ್ನಡದಲ್ಲಿ ಈ ಕೆಳಗಿನಂತೆ ಅನುವಾದಿಸಿರುತ್ತಾರೆ.

**" ಅಧ್ಯಾಯ –1 ಪ್ರಸ್ತಾವನೆ**

**1.1 ಅಭಿವೃದ್ಧಿಯ ಮೂಲ ಪರಿಕಲ್ಪನೆಗಳು ಮತ್ತು ಸೂಚಕಗಳು**

1.1.1 ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿ

1.1.2 ಅವಿಶ್ರಾಂತ ಅಭಿವೃದ್ಧಿ

1.1.3 ವಿಶ್ವ ಅಭಿವೃದ್ಧಿ ವರದಿ ಪ್ರಕಾರ ದೇಶಗಳ ವರ್ಗೀಕರಣ

1.1.4 ಅಭಿವೃದ್ಧಿ ಹೊಂದಿದ ರಾಷ್ಟ್ರಗಳು

1.1.5 ಅಭಿವೃದ್ಧಿಶೀಲ ರಾಷ್ಟ್ರಗಳು

1.1.6 ಭಾರತದ ಆರ್ಥಿಕ ವ್ಯವಸ್ಥೆಯ ಲಕ್ಷಣಗಳು

1.1.7 PQLI, HDI ಮತ್ತು SOLI

**1.2 ದತ್ತಾಂಶಗಳ ವಿಧಗಳು ಮತ್ತು ನಿರೂಪಣೆ**

1.2.1 ಆರ್ಥಿಕ ದತ್ತಾಂಶಗಳ ಪ್ರಕಾರಗಳು

1. ಪ್ರಾಥಮಿಕ ದತ್ತಾಂಶ
2. ಮಾಧ್ಯಮಿಕ ದತ್ತಾಂಶ

1.2.2 ದತ್ತಾಂಶಗಳ ನಿರೂಪಣೆ

1. ಕೋಷ್ಟಕ
2. ನಕ್ಷೆ ಮತ್ತು ರೇಖಾ ಚಿತ್ರಗಳು

**1.3 ರಾಷ್ಟ್ರೀಯ ಆದಾಯದ ಬೆಳವಣಿಗೆ**

1.3.1 ಒಟ್ಟು ದೇಶೀಯ ಉತ್ಪನ್ನದ ಬೆಳವಣಿಗೆ

1.3.2 ಒಟ್ಟು ದೇಶಿಯ ಉತ್ಪನ್ನದ ವಲಯವಾರು ಬೆಳವಣಿಗೆ ಮತ್ತು ಸಂಯೋಜನೆ

1.3.3 ತಲಾ ಆದಾಯದ ಬೆಳವಣಿಗೆ

**3.2. ನೀರಾವರಿ**

3.2.1 ಒಣಭೂಮಿ ಬೇಸಾಯ

3.2.2 ಜಲಸಂಪನ್ಮೂಲಗಳ ಸಂರಕ್ಷಣೆ

3.2.3 ಜಲಾನಯನ ನಿರ್ವಹಣೆ

3.2.4 ಮಳೆ ಕೊಯ್ಲು

**3.3 ಆಹಾರ ಸಮಸ್ಯೆ**

3.3.1 ಸಾರ್ವಜನಿಕ ವಿತರಣಾ ವ್ಯವಸ್ಥೆ

**3.4 ಕೃಷಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಬಳಕೆ**

1. ಸುಗ್ಗಿ ಪೂರ್ವ ತಂತ್ರಜ್ಞಾನ
2. ಸುಗ್ಗಿಯ ನಂತರದ ತಂತ್ರಜ್ಞಾನ

3.4.1 ಶ್ವೇತ, ನೀಲಿ ಮತ್ತು ಹಳದಿ ಕ್ರಾಂತಿ.

ಯೋಜನೆ ಮತ್ತು ಕಾರ್ಯಭಾರಗಳು

ನೆನಪಿಡಬೇಕಾದ ಮುಖ್ಯ ಅಂಶಗಳು

ಮಾದರಿ ಪ್ರಶ್ನೆಗಳು "[2]

ಈ ಮೇಲಿನ ಅನುವಾದ ಪಠ್ಯಕ್ರಮದ ಒಂದು ಭಾಗವಾಗಿರುತ್ತದೆ. ಇಂಗ್ಲಿಷ ಮತ್ತು ಕನ್ನಡದ ಪಠ್ಯಕ್ರಮಕ್ಕೆ ಹೋಲಿಕೆ ಮಾಡಿ ನೋಡಿದಾಗ ಅಲ್ಲಲ್ಲಿ ವ್ಯತ್ಯಾಸವಾಗಿರುವದು ಕಂಡು ಬರುತ್ತದೆ.

**" ಅಧ್ಯಾಯ ೧ – ಪ್ರಸ್ತಾವನೆ**

**೧.೧ ಮೂಲ ಪರಿಕಲ್ಪನೆಗಳು ಮತ್ತು ಅಭಿವೃದ್ಧಿ ಸೂಚಿಗಳು** ( ೬ ಗಂಟೆ)

ಆರ್ಥಿಕ ಬೆಳವಣಿಗೆ, ಆರ್ಥಿಕ ಅಭಿವೃದ್ಧಿ ನಡುವೆ ಮೂಲಭೂತ ವ್ಯತ್ಯಾಸಗಳು, ಜೈವಿಕ ಪರಿಸರಕ್ಕೆ ಸಂಬಂಧಿಸಿದಂತೆ ಸುಸ್ಥಿರಗತಿಯ ಅಭಿವೃದ್ಧಿ. ರಾಷ್ಟ್ರಗಳ ವರ್ಗೀಕರಣ. ಅಭಿವೃದ್ಧಿ ಹೊಂದಿದ ಆರ್ಥಿಕತೆಗಳಲ್ಲಿ ಕಂಡು ಬರುವ ಪ್ರಮುಖ ಲಕ್ಷಣಗಳು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿ ಭಾರತ. ಆರ್ಥಿಕತೆಯ ಲಕ್ಷಣಗಳು. ಜೀವನದ ಭೌತಿಕ ಗುಣಮಟ್ಟ ಸೂಚಿ, ಮಾನವ ಅಭಿವೃದ್ಧಿ ಸೂಚಿ ಮತ್ತು ಜೀವನ ಮಟ್ಟ ಸೂಚಿ.

**೧.೨ ಸಂಖ್ಯಾ ಮಾಹಿತಿ ವಿಧಗಳು ಮತ್ತು ಅಂಕಿ ಸಂಖ್ಯೆಗಳ ವಿವರಣೆ** ( ೪ ಗಂಟೆ)

ಅಂಕಿಅಂಶ ಮಾಹಿತಿಯ ಬಗೆಗಳು ಮತ್ತು ಸಂಖ್ಯಾ ಮಾಹಿತಿಯ ವಿವರಣೆ. ಸಮಯ ಸಂಖ್ಯಾ ಶ್ರೇಣಿ ನಿಶ್ಚಿತ ಅವಧಿಯ ಸಂಖ್ಯಾ ಶ್ರೇಣಿ ಮತ್ತು ಪುನರ್ ಪರೀಶೀಲನಾ ಸಂಖ್ಯಾ ಶ್ರೇಣಿ ಅಂಕಿ ಅಂಶಗಳ ಸಂಗ್ರಹಣಾ ಕ್ರಮ. ಪ್ರಾಥಮಿಕ ಮೂಲದಿಂದ ಅಂಕಿ ಅಂಶ ಸಂಗ್ರಹಣಾ ವಿಧಾನ ಪರಿಷ್ಕರಣ ವರ್ಗೀಕರಣ ಸಂಖ್ಯಾ ಮಾಹಿತಿಯ ನಕ್ಷಾ ನಿರೂಪಣೆ, ಆರ್ಥಿಕ ಬೆಳವಣಿಗೆಯ

ಲೆಖ್ವಾಚಾರ

**೧.೩ ರಾಷ್ಟ್ರೀಯ ವರಮಾನದ ಬೆಳವಣಿಗೆ** ( ೩ ಗಂಟೆ)

ಒಟ್ಟು ದೇಶಿಯ ಉತ್ಪನ್ನದ ಬೆಳವಣಿಗೆ, ಉತ್ಪಾದನಾಂಗ ಬೆಲೆಯಲ್ಲಿ ಒಟ್ಟು ದೇಶಿಯ ಉತ್ಪನ್ನದ ಪ್ರವೃತ್ತಿ. ಒಟ್ಟು ದೇಶಿಯ ಉತ್ಪನ್ನದಲ್ಲಿ ವಿವಿಧ ವಲಯಗಳ ಪಾಲು ಮತ್ತು ಸಂಯೋಜನೆ. ತಲಾ ಆದಾಯದ ಬೆಳವಣಿಗೆ.

**೧.೪ ಆರ್ಥಿಕ ಸುಧಾರಣೆಗಳು : ಒಂದು ಪ್ರವೇಶ** ( ೩ ಗಂಟೆ)

ಸ್ಥಿರೀಕರಣ ಮತ್ತು ರಚನಾತ್ಮಕ ಹೊಂದಾಣಿಕೆಗಳ ಕಾರ್ಯಕ್ರಮಗಳು. ದೇಶಿಯ ಸುಧಾರಣೆಗಳು. ಕೈಗಾರಿಕಾ ವಲಯದ ಸುಧಾರಣೆಗಳು, ಹಣಕಾಸು ವಲಯದ ಸುಧಾರಣೆಗಳು ಸಾರ್ವಜನಿಕ ವಲಯದ ಸುಧಾರಣೆಗಳು, ಬಾಹ್ಯವಲಯದ ಸುಧಾರಣೆಗಳು,

**ಅಧ್ಯಾಯ ೨ : ಮಾನವ ಸಂಪನ್ಮೂಲ ಅಭಿವೃದ್ಧಿ** (೧೧ ಗಂಟೆ)

**೨.೧ ಜನಸಂಖ್ಯೆ** (೫ ಗಂಟೆ)

ಒಟ್ಟು ಜನಸಂಖ್ಯೆ ಗಾತ್ರ, ಜನಸಂಖ್ಯೆಯ ಬೆಳವಣಿಗೆ, ಜನಸಂಖ್ಯಾ ರಚನೆ, ವಯಸ್ಸು, ಲಿಂಗ ಮತ್ತು ಗ್ರಾಮೀಣ ನಗರ ಜನಸಂಖ್ಯಾ ರಚನೆ, ಜನಸಂದ್ರಾತೆ, ಉದ್ಯೋಗ ಆಧಾರಿತ ಜನಸಂಖ್ಯೆ ವಿಶ್ಲೇಷಣೆ, ಪ್ರಾಥಮಿಕ, ದ್ವಿತೀಯ, ತೃತೀಯ ವಲಯಗಳಲ್ಲಿ ಜನಸಂಖ್ಯಾ ಹಂಚಿಕೆ.

ಜನಸಂಖ್ಯೆ ಬೆಳವಣಿಗೆಯ ನಿಯಂತ್ರಣ ಕ್ರಮಗಳು, ಕುಟುಂಬ ಕಲ್ಯಾಣ ಕಾರ್ಯಕ್ರಮ, ಉದ್ದೇಶಗಳು, ಮಾತೃತ್ವ ಹಾಗೂ ಶಿಶು ಆರೋಗ್ಯ ಸೇವೆಗಳ ಕ್ರಮಗಳು ಮತ್ತು ಜನನ ನಿಯಂತ್ರಣ ಕ್ರಮಗಳು, ರಾಷ್ಟ್ರೀಯ ಜನಸಂಖ್ಯಾ ರೀತಿ ೨೦೦೨ ಉದ್ದೇಶ ಮತ್ತು ಗುರಿಗಳು.

**೨.೨ ಬಡತನ ಮತ್ತು ನಿರುದ್ಯೋಗ** (೩ ಗಂಟೆ)

ಯೋಜನಾ ಆಯೋಗದ ಬಡತನ ರೇಖೆಯ ವ್ಯಾಖ್ಯಾನ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಬಡತನದ ರೇಖೆಯ ಕೆಳಗಿರುವ ಒಟ್ಟು ಜನಸಂಖ್ಯೆ, ನಿರುದ್ಯೋಗ ಅರ್ಥ, ನಿರುದ್ಯೋಗದ ವಿಧಗಳು, ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಘಟನೆ, ವ್ಯಾಖ್ಯಾನದಂತೆ ತೆರೆದ ಮತ್ತು ಮರೆ ಮಾಡಿದ ನಿರುದ್ಯೋಗ ರೂಢಿಗತ, ವಾರದ ಸ್ಥಿತಿಯ ಮತ್ತ ದೈನಂದಿನ ಸ್ಥಿತಿ ನಿರುದ್ಯೋಗ ಬಡತನ, ಬಡತನ ನಿವಾರಣೆ ಮತ್ತು ಉದ್ಯೋಗ ಸೃಷ್ಟಿ ಕಾರ್ಯಗಳು.

**೨.೩ ಆರೋಗ್ಯ ಮತ್ತು ಶಿಕ್ಷಣ** (೩ ಗಂಟೆ)

ಸಾಮಾಜಿಕ ಮೂಲಭೂತ ಸೌಕರ್ಯವಾಗಿ ಆರೋಗ್ಯ ಮತ್ತು ಶಿಕ್ಷಣದ ಮಹತ್ವ, ಮತ್ತು ಶಿಕ್ಷಣ ಸ್ಥಿತಿಯು ಸೂಚಕಗಳು, ಸ್ತ್ರೀ ಮತ್ತು ಪುರುಷ ಸಾಕ್ಷರತೆ ಪ್ರಮಾಣ ಮತ್ತು ಗ್ರಾಮೀಣ ನಗರ ವಿಧಿಗಳು, ಜೀವಿತಾವಧಿ, ಕಚ್ಚಾ ಜನಪದ ಮತ್ತು ಮರಣದ ಶಿಶು ಮರಣ ದರ. "[೩]

ಈ ಮೇಲಿನ ಪಠ್ಯಕ್ರಮವನ್ನು ಅನುವಾದಕರು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ ಕನ್ನಡ ಪದಗಳು ಸರಿಯಾಗಿರುವಂತೆ ಕಂಡು ಬರುತ್ತದೆ.

ಒಟ್ಟಾರೆ ದ್ವಿತೀಯ ಪಿಯುಸಿ ಪಠ್ಯಕ್ರಮವು, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರು ಗೊತ್ತು ಪಡಿಸಿದ ಪಠ್ಯಕ್ರಮದಂತೆ ಈ ಮೇಲೆ ತೋರಿಸಿದ ಕೆಲವು ಅಧ್ಯಾಯಗಳ ಪಠ್ಯಕ್ರಮಗಳನ್ನು ನೋಡಬಹುದಾಗಿದೆ. ಅನುವಾದಕರು ತಮ್ಮ ಅನುವಾದದ ಜೊತೆಯಲ್ಲಿಯೆ ಪಠ್ಯಕ್ಕೆ ಸಂಬಂಧಿಸಿದಂತೆ ಪೂರಕ ಮಾಹಿತಿಗಳನ್ನು ವಿವಿಧ ಮೂಲಗಳಿಂದ ಪಡೆದುಕೊಂಡು ಅದಕ್ಕೆ ಸಂಬಂಧಿಸಿದ ವಿವರಣೆಯನ್ನು ತಮ್ಮದೆ ಆದ ಶೈಲಿ ಮತ್ತು ವಿಧಾನಗಳ ಮೂಲಕ ಅನುವಾದ ಕಾರ್ಯವನ್ನು ಮಾಡಿರುತ್ತಾರೆ. ಆದರೆ ಅನೇಕ ಅನುವಾದಕರು ಅನುವಾದ ಕಾರ್ಯ ಕೈಗೊಂಡ ಸಂದರ್ಭದಲ್ಲಿ ಅಗತ್ಯ ಮಾಹಿತಿಗಿಂತ ಅಧಿಕ ಮಾಹಿತಿಯನ್ನು ಸೇರ್ಪಡೆ ಮಾಡಿರುವುದು ಕೃತಿಗಳ ಅಧ್ಯಯನದಿಂದ ತಿಳಿದು ಬಂದಿದೆ.

" **TOPIC 1 - INTRODUCTION** (18 hours)

Objective

To introduce the approches to economics and basic mathematical concepts used in introductory economic theory.

**Sub - topics**

**1.1 DEFINATION OF ECONOMICs** (3 hours)

Definition of economics - Wealth, welfare and scarcity approaches

**1.2 BASIC PROBLEMS OF AN ECONOMY** (2 hours)

Meaning of an economy in terms of economic activities - Basic problems of an economy - Allocation of resources for competing needs

**1.3 APPROACHES TO ECONOMIC THEORY** (5 hours)

Definition and pupose of economic theory - Approaches to economic theory : Micro and macro economics - Descriptive/Positive and Prescriptive/nomative economics - Static and dynamic analysis - Partial and general equilibrium

**1.4 ELEMENTARY MATHEMATICAL TECHNIQUES** (8 hours)

Nuber system _ Integers, fractions and rational number

Functions - Formulation of a liner function - Variables and con-

stants : Dependent /endogenous and indepndent/ endogenous and independent / exogenous variabls - - Parameters / constants, Graph of a ilnear equation - Formulation of a quadratic function and graph of a quadratic equation
Concept of derivative : Rules of differentiation - Slope of a linear function" [4]

ಪ್ರಥಮ ಪಿಯುಸಿ ತರಗತಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರು ನಿರ್ದಿಷ್ಟ ಪಡಿಸಿದ ಪಠ್ಯಕ್ರಮದ ಒಂದು ಭಾಗವಾಗಿದೆ. ಇದು ಅನುವಾದಕರಿಂದ ಬಳಸಿಕೊಳ್ಳಲ್ಪಟ್ಟಿದೆ ಮತ್ತು ಕನಡದಲ್ಲಿ ಈ ಕೆಳಗಿನಂತೆ ಮೂಡಿ ಬಂದಿದೆ.

**" ಅಧ್ಯಾಯ 1 ಪ್ರಸ್ತಾವನೆ**

**ಉದ್ದೇಶ :**

ಅರ್ಥಶಾಸ್ತ್ರದ ಅಧ್ಯಯನದ ಮಾರ್ಗಗಳು ಮತ್ತು ಅರ್ಥಶಾಸ್ತ್ರದಲ್ಲಿ ಬಳಸಲಾಗುವ ಮೂಲಭೂತ ಗಣಿತಶಾಸ್ತ್ರದ ಪರಿಚಯ ಮಾಡುವುದು.

**ಉಪಅಧ್ಯಾಯಗಳು :**

**1.1 ಅರ್ಥಶಾಸ್ತ್ರದ ವ್ಯಾಖ್ಯೆ :** (3 ಗಂಟೆಗಳು)

ಅರ್ಥಶಾಸ್ತ್ರದ ವ್ಯಾಖ್ಯೆ – ಸಂಪತ್ತು, ಕ್ಷೇಮಾಭ್ಯುದಯ ಮತ್ತು ವಿರಳತೆಯ ವ್ಯಾಖ್ಯೆಗಳು

**1.2 ಒಂದು ಅರ್ಥವ್ಯವಸ್ಥೆಯ ಮೂಲಭೂತ ಸಮಸ್ಯೆಗಳು** (2 ಗಂಟೆಗಳು)

ಆರ್ಥಿಕ ಚಟುವಟಿಕೆಗಳ ರೂಪದಲ್ಲಿ ಒಂದು ಅರ್ಥವ್ಯವಸ್ಥೆಯ ಅರ್ಥ. ಒಂದು ಅರ್ಥವ್ಯವಸ್ಥೆಯ ಮೂಲಭೂತ ಸಮಸ್ಯೆಗಳು – ಸಂಪನ್ಮೂಲಗಳನ್ನು ಪೈಪೋಟಿ ನೀಡುವ ಅವಶ್ಯಕತೆಗಳ ನಡುವೆ ಹಂಚಿಕೆ.

**1.3 ಆರ್ಥಿಕ ತತ್ವಗಳ ಅಧ್ಯಯನ ಮಾರ್ಗಗಳು** ( 5 ಗಂಟೆಗಳು)

ಆರ್ಥಿಕ ತತ್ವಗಳ ವ್ಯಾಖ್ಯೆ ಮತ್ತು ಉದ್ದೇಶ – ಅಧ್ಯಯನ ಮಾರ್ಗಗಳು : ಸ್ಥೂಲ ಮತ್ತು ಸೂಕ್ಷ್ಮ ಅರ್ಥಶಾಸ್ತ್ರಗಳು – ವಿಶ್ಲೇಷಣಾತ್ಮಕ ಮತ್ತು ನೀತಿ ಭೋದತ್ಮಾಕ ಸಮತೋಲನ.

**1.4 ಮೂಲಭೂತ ಗಣಿತ ಶಾಸ್ತ್ರದ ತಂತ್ರಗಳು** (8 ಗಂಟೆಗಳು)

ಸಂಖ್ಯಾ ಪದ್ಧತಿ – ಪೂರ್ಣಾಂಕಗಳು, ಭಿನ್ನಾರಾಶಿಗಳು ಮತ್ತು ಅಕರಣೀಯ ಸಂಖ್ಯೆಗಳು, ಉತ್ಪನ್ನ ಫಲಗಳು – ರೇಖಾತ್ಮಕ ಕಾರ್ಯಕ್ರಮದ ರೂಪಣೆ, ಚಲಕಗಳು ಮತ್ತು ಸ್ಥಿರಸಂಖ್ಯೆಗಳು, ಅವಲಂಬಿ/ಬರ್ಹಿವರ್ದಿ ಮತ್ತು ಅಂತರ್ವರ್ಧಿ ಚಲಕಗಳು / ಪರಾಮಿತಿಗಳು / ಸ್ಥಿರ ಸಂಖ್ಯೆಗಳು ರೇಖಾತ್ಮಕ ಸಮೀಕರಣದ ನಕಾಶೆ – ವರ್ಗಮೂಲ ಉತ್ಪನ್ನ ಫಲಗಳ ರಚನೆ ಮತ್ತು ವರ್ಗಮೂಲ ಸಮೀಕರಣದ ನಕಾಶೆ.

1.5 **ವ್ಯುತ್ಪನ್ನಗಳ ಪರಿಕಲ್ಪನೆ :** ಅನುಸರಣೆಯ ನಿಯಮ – ರೇಖಾತ್ಮಕ ಉತ್ಪನ್ನದ ಇಳಕಲು

1.5.1 ಸಂಖ್ಯಾ ಉದಾಹರಣೆಯನ್ನು ಬಳಸಿ ಒಂದು ರೇಖಾತ್ಮಕ ಸಮೀಕರಣವನ್ನು ನಕಾಶೆಯಲ್ಲಿ ತೋರಿಸುವುದು

1.5.2 ಸಂಖ್ಯಾ ದೃಷ್ಟಾಂತಗಳು "[5]

ಈ ಮೇಲಿನ ಪಠ್ಯಕ್ರಮವನ್ನು ಅನುವಾದಿಸಿದವರೇ ಇಂಗ್ಲಿಷ ಕೃತಿಯನ್ನು ಕನ್ನಡದಲ್ಲಿ ರಚಿಸಿರುತ್ತಾರೆ. ಕನ್ನಡಕ್ಕೆ ಅನುವಾದಿಸಿದ ಪಠ್ಯಕ್ರಮದಲ್ಲಿ ಅನೇಕ ಪದಗಳು ಕನ್ನಡದಲ್ಲಿ ಸರಳ ಮತ್ತು ಪರಿಣಾಮಕಾರಿಯಾಗಿ ಬಳಕೆಯಾಗಿರುವುದು ಹೆಚ್ಚು ಮಹತ್ವ ಪಡೆದಿವೆ.

" **ಅಧ್ಯಾಯ – 1 ಪ್ರಸ್ತಾವನೆ.**

**1.1 ಅರ್ಥಶಾಸ್ತ್ರದ ವ್ಯಾಖ್ಯೆಗಳು**

ಸಂಪತ್ತಿನ, ಕಲ್ಯಾಣದ ಮತ್ತು ಕೊರತೆ ವ್ಯಾಖ್ಯೆಗಳು ( 3 ಗಂಟೆಗಳು)

**1.2 ಆರ್ಥಿಕತೆಯ ಅರ್ಥ ಮತ್ತು ಮೂಲ ಸಮಸ್ಯೆಗಳು**

ಆರ್ಥಿಕ ಚಟುವಟಿಕೆಗಳ ರೂಪದಲ್ಲಿ ಆರ್ಥಿಕತೆಯ ಅರ್ಥ – ಆರ್ಥಿಕೆಯ ಮೂಲ ಸಮಸ್ಯೆಗಳು – ಸ್ಪರ್ಧಾತ್ಮಕ ಅವಶ್ಯಕತೆಗಳಿಗೆ ಸಂಪನ್ಮೂಲಗಳ ನಿಯುಕ್ತಿ – ( 2ಗಂಟೆಗಳು)

**1.3 ಅರ್ಥಶಾಸ್ತ್ರದ ವಿಶ್ಲೇಷಣಾ ಪಥಗಳು**

ಆರ್ಥಿಕ ಸಿದ್ಧಾಂತದ ವ್ಯಾಖ್ಯೆ ಮತ್ತು ಉದ್ದೇಶ – ವಿಶ್ಲೇಷಣಾ ಪಥಗಳು – ವ್ಯಷ್ಟಿ ಮತ್ತು ಸಮಸಷ್ಟಿ ಅರ್ಥಶಾಸ್ತ್ರ – ವಾಸ್ತವಿಕ / ವಿವರಣಾತ್ಮಕ ಮತ್ತು ಪ್ರಮಾಣಕ / ವಿಧಾಯಕ ಅರ್ಥಶಾಸ್ತ್ರ ಸ್ಥಿರಾತ್ಮಕ ಮತ್ತು ಚಲನಾತ್ಮಕ ವಿಶ್ಲೇಷಣೆ ಭಾಗಶಃ ಮತ್ತು ಸಾರ್ವತ್ರಿಕ ಸಮತೋಲನಾ (5 ಗಂಟೆಗಳು)

**1.4 ಗಣಿತದ ಪ್ರಾಥಮಿಕ ಪರಿಕಲ್ಪನೆಗಳು**

ಸಂಖ್ಯಾ ಪದ್ಧತಿ : ಪೂರ್ಣಾಂಕ, ಭಿನ್ನಾರಾಶಿ ಮತ್ತು ವೈಚಾರಿಕ ಸಂಖ್ಯೆಗಳು – ಸ್ಥಿರ ಮತ್ತು ಚರ ಪರಿಮಾಣಗಳು – ಸ್ವತಂತ್ರ / ಬಾಹ್ಯ ಅವಲಂಬಿ / ಆಂತರಿಕ ಚರ ಪರಿಮಾಣುಗಳು – ಪ್ರಚಲ ಅಥವಾ ಪರ ಮಿತಿಗಳು – ಕಾರ್ಯಾತ್ಮಕ ಸಂಬಂಧ ಬಿಂಬಕಗಳು – ಸರಳ ಮತ್ತು ವಕ್ರ ರೇಖಾ ಬಿಂಬಕಗಳ ರೂಪೀಕರಣ ಮತ್ತು ನಕ್ಷೆ / ನಿಷ್ಪನ್ನ ಪರಿಕಲ್ಪನೆ, ಅವಕಲನದ ನಿಯಮಗಳು ಮತ್ತು ಸರಳ ರೇಖಾ ಬಿಂಬಕದ ಗಮನ (5ಗಂಟೆಗಳು)"[6]

ಈ ಮೇಲಿನ ಅನುವಾದವು ಪಠ್ಯಕ್ರಮದ ಒಂದು ಭಾಗವಾಗಿದೆ. ಅನುವಾದಕರು ಸಂಸ್ಕೃತ ಪದಗಳನ್ನು ಬಳಸಿ ಅನುವಾದಿಸಿದ ಕಾರಣ ಕೂಡಲೇ ಓದುಗರ ಮನಮುಟ್ಟುವ ಸಾಧ್ಯತೆಗಳು ಕಡಿಮೆ ಎನಿಸುತ್ತದೆ. ಆಧುನಿಕ ಸರಳಗನ್ನಡವೇ ಸರಿಯಾದದ್ದು.

" 1. ಪ್ರಸ್ತಾವನೆ

**1. ಅರ್ಥಶಾಸ್ತ್ರದ ವ್ಯಾಖ್ಯೆಗಳು**

ಎ. ಸಂಪತ್ತಿನ ವ್ಯಾಖ್ಯಾನ

ಬಿ. ಯೋಗಕ್ಷೇಮ ವ್ಯಾಖ್ಯಾನ

ಸಿ. ವಿರಳತೆಯ ವ್ಯಾಖ್ಯಾನ

**2. ಆರ್ಥಿಕತೆಯೊಂದರ ಮೂಲ ಸಮಸ್ಯೆಗಳು**

ಎ. ಆರ್ಥಿಕತೆ : ಅರ್ಥವಿವರಣೆ

ಬಿ. ಆರ್ಥಿಕತೆಯ ಮೂಲ ಆರ್ಥಿಕ ಸಮಸ್ಯೆಗಳು

**3. ಆರ್ಥಿಕ ಸಿದ್ಧಾಂತದ ಅನುಸಂದಾನ ಮಾರ್ಗ**

ಎ. ಆರ್ಥಿಕ ಸಿದ್ಧಾಂತ

ಬಿ. ಸೂಕ್ಷ್ಮ ಮತ್ತು ಸಮಗ್ರ ಅರ್ಥಶಾಸ್ತ್ರ

ಸಿ. ವಾಸ್ತವಿಕ ಮತ್ತು ಮಾದರಿ ಅರ್ಥಶಾಸ್ತ್ರ

ಡಿ. ಆರ್ಥಿಕ ಸ್ಥಿರಾತ್ಮಕತೆ ಮತ್ತು ಆರ್ಥಿಕ ಚಲನಾತ್ಮಕತೆ

ಇ. ಅಪೂರ್ಣ ಮತ್ತು ಸಾಮಾನ್ಯ ಸಮತೋಲನ

**4. ಮೂಲ ಗಣಿತಾತ್ಮಕ ತಂತ್ರಗಳು**

ಎ. ಚಲಕಗಳು

ಬಿ. ಸ್ಥಿರಕಗಳು

ಸಿ. ಪರಾಮಿತಿಗಳು

ಡಿ. ಬಿಂಬಕ (ಅನುಚಲನೆ)

ಇ. ಸಂಖ್ಯಾ ವ್ಯವಸ್ಥೆ

ಎಫ್. ನಿಷ್ಪನ್ನ ಪರಿಕಲ್ಪನೆ "[7]

ಈ ಮೇಲಿನ ಅನುವಾದದಲ್ಲಿ ಅನುವಾದಕರು ಬಳಸಿದ ಸಂಸ್ಕೃತ ಮಿಶ್ರಿತ ಪದಗಳು ಹೊಸ ಹೊಸ ಅರ್ಥವನ್ನು ನೀಡುತ್ತವೆ ಎನಿಸಿದರು, ವಿದ್ಯಾರ್ಥಿ ಮತ್ತು ಉಪನ್ಯಾಸಕರ ದೃಷ್ಟಿಯಿಂದ ಸರಿಯಾದ ವಿಧಾನವಲ್ಲ. ಕೆಲವು ಪದಗಳನ್ನಾದರೂ ಪರಿಷ್ಕರಿಸುವುದು ಹಾಗೂ ಸಮಾನ ಅರ್ಥಬರುವಂತೆ ನೋಡಿಕೊಳ್ಳುವುದು ಸೂಕ್ತವೆನಿಸುತ್ತದೆ.

ಪ್ರಥಮ ಪಿಯುಸಿ ತರಗತಿಗೆ ಸಂಬಂಧಿಸಿದ ಹಾಗೆ ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರು 2004 –05ರಲ್ಲಿನ ಪಠ್ಯಕ್ರಮದಂತೆ ಈ ಮೇಲಿನ ಪಠ್ಯಕ್ರಮವನ್ನು ಉದಾಹರಣೆಗಾಗಿ ಮಾತ್ರ ನೀಡಲಾಗಿದೆ, ಉಳಿದಂತೆ ವಿವರವಾದ ಪಠ್ಯಕ್ರಮವು ಲಭ್ಯವಾಗುತ್ತದೆ. ಅನುವಾದಕರು ಇಂಗ್ಲಿಷ ಭಾಷೆಯಿಂದ ಮತ್ತು ವಿವಿಧ ಮೂಲಗಳಿಂದ ಪಡೆದ ಮಾಹಿತಿಯನ್ನು

ಪಠ್ಯಕ್ರಮಕ್ಕೆ ಪೂರಕವಾಗಿ ವಿವರಿಸುತ್ತ ಅದರ ಮಿತಿಯನ್ನೆ ದಾಟಿರುವುದು ಅಧ್ಯಯನದಿಂದ ತಿಳಿದುಬರುತ್ತದೆ. ಕೆಲವು ಅನುವಾದಕರು ಸಮರ್ಪಕವಾದ ಮತ್ತು ಸರಿಯಾದ ಅಗತ್ಯಕ್ಕೆ ಬೇಕಾದ ಅರ್ಥವನ್ನಾದರೂ ಕಲ್ಪಿಸದಿರುವುದು ಕಂಡು ಬರುತ್ತದೆ. ಆದ್ದರಿಂದ ಅನುವಾದಕರು ವಿದ್ಯಾರ್ಥಿಗಳ ಬೌದ್ಧಿಕ ಮಟ್ಟ ಮತ್ತು ಅವರಿಗೆ ಲಭ್ಯವಾಗುವ ಸಮಯವನ್ನು ಗಮನಿಸಿ ಮಾಹಿತಿಯನ್ನು ಪೂರೈಸಿದರೆ ತುಂಬಾ ಒಳ್ಳೆಯದಾಗುತ್ತದೆ ಎಂದು ಅನುವಾದಕರಲ್ಲಿ ವಿನಂತಿಸಲಾಗಿದೆ.

## ಕೊನೆ ಟಿಪ್ಪಣಿಗಳು

1. ಹೆಚ್.ಆರ್. ಕೃಷ್ಣಮೂರ್ತಿ ಹೊಸಬೀಡು, ಭಾರತದ ಆರ್ಥಿಕ ಅಭಿವೃದ್ಧಿ, ಪು:488 – 491
2. ಅದೇ ಪು : ವಿಷಯ ಸೂಚಿ
3. ಸಿ.ಕೆ.ರೇಣುಕಾರ್ಯ, ಸಂ. ಅರ್ಥಶಾಸ್ತ್ರ ಪಿ.ಯು.ಸಿ ಎರಡನೇ ವರ್ಷ, ಪು : 7–8
4. B.S. Raman, Economics for first year PUC, Page : 414
5. ಪಾರ್ಶ್ವನಾಥ ಅಜ್ರಿ, ಅನು : ಅರ್ಥಶಾಸ್ತ್ರದ ಮೂಲ ಅಂಶಗಳು, ಪು : 443 –444
6. ಸಿ.ಕೆ.ರೇಣುಕಾರ್ಯ, ಸಂ. ಅರ್ಥಶಾಸ್ತ್ರ ಪಿ.ಯು.ಸಿ ಮೊದಲನೇವರ್ಷ, ಪು:ವಿಸ್ತೃತ ಪಠ್ಯಕ್ರಮ
7. ಹೆಚ್.ಆರ್. ಕೃಷ್ಣಮೂರ್ತಿ ಹೊಸಬೀಡು, ಭಾರತದ ಆರ್ಥಿಕ ಅಭಿವೃದ್ಧಿ, ಪು : ಪರಿವಿಡಿ

# ಅಧ್ಯಾಯ ನಾಲ್ಕು

# ಕೃತಿಗಳ ಅಧ್ಯಯನ

# 4. ಕೃತಿಗಳ ಅಧ್ಯಯನ

ಈಗ ಲಭ್ಯವಾಗಿರುವ ಹೊಸ ಪಠ್ಯಕ್ರಮದ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ಕನ್ನಡ ಮಾಧ್ಯಮದ ಅರ್ಥಶಾಸ್ತ್ರ ಪಠ್ಯಪುಸ್ತಕಗಳಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ ಹೊಸಪೇಟೆ ಇವರು ಪ್ರಕಟಿಸಿದ ಹಾಗೂ ಸಿ.ಕೆ. ರೇಣುಕಾರ್ಯ ಇವರು ಸಂಪಾದಿಸಿದ ಪಠ್ಯಪುಸ್ತಕಗಳನ್ನು ಮುಖ್ಯವಾಗಿಯೂ, ಇವುಗಳಿಗೆ ಪೂರಕವಾಗಿ ಹೆಚ್.ಆರ್.ಕೃಷ್ಣಮೂರ್ತಿ ಹೊಸಬೀಡು, ಕೆ.ಡಿ.ಬಸವಾ, ಆರ್.ರಾಮಕೃಷ್ಣಯ್ಯ, ಪಾರ್ಶ್ವನಾಥ ಅಜ್ರಿ ಮತ್ತು ಬಿ.ಎಸ್.ರಾಮನ್ ಇವರು ರಚಿಸಿದ ಪಠ್ಯಪುಸ್ತಕಗಳನ್ನು ಪ್ರತಿ ತರಗತಿಗೆ ತಲಾ ಎರಡೆರಡು (2+2) ಹಾಗೂ ಇಂಗ್ಲಿಷ ಮಾಧ್ಯಮದ ಪಠ್ಯಪುಸ್ತಕ ತರಗತಿಗೆ ಒಂದರಂತೆ (1+1) ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದೇನೆ. ಉಳಿದೆಲ್ಲಾ ಕನ್ನಡ ಮಾಧ್ಯಮದ ಪಠ್ಯಪುಸ್ತಕಗಳನ್ನು ಪೂರಕವಾಗಿ ಬಳಸಿಕೊಂಡಿರುತ್ತೇನೆ.

ಪಠ್ಯಕ್ರಮದಲ್ಲಿರುವ ವಿಷಯದ ಜೊತೆಗೆ ತಮ್ಮದೇ ಆದ ವೈಶಿಷ್ಟ್ಯತೆಯನ್ನು ಅನುವಾದಕರು ವ್ಯಕ್ತಪಡಿಸಿದ ಕಾರಣ ಅಧ್ಯಯನಕಾರರಿಗೆ ಗೊಂದಲವಾಗುತ್ತದೆ. ಅರ್ಥಶಾಸ್ತ್ರವು ಅಸಂಖ್ಯಾತ ವ್ಯಾಖ್ಯೆಗಳಿಂದ ಕತ್ತು ಹಿಸುಕಲ್ಪಟ್ಟಿದೆ ಎಂದು ಹೆಸರಾಂತ ಅರ್ಥಶಾಸ್ತ್ರಜ್ಞ ಜೆ.ಎಮ್.ಕೇನ್ಸ್ ಅಭಿಪ್ರಾಯ ಪಟ್ಟಿದ್ದಾರೆ ಎಂದು ಎಚ್ಚಾರ್ಕೆ ಹೇಳಿದರೆ, ಅಜ್ರಿಯವರು ಅಸಂಖ್ಯಾತ ಪರಿಭಾಷೆಗಳು ಅರ್ಥಶಾಸ್ತ್ರದ ಕತ್ತನ್ನು ಹಿಸುಕಿಬಿಟ್ಟಿವೆ (ಜೆ.ಎನ್.ಕೇನ್ಸ್) ಎಂದು ಹೇಳಿದ್ದಾರೆ. ಅರ್ಥಶಾಸ್ತ್ರಜ್ಞರ ಹೆಸರು ಜೆ.ಎಮ್.ಕೇನ್ಸ್ ಅಥವಾ ಜೆ.ಎನ್.ಕೇನ್ಸ್ ಇವುಗಳಲ್ಲಿ ಯಾವ ಹೆಸರು ಸರಿಯಾದದ್ದು ಎಂಬುದು ಸಹ ಗೊಂದಲಕ್ಕೆ ಕಾರಣವಾಗುತ್ತದೆ.

ತುಷ್ಟಿ ಗುಣದ ಪ್ರಕಾರಗಳ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳಿವೆ ತುಷ್ಟಿ ಗುಣದ ಪ್ರಭೇದಗಳು "ತುಷ್ಟಿ ಗುಣವನ್ನು ಅನೇಕ ವಿಧಾನಗಳಲ್ಲಿ ಉಂಟು ಮಾಡಬಹುದು. ಅಂದರೆ ತುಷ್ಟಿಗುಣದ ಅನೇಕ ಪ್ರಭೇದಗಳಿವೆ ಅವೆಂದರೆ 1.ರೂಪತುಷ್ಟಿ ಗುಣ, 2.ಸ್ಥಾನತುಷ್ಟಿ ಗುಣ , 3.ಕಾಲತುಷ್ಟಿ ಗುಣ, 4. ಸ್ವಾಮ್ಯ ಅಥವಾ ಒಡೆತನ ತುಷ್ಟಿ ಗುಣ ಮತ್ತು 5. ಸೇವಾ ತುಷ್ಟಿ ಗುಣ ಎಂದು ಹೇಳಿದರೆ. ತುಷ್ಟಿ ಗುಣವನ್ನು ಈ ಕೆಳಗಿನ ಪ್ರಕಾರಗಳಾಗಿ ವಿಂಗಡಿಸಬಹುದು

ಎಂದು 1. ರೂಪತುಷ್ಟಿ ಗುಣ, 2.ಸ್ಥಳತುಷ್ಟಿ ಗುಣ, 3.ಕಾಲತುಷ್ಟಿ ಗುಣ ಎಂದು ಮೂರು ವಿಧಗಳನ್ನು ಹೆಸರಿಸಿದ್ದಾರೆ. ಇನ್ನೊಂದು ಪಠ್ಯಕ್ರಮದಲ್ಲಿ ತುಷ್ಟಿ ಗುಣದ ಬಗೆಗಳು ಎಂದು ಈ ಕೆಳಗಿನಂತೆ ವಿವರಿಸಲಾಗಿದೆ 1. ಸ್ವರೂಪ ತುಷ್ಟಿ ಗುಣ, 2.ಸ್ಥಳ ತುಷ್ಟಿ ಗುಣ, 3. ಸಮಯತುಷ್ಟಿ ಗುಣ, 4.ಸೇವೆ ತುಷ್ಟಿ ಗುಣ, 5.ಮೂಲತುಷ್ಟಿ ಗುಣ,

ಮೇಲಿನ ಅಂಶಗಳನ್ನು ಗಮನಿಸಿದಾಗ ಒಬ್ಬರು ಮೂರು ವಿಧ ಉಳಿದಿಬ್ಬರು ಐದು ವಿಧಗಳನ್ನು ಹೆಸರಿಸಿದ್ದಾರೆ. ಐದು ವಿಧಗಳಲ್ಲಿ ಎಲ್ಲವೂ ಸಮನಾಗಿರದೇ ಭಿನ್ನವಾಗಿವೆ. ಒಂದರಲ್ಲಿ ಸ್ವಾಮ್ಯತುಷ್ಟಿ ಗುಣ ಎಂದಿದ್ದರೆ, ಇನ್ನೊಂದರಲ್ಲಿ ಮೂಲತುಷ್ಟಿ ಗುಣ ಎಂದು ಹೇಳಲಾಗಿದೆ. ಅಧ್ಯಯನದಲ್ಲಿ ತೊಡಗಿರುವವರು ತುಷ್ಟಿ ಗುಣದಲ್ಲಿ ಎಷ್ಟುವಿಧಗಳಿವೆ ಎಂದು ತಿಳಿಯಬೇಕು? ಪರೀಕ್ಷೆಯಲ್ಲಿ ಯಾವ ಉತ್ತರವನ್ನು ಸರಿಯಾದದದ್ದೆಂದು ನಮೂಧಿಸಬೇಕು ? ವಿದ್ಯಾರ್ಥಿಗಳಿಗೆ ಇಲ್ಲವೇ ಪ್ರಶ್ನಿಸುವವರೆಗೆ ಯಾವ ಉತ್ತರ ಸರಿಯಾದದ್ದೆಂದು ಹೇಳಲು ತುಂಬಾ ಕಷ್ಟವಾಗುತ್ತದೆ.

ಒಂದು ಪಠ್ಯಪುಸ್ತಕದಲ್ಲಿ ಹಣದ ಕಾರ್ಯಗಳನ್ನು ನಾಲ್ಕು ಪ್ರಕಾರಗಳಲ್ಲಿ ಹೇಳಿರುತ್ತಾರೆ 1. ಪ್ರಾಥಮಿಕ ಕಾರ್ಯಗಳು, 2. ಮಾಧ್ಯಮಿಕ ಕಾರ್ಯಗಳು, 3.ಪ್ರಾಸಂಗಿಕ ಕಾರ್ಯಗಳು, 4. ಇತರ ಕಾರ್ಯಗಳು ಇನ್ನೊಂದು ಪಠ್ಯಪುಸ್ತಕದಲ್ಲಿ ಪ್ರಧಾನ ಕಾರ್ಯಗಳು, ಉಪ ಕಾರ್ಯಗಳು ಮತ್ತು ಅವಲಂಭಿ ಕೆಲಸ ಕಾರ್ಯಗಳು ಎಂದು ಹೇಳಿದ್ದಾರೆ, ಮತ್ತೊಂದರಲ್ಲಿ ಪ್ರಾಥಮಿಕ ಕಾರ್ಯಗಳು, ದ್ವಿತೀಯ ಅಥವಾ ಸಹಾಯಕ ಕಾರ್ಯಗಳು ಮತ್ತು ಅವಲಂಭಿ ಕಾರ್ಯಗಳು ಎಂದು ಮೂರು ವಿಧಗಳನ್ನು ತಿಳಿಸಿರುತ್ತಾರೆ. ಆದರೆ ಹಣದ ಕಾರ್ಯಗಳನ್ನು ಅಧ್ಯಯನಕಾರ ನಿಖರವಾಗಿ ಎಷ್ಟು ಎಂದು ತಿಳಿಯುವುದು ಸಮಸ್ಯೆ ಎನಿಸುತ್ತದೆ.

ಅಧ್ಯಯನಕ್ಕೆ ಆಯ್ಕೆಮಾಡಿಕೊಂಡಿರುವ ಪಠ್ಯಪುಸ್ತಕಗಳ ವಿವರವಾದ ಅಧ್ಯಯನ ಈ ಕೆಳಗಿನಂತಿರುತ್ತದೆ.

### "1.1. ಅಭಿವೃದ್ಧಿಯ ಮೂಲ ಪರಿಕಲ್ಪನೆಗಳು ಮತ್ತು ಸೂಚಕಗಳು
### (Basic concepts and indicators of development)

ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ಪರಿಕಲ್ಪನೆ ಮತ್ತು ಸೂಚಕಗಳು ಲಭ್ಯವಿವೆ. ಅವುಗಳ ಅಧ್ಯಯನವು ಅಭಿವೃದ್ಧಿಯ ಸಮಸ್ಯೆಗಳ ವಿಸ್ತಾರನೋಟದ ಅರಿವಿಗೆ ಅತ್ಯಂತ ಅವಶ್ಯಕವೆನಿಸಿವೆ. ಈ ವಿಭಾಗದಲ್ಲಿ ಅಂತಹ ಪರಿಕಲ್ಪನೆಗಳು ಮತ್ತು ಸೂಚಕಗಳ ಪರಿಗಣನೆಯ ಪ್ರಯತ್ನ ಮಾಡಲಾಗಿದೆ.

#### 1.1.1. ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿ
#### (Economic growth and economic development)

ಸಾಮಾನ್ಯ ಅರ್ಥದಲ್ಲಿ ಆರ್ಥಿಕ ಬೆಳವಣಿಗೆ (Economic growth) ಆರ್ಥಿಕ

ಅಭಿವೃದ್ಧಿ (Economic development) ಆರ್ಥಿಕ ಪ್ರಗತಿ (Economic progress) ಆರ್ಥಿಕ ಕ್ಷೇಮಾಭ್ಯುದಯ (Economic welfare) ಮತ್ತು ದೀರ್ಘಾವಧಿ ಮಾರ್ಪಾಟು (Secular change) ಎಂಬ ಪರಿಕಲ್ಪನೆಗಳನ್ನು ಒಂದೇ ಎಂದು ಭಾವಿಸಲಾಗುತ್ತದೆ. ಶ್ರೀಸಾಮಾನ್ಯನ ದೃಷ್ಟಿಯಲ್ಲಿ ಈ ಎಲ್ಲಾ ಪರಿಕಲ್ಪನೆಗಳು ಸಮಾನ ಅರ್ಥದ ಪದಗಳಾಗಿವೆ. ಅವನ ದೃಷ್ಟಿಯಲ್ಲಿ ಈ ಪದ ಸಮುಚ್ಚಯಗಳು ರಾಷ್ಟ್ರೀಯ ಆದಾಯದ ಹೆಚ್ಚಳ, ಜೀವನ ಮಟ್ಟದಲ್ಲಿನ ಸುಧಾರಣೆ, ಆದಾಯ ಮತ್ತು ಸಂಪತ್ತಿನ ನ್ಯಾಯಯುತ ಹಂಚಿಕೆ ಮುಂತಾದ ಅರ್ಥವನ್ನು ನೀಡುತ್ತವೆ. ಅದರಲ್ಲೂ ವಿಶೇಷವಾಗಿ ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿ ಎಂಬ ಪದಗಳು ಒಂದೇ ಅರ್ಥ ನೀಡುತ್ತವೆ ಎಂದು ತಿಳಿಯಲಾಗಿತ್ತು. ಆದ್ದರಿಂದ ಈ ಎರಡು ಪದಗಳನ್ನು ಪರಸ್ಪರ ವಿನಿಮಯ ಮಾಡಬಹುದು ಎಂಬ ಅಭಿಪ್ರಾಯ ಬಹಳ ಕಾಲದವರೆಗೆ ಅಸ್ತಿತ್ವದಲ್ಲಿತ್ತು. ಆದರೆ ಶುಂಪಿಟರ್, ಶ್ರೀಮತಿ ಉರ್ಸುಲಾ ಹಿಕ್ಸ್, ಮ್ಯಾಡಿಸನ್, ಬ್ರೈಟ್‌ಸಿಂಗ್ ಮೊದಲಾದ ಅರ್ಥಶಾಸ್ತ್ರಜ್ಞರು ಈ ಎರಡು ಪರಿಕಲ್ಪನೆಗಳ ನಡುವಿನ ವ್ಯತ್ಯಾಸ ಹುಡುಕಲು ಪ್ರಯತ್ನಿಸಿದರು. ಈ ಎಲ್ಲಾ ಅರ್ಥಶಾಸ್ತ್ರಜ್ಞರ ಪ್ರಕಾರ 'ಅಭಿವೃದ್ಧಿ' ಎಂಬ ಪದ ವಿಶಾಲಾರ್ಥದ್ದು ಹಾಗೂ 'ಬೆಳವಣಿಗೆ' ಎಂಬುದು ಸಂಕುಚಿತಾರ್ಥದ್ದು. ಇವರ ಅಭಿಪ್ರಾಯದಲ್ಲಿ ಆರ್ಥಿಕ ಅಭಿವೃದ್ಧಿ ಎಂಬುದು ಆರ್ಥಿಕ ಬೆಳವಣಿಗೆಯ ಕಾರಣವಾಗಿರುತ್ತದೆ ಹಾಗೂ ಆರ್ಥಿಕ ಬೆಳವಣಿಗೆ ಆರ್ಥಿಕ ಅಭಿವೃದ್ಧಿಯ ಪರಿಣಾಮವಾಗಿರುತ್ತದೆ.

ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿಗಳ ನಡುವೆ ಸ್ಪಷ್ಟ ವ್ಯತ್ಯಾಸವನ್ನು ಎತ್ತಿ ತೋರಿಸಲು ಹಲವು ಅರ್ಥಶಾಸ್ತ್ರಜ್ಞರು ತಮ್ಮ ವ್ಯಾಖ್ಯಾನಗಳನ್ನು ಮುಂದಿಟ್ಟಿದ್ದಾರೆ. ಅವುಗಳ ಸಂಕ್ಷಿಪ್ತ ಪರಿಚಯ ಈ ಮುಂದಿನಂತಿದೆ.

ಶ್ರೀಮತಿ ಉರ್ಸುಲಾ ಹಿಕ್ಸ್ ಪ್ರಕಾರ, " ಆರ್ಥಿಕ ಅಭಿವೃದ್ಧಿ ಹಿಂದುಳಿದ ರಾಷ್ಟ್ರಗಳ ಸಮಸ್ಯೆಗಳನ್ನು ಪರಿಗಣಿಸುತ್ತದೆ ಮತ್ತು ಆರ್ಥಿಕ ಬೆಳವಣಿಗೆ ಮುಂದುವರಿದ ರಾಷ್ಟ್ರಗಳ ಸಮಸ್ಯೆಗಳನ್ನು ಪರಿಗಣಿಸುತ್ತದೆ. ಹಿಂದುಳಿದ ರಾಷ್ಟ್ರಗಳಲ್ಲಿ ಅಭಿವೃದ್ಧಿಯನ್ನು ಪ್ರಾರಂಭಿಸುವುದು ಮತ್ತು ತ್ವರಿತಗೊಳಿಸುವುದು ಪ್ರಮುಖ ಸಮಸ್ಯೆಗಳಾಗಿರುತ್ತವೆ." ಈ ವಿವರಣೆಯ ಪ್ರಕಾರ ಆರ್ಥಿಕ ಅಭಿವೃದ್ಧಿ ಎಂಬುದು ಹಿಂದುಳಿದ ರಾಷ್ಟ್ರಗಳ ಸಮಸ್ಯೆಗಳಿಗೆ ಸಂಬಂಧಿಸಿರುತ್ತದೆ ಹಾಗೂ ಆರ್ಥಿಕ ಬೆಳವಣಿಗೆ ಮುಂದುವರಿದ ರಾಷ್ಟ್ರಗಳ ಸಮಸ್ಯೆಗಳಿಗೆ ಸಂಬಂಧಿಸಿರುತ್ತದೆ.

ಪ್ರೊ. ಮ್ಯಾಡಿಸನ್ ಅವರ ಅಭಿಪ್ರಾಯದಲ್ಲಿ, "ಆದಾಯ ಮಟ್ಟದಲ್ಲಿನ ಏರಿಕೆಯನ್ನು ಶ್ರೀಮಂತ ರಾಷ್ಟ್ರಗಳಲ್ಲಿ ಆರ್ಥಿಕ ಬೆಳವಣಿಗೆ ಎಂದೂ ಮತ್ತು ಬಡ ರಾಷ್ಟ್ರಗಳಲ್ಲಿ ಆರ್ಥಿಕ ಅಭಿವೃದ್ಧಿ ಎಂದೂ ಸಾಮಾನ್ಯವಾಗಿ ಕರೆಯಲಾಗುತ್ತದೆ" ಮ್ಯಾಡಿಸನ್ ಅವರು ಆದಾಯದ ಆಧಾರದಲ್ಲಿ ಈ ಎರಡು ಪದಗಳ ನಡುವಿನ ವ್ಯಾತ್ಯಾಸ ಕಾಣಲು ಪ್ರಯತ್ನಿಸುತ್ತಾರೆ.

ಪ್ರೊ. ಸಿ.ಪಿ. ಕಿಂಡ್ಲ್‌ಬರ್ಜರ್ ಅವರು ಆರ್ಥಿಕ ಅಭಿವೃದ್ಧಿ ಮತ್ತು ಬೆಳವಣಿಗೆ ನಡುವಿನ ವ್ಯತ್ಯಾಸವನ್ನು ವಿವರಿಸುತ್ತಾರೆ. ಅವರು "ಆರ್ಥಿಕ ಬೆಳವಣಿಗೆ ಎಂದರೆ ಅಧಿಕ ಉತ್ಪನ್ನ ಮತ್ತು

ಆರ್ಥಿಕ ಅಭಿವೃದ್ಧಿ ಎಂಬುದು ಅಧಿಕ ಉತ್ಪನ್ನ ಮತ್ತು ಅದನ್ನು ಉತ್ಪಾದಿಸುವ ತಾಂತ್ರಿಕ ಮತ್ತು ಸಾಂಸ್ಥಿಕ ವ್ಯವಸ್ಥೆಗಳ ಮಾರ್ಪಾಟಾಗಿದೆ." ಅವರ ಈ ಅಭಿಪ್ರಾಯ ಬೆಳವಣಿಗೆಯು ಅಧಿಕ ಉತ್ಪಾದನೆಗೆ ಸಂಬಂಧಿಸಿರುತ್ತದೆ ಎಂಬ ಅರ್ಥ ನೀಡುತ್ತದೆ. ಆರ್ಥಿಕ ಚಲಕಗಳ ಪ್ರಮಾಣದಲ್ಲಿನ ಏರಿಕೆಯನ್ನು ಬೆಳವಣಿಗೆ ಎನ್ನಲಾಗುತ್ತದೆ. ಆದ್ದರಿಂದ ಕಿಂಡ್ಲ್‌ಬರ್ಜರ್ ಅವರು "ಬೆಳವಣಿಗೆಯು ತೂಕ ಅಥವಾ ಎತ್ತರದ ಮೇಲೆ ಗಮನವನ್ನು ಕೇಂದ್ರೀಕರಿಸಿದರೆ ಅಭಿವೃದ್ಧಿಯು ಕಾರ್ಯಸಾಮರ್ಥ್ಯದ ಬದಲಾವಣೆಯ ಮೇಲೆ ಗಮನ ಹರಿಸುತ್ತದೆ" ಎಂಬ ಅಭಿಪ್ರಾಯ ತಾಳುತ್ತಾರೆ.

ಪ್ರೊ. ಬಾನ್ ಅವರು, " ವಿಸ್ತರಣಾ ಶಕ್ತಿಗಳನ್ನು ಸೃಷ್ಟಿಸಲು ಮತ್ತು ಕಾಪಾಡಿ ಕೊಳ್ಳಲು ಬೇಕಾಗುವ ಕೆಲವೊಂದು ರೀತಿಯ ನಿರ್ದೇಶನ, ನಿಯಂತ್ರಣ ಮತ್ತು ಮಾರ್ಗದರ್ಶನಗಳನ್ನು ಅಭಿವೃದ್ಧಿ ಅಪೇಕ್ಷಿಸುತ್ತದೆ. ಇದು ಬಹುತೇಕ ಹಿಂದುಳಿದ ರಾಷ್ಟ್ರಗಳಲ್ಲಿ ಸತ್ಯವಾಗಿದೆ. ಆದರೆ ಮುಂದುವರಿದ ಮುಕ್ತ ಉದ್ಯಮ ಆರ್ಥಿಕತೆಗಳಲ್ಲಿ ಸ್ವಯಂ ಪ್ರೇರಿತ ಸ್ವರೂಪದ ಬೆಳವಣಿಗೆ ಮುಖ್ಯ ಲಕ್ಷಣವಾಗಿದೆ" ಎಂದು ತಿಳಿಸಿದ್ದಾರೆ.

ಪ್ರೊ. ಜೆ.ಎ. ಶುಂಪೀಟರ್ ಅವರ ಪ್ರಕಾರ, "ಅಭಿವೃದ್ಧಿಯು ಸ್ಥಗಿತ ಸನ್ನಿವೇಷದಲ್ಲಿನ ಅವ್ಯಾಹತವಲ್ಲದ ಮತ್ತು ಸ್ವಯಂ ಪ್ರೇರಿತ ಮಾರ್ಪಾಟಾಗಿದೆ. ಇದು ಹಿಂದೆ ಅಸ್ತಿತ್ವದಲ್ಲಿದ್ದ ಸಮತೋಲನ ಸ್ಥಿತಿಯನ್ನು ಶಾಶ್ವತವಾಗಿ ಬದಲಾಯಿಸುತ್ತದೆ ಮತ್ತು ಸ್ಥಾನಪಲ್ಲಟಗೊಳಿಸುತ್ತದೆ. ಬೆಳವಣಿಗೆಯು ದೀರ್ಘಾವಧಿಯ, ನಿಧಾನದ ಮತ್ತು ಸ್ಥಿರವಾದ ಬದಲಾವಣೆಯಾಗಿದೆ. ಅದು ಉಳಿತಾಯ ಮತ್ತು ಜನಸಂಖ್ಯೆಯ ದರದಲ್ಲಿನ ನಿಧಾನಗತಿಯ ಏರಿಕೆಯಿಂದ ಸಂಭವಿಸುತ್ತದೆ". ಈ ವ್ಯಾಖ್ಯಾನದ ಮೇರೆಗೆ ಅಭಿವೃದ್ಧಿ ಪ್ರಕ್ರಿಯೆ ಪ್ರಾರಂಭಗೊಳ್ಳುವ ಮೊದಲು ಆರ್ಥಿಕತೆ ಸ್ಥಗಿತತೆಯ ಸ್ಥಿತಿಯಲ್ಲಿರುತ್ತದೆ. ಆದರೆ ಅದು ಒಮ್ಮೆ ಆರಂಭಗೊಂಡ ಮೇಲೆ ಬದಲಾವಣೆಯ ಬಿರುಗಾಳಿ ಬೀಸಲಾರಂಭಿಸಿ ಆರ್ಥಿಕತೆ ಹಳೆ ಸಮತೋಲನ ಸ್ಥಿತಿಯಿಂದ ಹೊಸ ಸಮತೋಲನ ಸ್ಥಿತಿಗೆ ಮರಳುತ್ತದೆ. ಆದರೆ ಬೆಳವಣಿಗೆ ಎಂಬುದು ಒಂದು ನಿಧಾನಗತಿಯ ಮತ್ತು ಸ್ಥಿರ ಪ್ರಕ್ರಿಯೆಯಾಗಿದೆ. ಶುಂಪೀಟರ್ ಅವರ ಈ ಅಭಿಪ್ರಾಯ ವ್ಯಾಪಕ ಮನ್ನಣೆ ಗಳಿಸಿದೆ.

ಪ್ರೊ. ಮಿಲ್ಟನ್ ಫ್ರಿಡ್ಮ್ಯಾನ್ ಅವರು, "ಬೆಳವಣಿಗೆಯನ್ನು ವ್ಯವಸ್ಥೆಯೊಂದರ ಒಂದು ಅಥವಾ ಹೆಚ್ಚಿನ ಆಯಾಮಗಳ ರಚನೆಯಲ್ಲಿ ಯಾವುದೇ ಬದಲಾವಣೆಯಿಲ್ಲದೆ ನಡೆಯುವ ವಿಸ್ತರಣೆ, ಮತ್ತು ಅಭಿವೃದ್ಧಿಯನ್ನು ಸಾಮಾಜಿಕ ವ್ಯವಸ್ಥೆಗಳ ರಚನಾತ್ಮಕ ಪರಿವರ್ತನೆಗಳಿಗೆ ಕಾರಣವಾಗುವ ಆವಿಷ್ಕಾರ ಪ್ರಕ್ರಿಯೆ ಎಂದು ವ್ಯಾಖ್ಯಾನಿಸಿದ್ದಾರೆ.

ಆದ್ದರಿಂದ ಆರ್ಥಿಕ ಬೆಳವಣಿಗೆ ಎಂಬುದು ಒಂದು ರಾಷ್ಟ್ರದ ತಲಾ ಉತ್ಪನ್ನ ಅಥವಾ ಆದಾಯದಲ್ಲಿನ ಸ್ವಯಂ ಪ್ರೇರಿತ ಪ್ರಮಾಣಾತ್ಮಕ ಹೆಚ್ಚಳಕ್ಕೆ ಸಂಬಂಧಿಸಿರುತ್ತದೆ. ಈ ಹೆಚ್ಚಳವು ಶ್ರಮಶಕ್ತಿಯ ಪೂರೈಕೆ, ಅನುಭೋಗ, ಬಂಡವಾಳ ಮತ್ತು ವ್ಯಾಪಾರದ ಪ್ರಮಾಣದಲ್ಲಿನ

ವಿಸ್ತರಣೆಯೊಂದಿಗೆ ನಡೆಯುತ್ತಿರುತ್ತದೆ. ಆದ್ದರಿಂದ ಆರ್ಥಿಕ ಬೆಳವಣಿಗೆ ಎಂಬುದು ಸಂಕುಚಿತಾರ್ಥದ ಪರಿಭಾವನೆಯಾಗಿದೆ. ಬೆಳವಣಿಗೆಯು ಆರ್ಥಿಕತೆಯಲ್ಲಿನ ತಲಾ ಉತ್ಪನ್ನ ಅಥವಾ ಆದಾಯದಲ್ಲಿನ ಹೆಚ್ಚಳವನ್ನು ಮಾತ್ರ ಗುರುತಿಸುತ್ತದೆ. ಆದರೆ ಈ ಹೆಚ್ಚಳ ಯಾವ ಕಾರಣದಿಂದಾಗಿ ಪರಿಣಮಿಸಿತು ಎಂಬುದನ್ನು ವಿವರಿಸುವುದಿಲ್ಲ.

ಪ್ರತಿಯಾಗಿ ಆರ್ಥಿಕ ಅಭಿವೃದ್ಧಿ ಎಂಬುದು ಒಂದು ವಿಶಾಲಾರ್ಥದ ಪರಿಭಾವನೆಯಾಗಿದೆ. ಅದು ಆರ್ಥಿಕತೆಯಲ್ಲಿ ಜರುಗುವ ಒಂದು ರಚನಾತ್ಮಕ ಪರಿವರ್ತನೆಯಾಗಿದೆ. ಅಭಿವೃದ್ಧಿ ಎಂಬುದು ಆರ್ಥಿಕ ಬಯಕೆಗಳು, ಸರಕುಗಳು, ಉತ್ತೇಜಕಗಳು ಮತ್ತು ಸಾಂಸ್ಥಿಕ ಅಂಶಗಳಲ್ಲಿನ ಗುಣಾತ್ಮಕ ಬದಲಾವಣೆಗೆ ಸಂಬಂಧಿಸಿರುತ್ತದೆ. ಅದು ಬೆಳವಣಿಗೆಗೆ ಕಾರಣವಾಗುವ ತಾಂತ್ರಿಕ ಬದಲಾವಣೆಗಳನ್ನು ವಿವರಿಸುತ್ತದೆ. ಅಭಿವೃದ್ಧಿಯು ಬೆಳವಣಿಗೆ ಮತ್ತು ಹಿಂಜರಿತಗಳೆರಡನ್ನೂ ಒಳಗೊಂಡಿರುತ್ತದೆ. ಒಂದು ಆರ್ಥಿಕತೆ ಅಭಿವೃದ್ಧಿ ಇಲ್ಲದೆಯೂ ಬೆಳೆಯಬಹುದು. ಆದರೆ ಆರ್ಥಿಕ ಬೆಳವಣಿಗೆ ಇಲ್ಲದ ಆರ್ಥಿಕ ಅಭಿವೃದ್ಧಿಯನ್ನು ಊಹಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಅಭಿವೃದ್ಧಿ ಎಂಬುದು ಆದಾಯ ಮತ್ತು ಉತ್ಪನ್ನದ ಹೆಚ್ಚಳ, ಸಾಮಾಜಿಕ ನ್ಯಾಯ, ಉದ್ಯೋಗ ಸೃಷ್ಟಿ ಮುಂತಾದ ಚಟುವಟಿಕೆಗಳೊಂದಿಗೆ ಪರಿವರ್ತನೆಯ ಪ್ರಕ್ರಿಯೆಗೆ ನಾಂದಿಯಾಗಬೇಕಾಗುತ್ತದೆ."[1]

ಅನುವಾದಕರು ಸುದೀರ್ಘವಾದ ಮಾಹಿತಿಯನ್ನು ಅನುವಾದಿಸಿರುತ್ತಾರೆ. ಆದರೆ ಉಳಿದ ಕನ್ನಡ ಮಾಧ್ಯಮದ ಪಠ್ಯಪುಸ್ತಕಗಳಲ್ಲಿ ಇಲ್ಲದ ಕಾರಣ ಇದು ಓದುಗರಿಗೆ ಹಾಗೂ ಉಪನ್ಯಾಸಕರಿಗೂ ಉಪಯುಕ್ತವಾಗುವ ಸಾಧ್ಯತೆಗಳಿವೆ.

**"ಮೂಲ ಪರಿಕಲ್ಪನೆಗಳು ಮತ್ತು ಅಭಿವೃದ್ಧಿ ಸೂಚಿಗಳು**

**ಪ್ರಸ್ತಾವನೆ**

ಜನಸಂಖ್ಯೆಯ ದೃಷ್ಟಿಯಿಂದ ವಿಶ್ವದಲ್ಲಿ ೨ನೇಯ ಸ್ಥಾನವನ್ನು ಭೂವಿಸ್ತಾರದಲ್ಲಿ ೭ನೇಯ ಸ್ಥಾನವನ್ನೂ ಹೊಂದಿರುವ ಭಾರತ ದೀರ್ಘಕಾಲದ ವಿದೇಶಿಆಳ್ವಿಕೆ ಹಾಗೂ ಸಂಪ್ರಾದಾಯಿಕ ಸಮಾಜದ ವ್ಯವಸ್ಥೆ ಹೊಂದಿತ್ತು ಹಾಗೂ ಆರ್ಥಿಕವಾಗಿ ತೀರಾ ಹಿಂದುಳಿದಿತ್ತು. ಸ್ವಾತಂತ್ರ್ಯಾನಂತರದ ಆರ್ಥಿಕ ಯೋಜನೆಗಳ ಮೂಲಕ, ಭಾರತ ಹೆಚ್ಚಿನ ಅಭಿವೃದ್ಧಿ ಸಾಧಿಸುತ್ತಿದೆ. ಇದು ಮೂರನೆಯ ವಿಶ್ವದ ರಾಷ್ಟ್ರಗಳ ಮುಂಚೂಣಿಯಲ್ಲಿದೆ. ೧೯೯೧ರ ನಂತರ ಜಾಗತೀಕರಣದ ಪ್ರವಾಹದಲ್ಲಿ ಸೇರಿ ಏಳು ಬೀಳುಗಳೊಡನೆ ಮುನ್ನಡೆಯುತ್ತಿದೆ. ಇದರ ಅಧ್ಯಯನಕ್ಕೆ ಪೂರಕವಾಗುವಂತೆ, ಪ್ರಗತಿಯ ಮೂಲಭೂತ ಪರಿಕಲ್ಪನೆಗಳನ್ನು, ಅದನ್ನು ಅಳೆಯುವ, ಅರಿಯುವ ವಿಧಾನಗಳನ್ನು ತಿಳಿದುಕೊಳ್ಳುವುದು ಅವಶ್ಯಕ.

**೧.೧ ಆಭಿವೃದ್ಧಿಯ ಮೂಲಪರಿಕಲ್ಪನೆಗಳು ಹಾಗೂ ಸೂಚಿಗಳು**

ಈಗಿನ ಆರ್ಥಿಕ ಸ್ಥಿತಿಯನ್ನು ಇನ್ನೂ ಉತ್ತಮ ಸ್ಥಿತಿಗೆ ಕೊಂಡೊಯ್ಯುವ ಪ್ರಯತ್ನಗಳನ್ನು ವಿಶ್ವದ ರಾಷ್ಟ್ರಗಳು ಕೈಗೊಳ್ಳುತ್ತಿದ್ದು, ಆರ್ಥಿಕ ಚಟುವಟಿಕೆಗಳು ಹಾಗೂ ವ್ಯವಸ್ಥೆಯಲ್ಲಿ

ಪರಿಮಾಣಾತ್ಮಕ ಹಾಗೂ ಗುಣಾತ್ಮಕ ಬದಲಾವಣೆಗಳು, ಪ್ರಮುಖವಾಗಿ ಏರುಮುಖ ಬದಲಾವಣೆಗಳು ಉಂಟಾಗುತ್ತಿವೆ. ಇಂತಹ ಪರಿಸ್ಥಿತಿಯನ್ನು ಆರ್ಥಿಕ ಬೆಳವಣಿಗೆ ಹಾಗೂ ಆರ್ಥಿಕ ಅಭಿವೃದ್ಧಿ ಎಂದು ಪರಿಗಣಿಸಲಾಗಿದೆ. ಜನಸಾಮಾನ್ಯರು ಈ ಎರಡೂ ಪದಗಳನ್ನು ಸಮಾನ ಅರ್ಥದಲ್ಲಿ ಬಳಸುತ್ತಾರೆ. ಆದರೆ ಅರ್ಥಶಾಸ್ತ್ರಜ್ಞರು ಈ ಎರಡೂ ಪರಿಕಲ್ಪನೆಗಳ ನಡುವೆ ಕೆಲವು ಮೂಲಭೂತ ಹಾಗೂ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸಿ ಅವೆರಡನ್ನು ಬೇರೆ ಬೇರೆಯಾಗಿ ಪರಿಗಣಿಸುತ್ತಾರೆ.

**ಅ. ಆರ್ಥಿಕ ಬೆಳವಣಿಗೆ**

ಗೆರಾಲ್ಡ್ ಎಂ. ಮೆಯರ್ ಮತ್ತು ರಾಬರ್ಟ ಇ. ಬಾಲ್ಡ್‌ವಿನ್‌ರವರ ಪ್ರಕಾರ ಆರ್ಥಿಕ ಬೆಳವಣಿಗೆ ಎಂಬುದು, ಒಂದು ಆರ್ಥಿಕತೆಯು ಒಟ್ಟು ರಾಷ್ಟ್ರೀಯ ಉತ್ಪನ್ನವನ್ನು ದೀರ್ಘಾವಧಿಯಲಿನ ಹೆಚ್ಚಿಸುವ ಪ್ರಕ್ರಿಯೆ. ಆದರೆ ಜನಸಂಖ್ಯೆಯ ಬೆಳವಣಿಗೆ ತೀವ್ರವಾದಾಗ ಒಟ್ಟು ರಾಷ್ಟ್ರೀಯ ಉತ್ಪನ್ನ ಹೆಚ್ಚಿದರೂ ತಲಾ ರಾಷ್ಟ್ರೀಯ ಉತ್ಪನ್ನ ಹೆಚ್ಚದಿರಬಹುದು ಅಥವಾ ಕಡಿಮೆಯಾಗಬಹುದು. ಅದು ಆರ್ಥಿಕ ಪ್ರಗತಿ ಎನಿಸಲಾರದು. ಸೈಮನ್ ಕುಜನೆಟ್ಸ ಅವರ ಪ್ರಕಾರ ಒಂದು ದೇಶದ ಆರ್ಥಿಕ ಬೆಳವಣಿಗೆಯನ್ನು, ಅದರ ಜನಸಂಖ್ಯೆ ಮತ್ತು ತಲಾ ಉತ್ಪನ್ನದಲ್ಲಿ ದೀರ್ಘಾವಧಿಯಲ್ಲಿ ಸತತವಾಗಿ ಉಂಟಾಗುವ, ಸುಸ್ಥಿರಗತಿಯ ಹೆಚ್ಚಳ ಎಂದು ವ್ಯಾಖ್ಯಾನಿಸಬಹುದು.

ಪ್ರೊ. ಫ್ರೀಡ್‌ಮನ್ ಅವರು ಹೇಳುವಂತೆ ಆರ್ಥಿಕ ವ್ಯವಸ್ಥೆಯ ಮೂಲಭೂತ ರಚನೆಯಲ್ಲಿ ಬದಲಾವಣೆಯಾಗದೆ, ಒಂದು ಅಥವಾ ಹೆಚ್ಚು ಆಯಾಮಗಳಲ್ಲಿ ಅದು ವಿಸ್ತರಿಸುವುದು ಆರ್ಥಿಕ ಬೆಳವಣಿಗೆ ಎನಿಸುತ್ತದೆ.

ಆರ್ಥಿಕ ಬೆಳವಣಿಗೆ ಎಂಬುದು ನೈಜ ತಲಾ ಆದಾಯದ ಹೆಚ್ಚಳವನ್ನು ಪ್ರಮುಖವಾಗಿ ಸೂಚಿಸುತ್ತದೆ. ಮುಂದುವರಿದ ಆರ್ಥಿಕತೆಗಳಲ್ಲಿ ಮೂಲಭೂತ ಆರ್ಥಿಕ ವ್ಯವಸ್ಥೆಯ ಸಂರಚನೆ ಸದೃಢವಾಗಿದ್ದು ಅವುಗಳಲ್ಲಿ ಹೆಚ್ಚಿನ ಬದಲಾವಣೆ ಅಗತ್ಯವಿರುವುದಿಲ್ಲ. ಆದ್ದರಿಂದ ನೈಜ ತಲಾ ವರಮಾನದ ಹೆಚ್ಚಳವೇ ಪ್ರಮುಖ ಅಂಶವಾಗಿರುತ್ತದೆ. ಆದ್ದರಿಂದ ಮುಂದುವರೆದ ಆರ್ಥಿಕತೆಗಳಲ್ಲಿ ಆರ್ಥಿಕ ಬೆಳವಣಿಗೆ ಪ್ರಮುಖವಾಗಿ ಗೋಚರವಾಗುತ್ತದೆ.

ಒಂದು ಆರ್ಥಿಕತೆಯಲ್ಲಿ ಯಾವುದಾದರೂ ಎರಡೂ ವರ್ಷಗಳಲ್ಲಿ ಒಟ್ಟು ಆಂತರಿಕ ಉತ್ಪನ್ನಗಳ ನಡುವಿನ ವ್ಯತ್ಯಾಸವೇ, ಉತ್ಪನ್ನದ ಬೆಳವಣಿಗೆ ಅಥವಾ ಆರ್ಥಿಕ ಬೆಳವಣಿಗೆ.

$G = g_1 - g_{t-1}$

G = (Growth) ಬೆಳವಣಿಗೆ

gt = t ಅವಧಿಯಲ್ಲಿ ಒಟ್ಟು ಆಂ. ಉತ್ಪನ್ನ

$g_t - 1 = t$ ಗಿಂತ ಹಿಂದಿನ ಒಂದು ನಿರ್ದಿಷ್ಟ ಅವಧಿಯಲ್ಲಿ ಒಟ್ಟು ಆಂ. ಉ

$$Gr = \frac{g_1 - g_{t-1}}{gt - 1}$$

Gr = (Growth rate) ಬೆಳವಣಿಗೆ ದರ

**ಆ. ಆರ್ಥಿಕ ಅಭಿವೃದ್ಧಿ**

ಪ್ರೊ. ಬರ್ನಾರ್ಡ್ ಓಕೋನ್ ಮತ್ತು ರಿಚರ್ಡ್‌ಸನ್ ಅವರ ಪ್ರಕಾರ ಆರ್ಥಿಕ ಸರಕು ಸೇವೆಗಳಲ್ಲಿ ಹೆಚ್ಚಳ ಹಾಗೂ ಇದರಿಂದ ಉಂಟಾಗುವ ದೀರ್ಘಾವಧಿ ಯೋಗಕ್ಷೇಮ ಸುಧಾರಣೆಯೇ ಆರ್ಥಿಕ ಅಭಿವೃದ್ಧಿ. ಅಂದರೆ ಆರ್ಥಿಕ ಉತ್ಪನ್ನ ಹೆಚ್ಚಳ ಮಾತ್ರವಲ್ಲದೆ ಇದರ ಬಳಕೆಯಿಂದ ಕ್ಷೇಮಸಾಧನೆ ಉಂಟಾದರೆ ಅದು ಆರ್ಥಿಕ ಅಭಿವೃದ್ಧಿ.

ಎಂ. ಪಿ. ಟೋಡಾರೋ ಅವರ ಪ್ರಕಾರ ಸಾಮಾಜಿಕ ವ್ಯವಸ್ಥೆಯ ಮೂಲ ರಚನೆಯಲ್ಲಿ ಬದಲಾವಣೆ, ಸಾರ್ವತ್ರಿಕ ಮನೋಭಾವ ಹಾಗೂ ರಾಷ್ಟ್ರೀಯ ಸಂಸ್ಥೆಗಳಲ್ಲಿ ಬದಲಾವಣೆ, ಉಂಟುಮಾಡುವ, ಆರ್ಥಿಕ ಬೆಳವಣಿಗೆಯನ್ನು ವೇಗಗೊಳಿಸುವ, ಬಡತನ ನಿರ್ಮೂಲನೆ ಮಾಡಿ, ಅಸಮಾನತೆ ಕಡಿಮೆ ಮಾಡುವ ಬಹುಮುಖ ಕಾರ್ಯ ವಿಧಾನವನ್ನು ಆರ್ಥಿಕ ಅಭಿವೃದ್ಧಿ ಎಂದು ಕರೆಯಬಹುದು.

ಕಿಂಡ್ಲ್‌ಬರ್ಗರ್ ಅವರು ಹೇಳುವಂತೆ, ಆರ್ಥಿಕ ಅಭಿವೃದ್ಧಿ ಎಂಬುದು ಉತ್ಪಾದನೆ ಮತ್ತು ಆದಾಯದ ವಿತರಣೆಯ ತಂತ್ರಜ್ಞಾನದ ಮತ್ತು ಸಾಂಸ್ಥಿಕ ವ್ಯವಸ್ಥೆಯಲ್ಲಿನ ಬದಲಾವಣೆ.

ವಿಶ್ವಸಂಸ್ಥೆ ತಜ್ಞರ ಸಮಿತಿಯ ಪ್ರಕಾರ, ಅಭಿವೃದ್ಧಿ ಎಂಬುದು ಆರ್ಥಿಕ ಬೆಳವಣಿಗೆ ಮಾತ್ರವಾಗಿರದೆ ಸಾಮಾಜಿಕ, ಸಾಂಸ್ಕೃತಿಕ, ಸಾಂಸ್ಥಿಕ ಮತ್ತು ಆರ್ಥಿಕ ಬದಲಾವಣೆಗಳನ್ನು ಒಳಗೊಂಡಿರುತ್ತದೆ.

ಡಡ್ಲಿ ಸೀರ್ಸ್ ಅವರ ಪ್ರಕಾರ ಬಡತನ, ನಿರುದ್ಯೋಗ, ಅಸಮಾನತೆ ಇವು ಕಡಿಮೆಯಾಗುತ್ತಿದ್ದರೆ ಒಂದು ದೇಶ ಅಭಿವೃದ್ಧಿ ಹೊಂದುತ್ತಿದೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಇವುಗಳಲ್ಲಿ ಒಂದೆರಡು ಅಥವಾ ಎಲ್ಲಾ ಸಮಸ್ಯೆಗಳು ಭೀಕರವಾಗುತ್ತಿದ್ದರೆ, ತಲಾ ಆದಾಯ ದ್ವಿಗುಣವಾದರೂ ಅದನ್ನು ಅಭಿವೃದ್ಧಿ ಎಂದು ಕರೆಯುವುದು ಅನುಚಿತವೆನಿಸುತ್ತದೆ.

ಕಿಂಡಲ್ ಬರ್ಗರ್ ಮತ್ತು ಬ್ರೂಸ್‌ಹೆರಿಕ್ ಇವರ ಪ್ರಕಾರ ಅಭಿವೃದ್ಧಿ ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ. ಅತಿ ಕಡಿಮೆ ಆದಾಯದ ವರ್ಗದ ಜನರ ಭೌತಿಕ ಕ್ಷೇಮ ವೃದ್ಧಿಸುತ್ತದೆ. ಬಡತನ, ಅನಕ್ಷರತೆ, ರೋಗಗಳು, ಅಲ್ಪಾಯು ಮರಣ ಇವುಗಳ ನಿವಾರಣೆ ಆಗುತ್ತದೆ. ಕೃಷಿಯಿಂದ ಕೈಗಾರಿಕೆ ಉತ್ಪಾದನೆಯ ಪ್ರಾಧಾನ್ಯತೆಗೆ ಮೂಲಭೂತ ರಚನೆಯಲ್ಲಿ ಬದಲಾವಣೆ ಉಂಟಾಗುತ್ತದೆ. ದುಡಿಯುವ ವಯೋಮಿತಿಯ ಎಲ್ಲಾ ಜನರಿಗೆ ಲಾಭದಾಯಕ ಉದ್ಯೋಗ ದೊರಕುವಂತೆ ವ್ಯವಸ್ಥೆಯಾಗುತ್ತದೆ.

ತಮ್ಮ ಕ್ಷೇಮಸಾಧನೆಯ ಗುರಿಗಳನ್ನು ನಿರ್ಧರಿಸುವಲ್ಲಿ ಆರ್ಥಿಕತೆಯಲ್ಲಿನ ವಿಶಾಲ

ಗುಂಪುಗಳು ಭಾಗವಹಿಸುವುವು. ಅಂದರೆ ರಾಷ್ಟ್ರೀಯ ಉತ್ಪನ್ನ ಹೆಚ್ಚಳ ಮಾತ್ರವಲ್ಲದೆ, ಉತ್ಪಾದನಾ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆ, ಸಾಮಾನ್ಯ ಜನರ ಕ್ಷೇಮಸಾಧನೆ, ಎಲ್ಲಾ ಜನರಿಗೆ ಸಮಾನ ಆರ್ಥಿಕ ಅವಕಾಶ ಮತ್ತು ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಪ್ರಾತಿನಿಧ್ಯ ದೊರಕುವಂತೆ ಮಾಡುವ ಪ್ರಕ್ರಿಯೆ ಆರ್ಥಿಕ ಅಭಿವೃದ್ಧಿ.

ಹಿಂದುಳಿದ ಹಾಗೂ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಆರ್ಥಿಕ ಬೆಳವಣಿಗೆಗಿಂತ ಆರ್ಥಿಕ ಪ್ರಗತಿಯ ಸಾಧನೆ ಮುಖ್ಯವಾಗಿರುತ್ತದೆ."[೨]

ಅನುವಾದಕರು ಕನ್ನಡಕ್ಕೆ ಅನುವಾದಿಸುವಾಗ ಸಂಪೂರ್ಣವಾಗಿ ಕನ್ನಡವನ್ನೆ ಬಳಸಿದ ಕಾರಣ ಅಧ್ಯಯನಕಾರರಿಗೆ ಸಮಸ್ಯೆ ಎನಿಸುತ್ತದೆ. ಕನಿಷ್ಠ ಮುಖ್ಯಾಂಶಗಳನ್ನಾದರೂ ಆವರಣದಲ್ಲಿ ಇಂಗ್ಲಿಷ ಪದವನ್ನು ನೀಡಿದ್ದರೆ ಅನುಕೂಲವಾಗುತ್ತದೆ. ಅಲ್ಲದೇ ಆರ್ಥಿಕ ಬೆಳವಣಿಗೆ ಬಗ್ಗೆ ಸೂತ್ರ ಬೇಕಾಗಿರಲಿಲ್ಲ. ಸೂಚಕದ ಬದಲಿ 'ಸೂಚಿ' ಇದೆ..

" 1.1 ಮೂಲ ಪರಿಭಾವನೆಗಳು ಮತ್ತು ಅಭಿವೃದ್ಧಿಯ ಸಂಕೇತಗಳು

**(Basic concepts and indicators of development)**

1.1.(ಅ) ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿಯ ಪರಿಭಾವನೆಗಳು.

'ಆರ್ಥಿಕ ಬೆಳವಣಿಗೆ' ಮತ್ತು 'ಆರ್ಥಿಕ ಅಭಿವೃದ್ಧಿ' ಎಂಬ ಪರಿಭಾವನೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಅಂದರೆ ಒಂದು ಮೇಲ್ಮುಖ ಮತ್ತು ಇನ್ನೊಂದು ಕೆಳಮುಖ ಎಂದು ಹೇಳಬಹುದು.

'ಬೆಳವಣಿಗೆ (**Growth**) ಎಂದರೆ ಅಕ್ಷರಶಃ ಗಾತ್ರದಲ್ಲಿ, ಪ್ರಮಾಣದಲ್ಲಿ ಅಥವಾ ಮೊತ್ತದಲ್ಲಿ ಹೆಚ್ಚಳ. ಆದ್ದರಿಂದ 'ಆರ್ಥಿಕ ಬೆಳವಣಿಗೆ' (**Economic Growth** ) ಎಂದರೆ ಅನೇಕ ಆರ್ಥಿಕ ಚಲಕಗಳ ಪರಿಮಾಣದಲ್ಲಿ ಅಥವಾ ಗಾತ್ರದಲ್ಲಿನ ವಿಸ್ತರಣೆ ಅಥವಾ ಹೆಚ್ಚಳ. ಅಂದರೆ ಒಂದು ನಿರ್ದಿಷ್ಟ ಅವಧಿಯಲ್ಲಿ ಸಾಮಾನ್ಯವಾಗಿ ಒಂದು ವರ್ಷದ ಅವಧಿಯಲ್ಲಿ, ಒಂದು ದೇಶದ ಒಟ್ಟು ವರಮಾನದ ಅಂದರೆ ರಾಷ್ಟ್ರೀಯ ವರಮಾನ ಅಥವಾ ಒಟ್ಟು ಉತ್ಪನ್ನ ಇಲ್ಲವೇ ರಾಷ್ಟ್ರೀಯ ಉತ್ಪನ್ನ, ಬಂಡವಾಳದ ಒಟ್ಟು, ಪರಿಮಾಣ (**Volume**), ಉಳಿತಾಯ ಮತ್ತು ಬಂಡವಾಳ ಹೂಡಿಕೆಗಳ (ಹೂಟೆಯ) ಒಟ್ಟು ಪರಿಮಾಣ, ಕೈಗಾರಿಕೆಗಳ ಒಟ್ಟು ಸಂಖ್ಯೆ ಮತ್ತು ಗಾತ್ರ, ಕೃಷಿ ವಲಯದ ಮತ್ತು ಸೇವೆ ವಲಯಗಳ ಪ್ರಮಾಣ ಇವೆ ಮೊದಲಾದ ಆರ್ಥಿಕ ಚಲಕಗಳಲ್ಲಿನ ವಿಸ್ತರಣೆಯು ಆರ್ಥಿಕ ಬೆಳವಣಿಗೆಯಾಗಿದೆ.

'ಅಭಿವೃದ್ಧಿ' (**Development**)ಎಂಬ ಪದವನ್ನು ಹಿಂದುಳಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ಭಾರತದಂತ ರಾಷ್ಟ್ರಗಳಿಗೆ ಅನ್ವಯವಾಗುವಂತೆ ಉಪಯೋಗಿಸಲಾಗುತ್ತದೆ. ಅದು ಜನರ ನೈಜ ಪ್ರತಿ ತಲಾ ವರಮಾನದಲ್ಲಿ ಅವಿರತ ಹೆಚ್ಚಳದೊಂದಿಗೆ ಜನರ ಜೀವನಮಟ್ಟದಲ್ಲಿಯೂ ಸುಧಾರಣೆಯಾಗುವ ಪ್ರಕ್ರಿಯೆಗೂ ಅನ್ವಯಿಸುತ್ತದೆ.

ಅದೇ ಪ್ರಕಾರ 'ಆರ್ಥಿಕ ಅಭಿವೃದ್ಧಿ'( **Economic Development** ) ಎಂದರೆ ಜನ ಸಾಮಾನ್ಯರ ಜೀವನ ಮಟ್ಟದಲ್ಲಿನ ಹೆಚ್ಚಳ ಎಂದು ಅರ್ಥವಾಗುತ್ತದೆ. ಆದ್ದರಿಂದ 'ಆರ್ಥಿಕ ಅಭಿವೃದ್ಧಿ' ಎಂದರೆ ಕೇವಲ ರಾಷ್ಟ್ರೀಯ ವರಮಾನದಲ್ಲಿನ ಹೆಚ್ಚಳವಲ್ಲ ; ಆದರೆ ರಾಷ್ಟ್ರೀಯ ವರಮಾನದಲ್ಲಿನ ಹೆಚ್ಚಳದೊಂದಿಗೆ ಪ್ರತಿ ತಲಾವರಮಾನದಲ್ಲಿಯೂ ಹೆಚ್ಚಳ ಎಂದು ತಿಳಿದುಕೊಳ್ಳಬೇಕು. ಹೀಗೆ 'ಆರ್ಥಿಕ ಅಭಿವೃದ್ಧಿ' ಎಂದರೆ ರಾಷ್ಟ್ರೀಯ ವರಮಾನ ಮತ್ತು ಪ್ರತಿ ತಲಾ ವರಮಾನ ಈ ಎರಡರಲ್ಲಿನ ಹೆಚ್ಚಳವಾಗಿದೆ. ಆದರೆ ರಾಷ್ಟ್ರೀಯ ವರಮಾನ ಮತ್ತು ಪ್ರತಿ ತಲಾ ವರಮಾನ (**Per Capita Income**)ಗಳೆರಡು ಹೆಚ್ಚಾಗಬೇಕಾದರೆ, ರಾಷ್ಟ್ರೀಯ ವರಮಾನವು (ಅಥವಾ ರಾಷ್ಟ್ರೀಯ ಉತ್ಪನ್ನವು) ದೇಶದ ಜನಸಂಖ್ಯೆಗಿಂತಲೂ ಹೆಚ್ಚಿನ ವೇಗದಲ್ಲಿ ಬೆಳೆಯಬೇಕಾಗುತ್ತದೆ. ಅಂದರೆ ರ್‍ಆಷ್ಟ್ರೀಯ ವರಮಾನದ ಏರಿಕೆಯ ದರವೂ ರಾಷ್ಟ್ರದ ಜನಸಂಖ್ಯೆಯ ಏರಿಕೆಯ ದರಕ್ಕಿಂತಲೂ ಅಧಿಕವಾಗಿರಬೇಕಾಗುತ್ತದೆ.

ದೇಶದಲ್ಲಿ ಕೆಲವೊಂದು ಅನುಕೂಲವಾದ ಸಂದರ್ಭ ಸನ್ನಿವೇಶಗಳಿರುವುದರಿಂದ ದೇಶವು ಆರ್ಥಿಕ ಪ್ರಗತಿಯಾಗುವುದಕ್ಕೆ ಆರ್ಥಿಕ ಬೆಳವಣಿಗೆಯು ಸಂಬಂಧಿಸಿರುತ್ತದೆ. ಯುನೈಟೆಡ್ ಕಿಂಗಡಮ್ (**U.K.**) (ಗ್ರೇಟ ಬ್ರಿಟನ್ ಮತ್ತು ಉತ್ತರ ಐರ್ಲಂಡ್ ಸಂಯುಕ್ತ ರಾಜ್ಯ) ಎಂಬ ರಾಷ್ಟ್ರವು ಕೈಗಾರಿಕಾ ಕ್ರಾಂತಿಯ ಅವಧಿಯಲ್ಲಿ ಮತ್ತು ತದ ನಂತರ ಮತ್ತು ಆಮೆರಿಕೆಯ ಸಂಯುಕ್ತ ಸಂಸ್ಥಾನಗಳು (**U.S.A : United States of America**) ಕೈಗಾರಿಕಾ ಕ್ರಾಂತಿಯ ನಂತರ ಸಾಧಿಸಿದ ಪ್ರಗತಿಯು ಆರ್ಥಿಕ ಪ್ರಗತಿಯಾಗಿದೆ ಎಂದು ಹೇಳಬಹುದು. ಈ ದೇಶಗಳಲ್ಲಿ ಅತ್ಯಂತ ಅನುಕೂಲವಾದ ಪರಿಸ್ಥಿತಿ ಇದ್ದುದರಿಂದ ಮತ್ತು ಅಲ್ಲಿನ ಜನರು ಸಾಹಸಿ ಉದ್ದಿಮೆದಾರರಾಗಿದ್ದು, ಲಭ್ಯವಿರುವ ಅನುಕೂಲಕರವಾದ ಸಂದರ್ಭಗಳನ್ನು ಉಪಯೋಗಿಸಿ, ಆರ್ಥಿಕ ಪ್ರಗತಿಯನ್ನು ಸಾಧಿಸಲು ದೃಢ ನಿರ್ಧಾರ ಮಾಡಿ, ಕಾರ್ಯತತ್ಪರರಾಗಿದ್ದರಿಂದ, ಈ ದೇಶಗಳು ಆರ್ಥಿಕ ಪ್ರಗತಿಯನ್ನು ಸಾಧಿಸಿದವೆ ಹೊರತು, ಸರಕಾರ ಯೋಜನಾ ಬದ್ಧವಾದ ಪ್ರಯತ್ನಗಳಿಂದಲ್ಲವೆಂಬುದನ್ನು ನೆನಪಿನಲ್ಲಿಡಬೇಕು.

ಆದರೆ 'ಆರ್ಥಿಕ ಅಭಿವೃದ್ಧಿಯು' ಸರಕಾರದ ಸುಸಂಬದ್ಧವಾದ ಸುವ್ಯವಸ್ಥಿತವಾದ ಯೋಜನೆಯ ಮೂಲಕ ಉತ್ಪಾದನೆಯನ್ನು ಹೆಚ್ಚಿಸಿ, ತನ್ಮೂಲಕ ಜನರ ಜೀವನ ಮಟ್ಟವನ್ನು ಸುಧಾರಿಸುವುದಕ್ಕೆ ಸಂಬಂಧಿಸಿರುತ್ತದೆ. ಆರ್ಥಿಕ ಅಭಿವೃದ್ಧಿಯಲ್ಲಿ ಸರಕಾರದ ಪಾತ್ರವು ಭಾರಿ ಮಹತ್ವದ್ದಾಗಿರುತ್ತದೆ. ಸರಕಾರವು ಆರ್ಥಿಕ ಯೋಜನೆಯ ಮೂಲಕ ದೇಶದ ಸಂಪನ್ಮೂಲಗಳನ್ನು ಕೆಲವೊಂದು ಆರ್ಥಿಕ ಉದ್ದೇಶಗಳನ್ನು ಈಡೇರಿಸುವ ದೃಷ್ಠಿಯಿಂದ ಆರ್ಥಿಕ ಚಟುವಟಿಕೆಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುತ್ತದೆ.

ಹೀಗೆ, ಆರ್ಥಿಕ ಬೆಳವಣಿಗೆಯಲ್ಲಿ ದೇಶದಲ್ಲಿ ಅನೇಕ ಅನುಕೂಲಕರವಾದ ಸಂದರ್ಭಗಳಿರುತ್ತವೆ, ಅವು ಆರ್ಥಿಕ ಬೆಳವಣಿಗೆಗೆ ಭಾರಿ ಅನುಕೂಲವಾಗಿರುತ್ತವೆ. ಜನರು ಇಂತಹ ಅನುಕೂಲರವಾದ ಸಂದರ್ಭಗಳನ್ನು- ಸ್ಥಿತಿಗತಿಗಳನ್ನು ಉಪಯೋಗಿಸಿ, ದೇಶದ

ಆರ್ಥಿಕ ಪ್ರಗತಿಗೆ ಪ್ರಯತ್ನಿಸುತ್ತಾರೆ ಆದರೆ ಅಲ್ಲಿ ಸರಕಾರದ ಪಾತ್ರವೇನು ಇರುವುದಿಲ್ಲ. ಆದರೆ ಆರ್ಥಿಕ ಅಭಿವೃದ್ಧಿಯಲ್ಲಿ ದೇಶದಲ್ಲಿ ಆರ್ಥಿಕ ಚಟುವಟಿಕೆಗಳಿಗೆ ಅನುಕೂಲಕರವಾದ ಸ್ಥಿತಿಗತಿಗಳೇ ಇರುವುದಿಲ್ಲ. ಈಗಾಗಿ ದೇಶದ ಸರಕಾರವು ದೇಶದ ಆರ್ಥಿಕ ಬೆಳವಣಿಗೆಗೆ ಅನುಕೂಲವಾಗುವಂತ ಸ್ಥಿತಿಗತಿಗಳನ್ನು ನಿರ್ಮಿಸುತ್ತದೆ. ಯೋಜನೆಯ ಮೂಲಕ ಅದು ಇದನ್ನು ಸಾಧಿಸಲು ಪ್ರಯತ್ನಿಸುತ್ತದೆ. ಮತ್ತು ಇಂತಹ ಸ್ಥಿತಿಗತಿಗಳನ್ನು ಸಂದರ್ಭಗಳನ್ನು ನಿರ್ಮಿಸಿ, ಅವುಗಳ ಮೂಲಕ ಆರ್ಥಿಕ ಪ್ರಗತಿಯನ್ನು ಸಾಧಿಸಲು ಅದು ಪ್ರಯತ್ನಿಸುತ್ತದೆ.

ಒಂದು ನಿರ್ದಿಷ್ಠ ಅವಧಿಯಲ್ಲಿ ದೇಶದ (ಅರ್ಥ ವ್ಯವಸ್ಥೆಯ) ಸರಕು ಸೇವೆಗಳ ಒಟ್ಟು ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಆರ್ಥಿಕ ಪ್ರಗತಿಯು ಸಂಬಂಧಿಸಿರುತ್ತದೆ. ದೇಶದ ಸರಕು ಸೇವೆಗಳ ಒಟ್ಟು ಉತ್ಪನ್ನವೆಂದರೆ ರಾಷ್ಟ್ರೀಯ ಉತ್ಪನ್ನ ಅಥವಾ ನೈಜ ರಾಷ್ಟ್ರೀಯ ವರಮಾನ. ರಾಷ್ಟ್ರೀಯ ವರಮಾನವೆಂದರೆ ಉತ್ಪಾದನಾ ಘಟಕಗಳಿಗೆ ಪ್ರತಿಫಲವೆಂದು ಬಾಡಿಗೆ, ಕೂಲಿ, ಬಡ್ಡಿ ಮತ್ತು ಲಾಭದ ರೂಪದಲ್ಲಿ ನೀಡಿದ ವರಮಾನ. ಆದ್ದರಿಂದ, ಉತ್ಪನ್ನದ ಮತ್ತು ವರಮಾನದ ಹೆಚ್ಚಳವೆಂದರೆ ಆರ್ಥಿಕ ಪ್ರಗತಿ.

ಬೆಳವಣಿಗೆಯನ್ನು ಎರಡು ಪ್ರಕಾರವಾಗಿ ವಿವರಿಸಬಹುದು : ಒಂದು ಒಟ್ಟು ಉತ್ಪನ್ನದಲ್ಲಿನ ಹೆಚ್ಚಳದ ಮೂಲಕ ಮತ್ತು ಇನ್ನೊಂದು, ಪ್ರತಿ ತಲಾ ಉತ್ಪನ್ನದಲ್ಲಿನ ಹೆಚ್ಚಳದ ಮೂಲಕ. ಪ್ರತಿ ತಲಾ ಉತ್ಪನ್ನವನ್ನು ಕಂಡು ಹಿಡಿಯಲು ಒಟ್ಟು ಉತ್ಪನ್ನವನ್ನು ದೇಶದ ಒಟ್ಟು ಜನಸಂಖ್ಯೆಯಿಂದ ಭಾಗಿಸಬೇಕಾಗುತ್ತದೆ. ಪ್ರತಿ ತಲಾ ವರಮಾನವು ಅಧಿಕವಾಗಬೇಕಾದರೆ, ಒಟ್ಟು ಉತ್ಪನ್ನದಲ್ಲಿ ಮತ್ತು ಪ್ರತಿ ತಲಾ ಉತ್ಪನ್ನದಲ್ಲಿನ ಹೆಚ್ಚಳವು ಜನಸಂಖ್ಯೆಯಲ್ಲಿನ ಹೆಚ್ಚಳಕ್ಕಿಂತಲೂ ಅಧಿಕವಾಗಿರಬೇಕಾಗುತ್ತದೆ. ಆಗ ಮಾತ್ರ ಆರ್ಥಿಕ ಪ್ರಗತಿಯು ಸಾಧ್ಯವಾಗುತ್ತದೆ.

ಪ್ರತಿ ತಲಾ ಉತ್ಪನ್ನ (**Per Capita Output**) ದಲ್ಲಿನ ಹೆಚ್ಚಳವೆಂದರೆ ಪ್ರತಿ ತಲಾ ನೈಜ ವರಮಾನದ (**Real Income**) ಅಂದರೆ ಸರಕು ಸೇವೆಗಳ ರೂಪದಲ್ಲಿನ ವರಮಾನದ ಹೆಚ್ಚಳ. ಆದ್ದರಿಂದ ಆರ್ಥಿಕ ಪ್ರಗತಿಯೆಂದರೆ ಪ್ರತಿತಲಾ ಉತ್ಪನ್ನದ ಅಥವಾ ಪ್ರತಿ ತಲಾ ನೈಜ ವರಮಾನದ ಹೆಚ್ಚಳ.

ಆದರೆ ಆರ್ಥಿಕ ಅಭಿವೃದ್ಧಿ ಎಂದರೆ ಆರ್ಥಿಕ ಬೆಳವಣಿಗೆಯೊಂದಿಗೆ ಅರ್ಥವ್ಯವಸ್ಥೆಯಲ್ಲಿ ಪ್ರಗತಿಪರ ಬದಲಾವಣೆ. ಈ ಬದಲಾವಣೆಗಳು ಅರ್ಥ ವ್ಯವಸ್ಥೆಯ ಭೌತಿಕ ಬೆಳವಣಿಗೆ ಮತ್ತು ಜನರ ಕಲ್ಯಾಣದಲ್ಲಿನ ಬೆಳವಣಿಗೆ. ಇದಕ್ಕಾಗಿ ಜನರ ಉದ್ಯೋಗ ಮತ್ತು ಉತ್ಪಾದನೆಗಳಿಗೆ ಸಂಬಂಧಿಸಿದಂತೆ ದೇಶದ ಅರ್ಥ ವ್ಯವಸ್ಥೆಯ ಸ್ವರೂಪದಲ್ಲಿಯೂ ಬದಲಾವಣೆಯಾಗಬೇಕಾಗುತ್ತದೆ. ದೇಶದ ಉತ್ಪಾದನೆಯ ಸ್ವರೂಪದಲ್ಲಿನ ಬದಲಾವಣೆಯೆಂದರೆ ಅರ್ಥವ್ಯವಸ್ಥೆಯ ಮಾಧ್ಯಮಿಕ ವಲಯ (ಕೈಗಾರಿಕೆ ಇತ್ಯಾದಿ) ಮತ್ತು ತೃತೀಯ ವಲಯ (ವಾಣಿಜ್ಯ, ವ್ಯಾಪಾರ, ಸಾರಿಗೆ, ಬ್ಯಾಂಕಿಂಗ್, ವಿಮೆ ಇತ್ಯಾದಿ) ಗಳ ಉತ್ಪಾದನೆಯ ಪ್ರಮಾಣವು ಅಥವಾ ಪಾಲು ಅಧಿಕವಾಗಬೇಕು ಮತ್ತು ಪ್ರಾಥಮಿಕ ವಲಯದ (ಕೃಷಿ ಇತ್ಯಾದಿಗಳ) ಉತ್ಪಾದನೆಯ ಪಾಲು ತುಲನಾತ್ಮಕವಾಗಿ

ಕಡಿಮೆಯಾಗಬೇಕು. ಆದರೆ ಒಟ್ಟಿನಲ್ಲಿ ಒಟ್ಟು ಉತ್ಪಾದನೆಯು ಮೊದಲಿಗಿಂತಲೂ ಅಧಿಕವಾಗುತ್ತ ಹೋಗಬೇಕು. ಇದು ಅಲ್ಲದೆ ಜನರ ಉದ್ಯೋಗದ ಸ್ವರೂಪವೂ ಬದಲಾಗಬೇಕು. ಅಂದರೆ ಮಾಧ್ಯಮಿಕ ಮತ್ತು ತೃತೀಯ ವಲಯಗಳಲ್ಲಿ ತೊಡಗಿದ ಉದ್ಯೋಗಿಗಳ ಸಂಖ್ಯೆ ತುಲನಾತ್ಮಕವಾಗಿ ಅಧಿಕವಾಗುತ್ತ ಹೋಗಬೇಕು ಮತ್ತು ಪ್ರಾಥಮಿಕ ವಲಯದಲ್ಲಿ ನಿರತರಾದವರ ಸಂಖ್ಯೆ ತುಲನಾತ್ಮಕವಾಗಿ ಕಡಿಮೆಯಾಗುತ್ತ ಹೋಗಬೇಕು. ಅಂದರೆ ಮಾಧ್ಯಮಿಕ ಮತ್ತು ತೃತೀಯ ವಲಯಗಳಲ್ಲಿ ಹೆಚ್ಚು ಹೆಚ್ಚು ಜನರು ತೊಡಗಬೇಕು ಮತ್ತು ಕೃಷಿ ಮೊದಲಾದ ಚಟುವಟಿಕೆಗಳಲ್ಲಿ ನಿರತರಾದ ಜನರ ಪ್ರಮಾಣ ಕಡಿಮೆಯಾಗಬೇಕು.

ಆರ್ಥಿಕ ಅಭಿವೃದ್ಧಿಯ ಇನ್ನೊಂದು ಮಹತ್ವದ ಬದಲಾವಣೆಯೆಂದರೆ ಬೆಳವಣಿಗೆಗೆ ಅನುಕೂಲವಾದ ಸಂಸ್ಥೆಗಳು ಮತ್ತು ತಂತ್ರಜ್ಞಾನದ ಬದಲಾವಣೆ ಅಂದರೆ ಬೆಳವಣಿಗೆಗೆ ಅಡ್ಡಿಯನ್ನುಂಟು ಮಾಡುವ ಸಂಸ್ಥೆಗಳು ಮತ್ತು ತಂತ್ರಗಳಿಗೆ ಬದಲು, ಪ್ರಗತಿಪರವಾದ ಸಂಸ್ಥೆಗಳು ಮತ್ತು ಅತ್ಯಾಧುನಿಕ ತಂತ್ರಜ್ಞಾನಗಳು ಬೆಳೆದು ಬರಬೇಕಾಗುವುದು ಅತ್ಯಾವಶ್ಯಕವಾಗಿದೆ.

ಇದು ಅಲ್ಲದೇ ಅಭಿವೃದ್ಧಿ ಯೆಂದರೆ ಬಡತನ ನಿವಾರಣೆ, ನಿರುದ್ಯೋಗ ನಿವಾರಣೆ ಮತ್ತು ವರಮಾನದ ಅಸಮಾನ ಹಂಚಿಕೆಯ ನಿವಾರಣೆ.

ಕೊನೆಯದಾಗಿ, ಅಭಿವೃದ್ಧಿಯ ಅತ್ಯಂತ ವ್ಯಾಪಕವಾದ ಅರ್ಥವೇನೆಂದರೆ ಅದು ಮೂರು ಮೂಲಭೂತ ಅವಶ್ಯಕ ಅಂಶಗಳನ್ನು ಒಳಗೊಂಡಿರುತ್ತದೆ. ಅವು ಯಾವವೆಂದರೆ (1) ಜೀವ ಸಮರ್ಥನೆ, (2) ಆತ್ಮಗೌರವ ಮತ್ತು (3) ವಿಮೋಚನೆ.

1) ಜೀವಿಸುವ ಸಮರ್ಥನೆ (**Life Sustenance**) : ಜನರಿಗೆ ಆಹಾರ, ಬಟ್ಟೆ ಮತ್ತು ವಸತಿ ಈ ಮೂರು ಜೀವನಾವಶ್ಯಕಗಳನ್ನು ಮತ್ತು ಕನಿಷ್ಟ ಶಿಕ್ಷಣವನ್ನು ಒದಗಿಸಿದರೆ ಅವರಿಗೆ ಜೀವಿಸುವ ಸಮರ್ಥನೆ ಸಿಗುತ್ತದೆ.

2) ಆತ್ಮಗೌರವ (**Self Esteem**): ಜನರಿಗೆ ಆತ್ಮ ಗೌರವ ಮತ್ತು ಸ್ವಾತಂತ್ರ್ಯ ಇರಬೇಕು ಮತ್ತು ಕೀಳುಮಟ್ಟದ ಆರ್ಥಿಕ ದರ್ಜೆಯಿಂದ ಅವರು ಮುಕ್ತರಾಗಿರಬೇಕು.

3) ವಿಮೋಚನೆ (**Freedom**) : ವಿಮೋಚನೆಯೆಂದರೆ ಮೂರು ಅನಿಷ್ಟಗಳಾದ ಕೊರತೆ, ಅಜ್ಞಾನ ಮತ್ತು ಕಿರಿಚಾಟ (**Squaller**)ಗಳಿಂದ ಮುಕ್ತಿ.

ಹೀಗೆ ಆರ್ಥಿಕ ಅಭಿವೃದ್ಧಿ ಎಂದರೆ ಜನರ ಯೋಗಕ್ಷೇಮದಲ್ಲಿ ಸುಧಾರಣೆ, ಮುಖ್ಯವಾಗಿ ಅತೀ ಕಡಿಮೆ ವರಮಾನವಿರುವವರ ಕಲ್ಯಾಣ, ಜನಸಾಮಾನ್ಯರ ಬಡತನ ನಿವಾರಣೆ, ಅದರೊಂದಿಗೆ ಅದಕ್ಕೆ ಸಂಬಂಧಿಸಿದ ಅನಿಷ್ಟಗಳಾದ ಶೀಘ್ರ ಮರಣ, ರೋಗಗಳು ಮತ್ತು ಅನಕ್ಷರತೆಗಳ ನಿವಾರಣೆ ಕೃಷಿಯನ್ನು ಹೊರತು ಪಡಿಸಿ, ಕೈಗಾರಿಕೆ ಮೊದಲಾದವುಗಳಲ್ಲಿ ಅಮೂಲಾಗ್ರ ಅನುಕೂಲರವಾದ ಬದಲಾವಣೆ ಜನರ ಉತ್ಪಾದನ ಸಮಾರ್ಥ್ಯದಲ್ಲಿ ಮತ್ತು ನೈಜ ವರಮಾನದಲ್ಲಿ ಹೆಚ್ಚಳ, ಜನರ ಜೀವನ ಮಟ್ಟದಲ್ಲಿ ಸುಧಾರಣೆ ಮತ್ತು ಎಲ್ಲಾ ವರ್ಗಗಳ

ಜನರ ಯೋಗಕ್ಷೇಮದಲ್ಲಿ ಸುಧಾರಣೆ –ಇವೆಲ್ಲವೂ ಆರ್ಥಿಕ ಅಭಿವೃದ್ಧಿಯ ಸಂಕೇತಗಳಾಗಿವೆ."[3]

ಅನುವಾದಕರು ವಿವರಣೆಯುಳ್ಳ ಮಾಹಿತಿಯನ್ನು ಪೂರೈಸಿರುತ್ತಾರೆ, ಆದರೆ ಇಷ್ಟೊಂದು ದೀರ್ಘವಾದ ವಿಷಯ ಪರೀಕ್ಷಾ ದೃಷ್ಟಿಯಿಂದ ಅಧಿಕವೆನಿಸುತ್ತದೆ. ಕಾರಣ ಬೇರೆ ಭಾಷಾಂತರಕಾರರು ಇಲ್ಲವೇ ಅನುವಾದಕರು ಇಷ್ಟೊಂದು ಮಾಹಿತಿಯನ್ನು ನೀಡಿರುವುದಿಲ್ಲ.

**" Basic Concepts and Indicators of Development**

**Economic Growth and Economic Development**

In general the terms Economic Growth and Economic Development have the same meaning but the modern Economists like Prof.Meler, Maddison, Baldwin, J.A. Schumpeter, Mrs. Ursula Hicks etc. have found some difference between these two concepts.

**Economic Growth**

According to Prof. Meler "Economic Growth is a process where the real per capita income of a country increases over a long period of time". In other words, it is a continuous increase in a country's production of goods and services, consumption, national income and real per capita over a long period of time. The term Economic growth mainly applies to developed countries.

**Economic Development**

According to Baldwin "Economic development is a process where by the counter's real national income and standard of living of the people increase over a long period of time". The concept of Economic development applies to developing countries where there are several opportunities to utilize the resources of the country. Economic development brings institutional, social and technological changes in the country. So it increases the production, income and standard of living of the people.

According to Kindle Berger, "Economic growth means more output, while economic development implies both more output and changes in the technical and institutional arrangements by which it is

production and distributed"[4].

ಈ ಮೇಲಿನ ಅಂಶಗಳು ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿಗೆ ಬೇಕಾಗುವ ಅಗತ್ಯ ಅರ್ಥದ ಮಾಹಿತಿಯನ್ನು ಮಾತ್ರ ತಿಳಿಸುವ ಪ್ರಮುಖ ವ್ಯಾಖ್ಯಾನಗಳೊಂದಿಗೆ ವಿವರಣೆಯನ್ನು ಪೂರೈಸಿರುವುದರಿಂದ ಉಪಯುಕ್ತವಾದದ್ದೆಂದು ಭಾವಿಸಲಾಗಿದೆ.

**"ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿ ನಡುವಿನ ವ್ಯತ್ಯಾಸಗಳು**

(Distinction between economic growth and development)

ಈ ಎರಡೂ ಪರಿಭಾವನೆಗಳನ್ನು ಮೇಲಿನ ವಿಭಾಗದಲ್ಲಿ ಚರ್ಚಿಸಿದಾಗ ನಮಗೆ ಈ ಎರಡೂ ಪರಿಭಾವನೆಗಳೂ ವಿಶಾಲಾರ್ಥದಲ್ಲಿ ಒಂದೇ ಎಂಬ ಭಾವನೆ ಉಂಟಾಗಿದೆ. ಕೆಲ ಅರ್ಥಶಾಸ್ತ್ರಜ್ಞರ ಪ್ರಕಾರ ಈ ಎರಡು ಪದಗಳ ನಡುವಿನ ವ್ಯತ್ಯಾಸ ಕೇವಲ ಕಾಲ್ಪನಿಕ ಮತ್ತು ಅವಾಸ್ತವ. ಅವರ ಪ್ರಕಾರ ಈ ಎರಡೂ ಪದಗಳು ಒಂದೇ ಹಾಗೂ ಇವೆರಡರ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಈ ಹಿನ್ನಲೆಯಲ್ಲಿ ಪ್ರೊ. ಲೂಯಿಸ್ ಅವರ ಅಭಿಪ್ರಾಯಗಳನ್ನು ಗಮನಿಸುವುದು ಸೂಕ್ತವೆನಿಸುತ್ತದೆ.

ಪ್ರೊ. ಲೂಹಿಸ್ ಪ್ರಕಾರ, "ಅನೇಕ ಸಂದರ್ಭಗಳಲ್ಲಿ ನಾವು 'ಬೆಳವಣಿಗೆ' ಪದವನ್ನೆ ಬಳಸುತ್ತೇವೆ, ಆದರೆ 'ಪ್ರಗತಿ' ಮತ್ತು 'ಅಭಿವೃದ್ಧಿ' ನಡುವಿನ ಭಿನ್ನತೆಗಾಗಿ ಪ್ರಾಸಂಗಿಕವಾಗಿ ಈ ಪದಗಳನ್ನು ಬಳಸುತ್ತೇವೆ". ಪ್ರೊ. ಪಾಲ್.ಎ. ಬಾರನ್ ಅವರು ಸಹ ಇದೇ ಅಭಿಪ್ರಾಯ ತಾಳುತ್ತಾರೆ. ಆದ್ದರಿಂದ ಕೆಲ ಅರ್ಥಶಾಸ್ತ್ರಜ್ಞರ ಪ್ರಕಾರ ಈ ಎರಡೂ ಪದಗಳು ಒಂದೇ. ಇಷ್ಟಾಗಿಯೂ ಈ ಎರಡು ಪದಗಳ ನಡುವೆ ಕೆಲವು ಭಾವನಾತ್ಮಕ ಮತ್ತು ತಾಂತ್ರಿಕ ಭಿನ್ನತೆಗಳನ್ನು ಗುರುತಿಸುವುದು ಸಾಧ್ಯವಿದೆ. ಅಂತಹ ಭಿನ್ನತೆಗಳ ಪರಿಚಯ ಈ ಮುಂದಿನಂತಿದೆ.

ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿ ನಡುವಿನ ವ್ಯತ್ಯಾಸ

| **ವ್ಯತ್ಯಾಸದ ಆಧಾರ** | **ಆರ್ಥಿಕ ಬೆಳವಣಿಗೆ** | **ಆರ್ಥಿಕ ಅಭಿವೃದ್ಧಿ** |
|---|---|---|
| 1. ವ್ಯಾಪ್ತಿ | 1. ಸಂಕುಚಿತ ವ್ಯಾಪ್ತಿ | 1. ವಿಶಾಲ ವ್ಯಾಪ್ತಿ |
| 2. ಸ್ವರೂಪ | 2. ಪರಿಮಾಣಾತ್ಮಕ ವಸ್ತುನಿಷ್ಠ ಪ್ರಕ್ರಿಯೆ | 2. ಗುಣಾತ್ಮಕ ಪ್ರಕ್ರಿಯೆ |
| 3. ಮಾಪನ | 3. ನೈಜ ತಲಾ ವರಮಾನ ಅಳತೆಗೋಲು | 3. ನೈಜ ರಾಷ್ಟ್ರೀಯ ಆದಾಯದ ಮೂಲಕ ಮಾಪನ |

| | | |
|---|---|---|
| 4. ದೃಷ್ಟಿಕೋನ | 4. ಸಮಗ್ರ ಆರ್ಥಿಕ ಅಧ್ಯಯನ | 4.ಸೂಕ್ಷ್ಮ ಆರ್ಥಿಕ ಅಧ್ಯಯನ |
| 5. ಸಂಬಂಧ | 5. ಅಭಿವೃದ್ಧಿಯ ಪರಿಣಾಮ | 5. ಬೆಳವಣಿಗೆಯ ಕಾರಣ |
| 6. ಅನ್ವಯ | 6. ಮುಂದುವರೆದ ರಾಷ್ಟ್ರಗಳಿಗೆ ಅನ್ವಯ | 6. ಹಿಂದುಳಿದ ರಾಷ್ಟ್ರಗಳಿಗೆ ಅನ್ವಯ |
| 7. ಅವಧಿ | 7.ದೀರ್ಘಕಾಲಿಕ ಆರ್ಥಿಕ ವಿದ್ಯಮಾನ | 7. ಅಲ್ಪಕಾಲಿಕ ಆರ್ಥಿಕ ಪ್ರಕ್ರಿಯೆ |
| 8. ಪ್ರಾಮುಖ್ಯತೆ | 8. ಅಭಿವೃದ್ಧಿ ಇಲ್ಲದೆಯೂ ಸಾಧ್ಯ | 8.ಬೆಳವಣಿಗೆ ಇಲ್ಲದೆ ಸಾಧ್ಯವಿಲ್ಲ |
| 9. ಲಕ್ಷಣ | 9. ತಡೆರಹಿತ | 9. ಹತೋಟಿ & ನಿಯಂತ್ರಣ |
| 10. ಹಸ್ತಕ್ಷೇಪ | 10. ಕನಿಷ್ಟ ಸರ್ಕಾರಿ ಹಸ್ತಕ್ಷೇಪ | 10. ಗರಿಷ್ಟ ಸರ್ಕಾರಿ ಹಸ್ತಕ್ಷೇಪ |
| 11. ಪ್ರಕ್ರಿಯೆ ಸ್ವರೂಪ | 11. ಸ್ವಯಂಚಾಲಿತ ಪ್ರಕ್ರಿಯೆ | 11. ಪ್ರೇರಿತ ಪ್ರಕ್ರಿಯೆ |
| 12. ಫಲಿತಾಂಶ | 12. ಸಂರಚನೆಯಲ್ಲಿ ಬದಲಾವಣೆ ಇಲ್ಲದ ವಿಸ್ತರಣೆ | 12. ಸಂರಚನಾತ್ಮಕ ಪರಿವರ್ತನೆ-ಯೊಂದಿಗೆ ಅವಿಷ್ಕಾರ ಪ್ರಕ್ರಿಯೆ |
| 13. ಆಯಾಮ | 13. ಏಕ ಆಯಾಮದ ವಿದ್ಯಮಾನ | 13.ಹಲವು ಆಯಾಮದ ವಿದ್ಯಮಾನ |
| 14. ಪ್ರಾಮುಖ್ಯತೆ | 14. ಪರಿಮಾಣಾತ್ಮಕ ಪ್ರಾಮುಖ್ಯತೆ | 14. ಗುಣಾತ್ಮಕ ಪ್ರಮುಖ್ಯತೆ. ”[5] |

ಈ ಅನುವಾದಕರು ಸಾಕಷ್ಟು ಮಾಹಿತಿಗಳನ್ನು ಪಟ್ಟಿಯ ರೂಪದಲ್ಲಿ ಕೊಟ್ಟಿರುವುದು ಸರಿಯಷ್ಟೇ. ಇದು ಅಧ್ಯಯನಕಾರರಿಗೆ ತುಂಬಾ ಉಪಯುಕ್ತವಾಗಿದೆ. ವ್ಯತ್ಯಾಸದ ಆಧಾರದ ಮೂಲಕ ವಿವರಣೆಯು ಹೆಚ್ಚು ಪರಿಣಾಮಕಾರಿಯಾಗಿದೆ.

**“ಇ. ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿ ನಡುವೆ ಮೂಲಭೂತ ವ್ಯತ್ಯಾಸಗಳು**

ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಯಲ್ಲಿ ಪ್ರಮುಖ ವ್ಯತ್ಯಾಸಗಳಿವೆ. ಶ್ರೀಮತಿ ಉರ್ಜುಲಾ ಹಿಕ್ಸ್ ಅವರ ಪ್ರಕಾರ, ಆರ್ಥಿಕ ಅಭಿವೃದ್ಧಿ ಎಂಬುದು, ಅಭಿವೃದ್ಧಿ ಹೊಂದದೆ ಇರುವ ರಾಷ್ಟ್ರಗಳ ಸಮಸ್ಯೆಗೆ ಸಂಬಂಧಿಸಿದ್ದರೆ, ಆರ್ಥಿಕ ಬೆಳವಣಿಗೆ ಮುಂದುವರೆದ ರಾಷ್ಟ್ರಗಳ ಸಮಸ್ಯೆಗೆ ಸಂಬಂಧಿಸಿದೆ.

ಸಿ.ಪಿ.ಕಿಂಡ್ಲ್‌ಬರ್ಗ್‌ರ್ ಅವರ ಪ್ರಕಾರ ಆರ್ಥಿಕ ಬೆಳವಣಿಗೆ ಉತ್ಪನ್ನದ ಹೆಚ್ಚಳವನ್ನು ಮಾತ್ರ ಸೂಚಿಸುತ್ತದೆ. ಆದರೆ ಆರ್ಥಿಕ ಅಭಿವೃದ್ಧಿಯು ಉತ್ಪಾದನಾ ತಂತ್ರಜ್ಞಾನ, ಸಾಂಸ್ಥಿಕ ವ್ಯವಸ್ಥೆ ಮತ್ತು ಆದಾಯದ ಹಂಚಿಕೆಯಲ್ಲಿನ ಬದಲಾವಣೆಗಳನ್ನು ಒಳಗೊಂಡಿರುತ್ತದೆ.

ಜಿ.ಕೆ.ಮೆಹತ್‌ರವರು, ಬೆಳವಣಿಗೆ ಮತ್ತು ಅಭಿವೃದ್ಧಿಗಳ ನಡುವಿನ ವ್ಯತ್ಯಾಸದ ಸಾರಾಂಶವನ್ನು ಹೀಗೆ ಹೇಳುತ್ತಾರೆ. ಬೆಳವಣಿಗೆ ಎಂಬುದು ಪರಿಮಾಣಾತ್ಮಕ ಪ್ರಾಮುಖ್ಯತೆಯನ್ನು,

ಅಭಿವೃದ್ಧಿ ಎಂಬುದು ಗುಣಾತ್ಮಕ ಪ್ರಾಮುಖ್ಯತೆಯನ್ನು ಹೊಂದಿದೆ. ವ್ಯಾಪ್ತಿ, ಸ್ವರೂಪ, ಮಾಪನ, ಕಾಲಾವಧಿ ಮುಂತಾದ ವಿಷಯಗಳಲ್ಲಿ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಗಳ ನಡುವೆ ವ್ಯತ್ಯಾಸವನ್ನು ಕೆಳಕಂಡಂತೆ ವಿವರಿಸಬಹುದು.

1. ಬೆಳವಣಿಗೆಯ ವ್ಯಾಪ್ತಿ ಕಿರಿದಾಗಿದ್ದು ಅದು ಆದಾಯದ ಹೆಚ್ಚಳವನ್ನು ಮಾತ್ರ ಪರಿಗಣಿಸುತ್ತದೆ. ಅಭಿವೃದ್ಧಿಯ ವ್ಯಾಪ್ತಿ ವಿಸ್ತಾರವಾಗಿದ್ದು, ಆದಾಯದ ಬೆಳವಣಿಗೆಯೊಂದಿಗೆ ಆರ್ಥಿಕ ವ್ಯವಸ್ಥೆಯಲ್ಲಿನ ಮೂಲಭೂತ ರಚನೆಯ ಬದಲಾವಣೆಗಳು ತಾಂತ್ರಿಕ ಮತ್ತು ಸಾಮಾಜಿಕ ಬದಲಾವಣೆಗಳನ್ನು ಪರಿಗಣಿಸುತ್ತದೆ. ಬೆಳವಣಿಗೆಯು ಒಂದೇ ಆಯಾಮವನ್ನು ಹೊಂದಿದ್ದರೆ, ಅಭಿವೃದ್ಧಿಯು ಹಲವು ಆಯಾಮಗಳನ್ನು ಹೊಂದಿದೆ.

2. ಬೆಳವಣಿಗೆಯು ರಾಷ್ಟ್ರೀಯ ಉತ್ಪನ್ನದ ಪರಿಮಾಣಾತ್ಮಕ ಬದಲಾವಣೆಯನ್ನು ಸೂಚಿಸುತ್ತದೆ. ಅಭಿವೃದ್ಧಿಯು ಆದಾಯದ ಪ್ರಮಾಣ ಮಾತ್ರವಲ್ಲದೆ ಅದರ ರಚನೆಯಲ್ಲಿನ ಬದಲಾವಣೆಗಳನ್ನು, ಗುಣಮಟ್ಟದ ಬದಲಾವಣೆಗಳನ್ನು ಆದಾಯದಲ್ಲಿ ವಿವಿಧ ಆರ್ಥಿಕವಲಯಗಳ ಸಾಪೇಕ್ಷ ಪಾಲಿನಲ್ಲಿ ಉಂಟಾಗುವ ಬದಲಾವಣೆಗಳನ್ನು ಸೂಚಿಸುತ್ತದೆ.

3. ಆದಾಯದ ಬೆಳವಣಿಗೆಯನ್ನು ಸುಲಭವಾಗಿ ಕರಾರುವಕ್ಕಾಗಿ ಅಳೆಯಬಹುದು. ಅಭಿವೃದ್ಧಿಯಲ್ಲಿ ಕಾಣಬರುವ ಮಾನವೀಯ ಅಭಿವೃದ್ಧಿ, ಸಾಮಾಜಿಕ ಬದಲಾವಣೆಗಳು, ಕ್ಷೇಮಾಭಿವೃದ್ಧಿಗಳನ್ನು ಅಳೆಯುವುದು ಕಷ್ಟ.

4. ಆರ್ಥಿಕ ಅಭಿವೃದ್ಧಿ ಆಗದಿದ್ದರೂ ಬೆಳವಣಿಗೆ ಸಾಧ್ಯ. ಆದರೆ ಬೆಳವಣಿಗೆಯಾಗದೆ ಅಭಿವೃದ್ಧಿ ಆಗಲಾರದು.

5. ಈಗಾಗಲೇ ಅಭಿವೃದ್ಧಿ ಸಾಧಿಸಿರುವ ರಾಷ್ಟ್ರಗಳಲ್ಲಿ ಆರ್ಥಿಕ ಬೆಳವಣಿಗೆಯೇ ಪ್ರಧಾನ ಅಂಶ ಆದರೆ ಮುಂದುವರೆಯುತ್ತಿರುವ ರಾಷ್ಟ್ರಗಳಲ್ಲಿ ಅಭಿವೃದ್ಧಿಯೇ ಪ್ರಮುಖ ಅಗತ್ಯವಾಗಿರುತ್ತದೆ.

6. ಆರ್ಥಿಕ ಬೆಳವಣಿಗೆ, ಸ್ಥಿರವಾದ, ನಿರಂತರವಾದ ದೀರ್ಘಕಾಲಿಕ ವಿದ್ಯಮಾನವಾಗಿದೆ. ಆರ್ಥಿಕ ಅಭಿವೃದ್ಧಿ ಸ್ಥಿರವಾಗಿಲ್ಲದ, ನಿರಂತರವಲ್ಲದ, ಏರು ಪೇರುಗಳಿಂದ ಕೂಡಿದ ಕ್ರಿಯೆ ಆಗಿರುತ್ತದೆ.

7. ಆರ್ಥಿಕ ಬೆಳವಣಿಗೆಯು ಸ್ವಯಂಪ್ರೇರಿತ ಕ್ರಿಯೆ, ಇದಕ್ಕೆ ರಾಷ್ಟ್ರೀಯ ಯೋಜನೆ, ಸರಕಾರದ ಹಸ್ತಕ್ಷೇಪ ಹಾಗೂ ಹೆಚ್ಚಿನ ನಿರ್ಬಂಧಗಳಿರುವುದಿಲ್ಲ. ಆದರೆ ಪ್ರಗತಿ ಸಾಧಿಸುವಲ್ಲಿ ರಾಷ್ಟ್ರೀಯ ಯೋಜನೆಗಳು ಅಗತ್ಯ. ಇದರ ಅನುಷ್ಠಾನ ಹಾಗೂ ಆದಾಯದ ಮರುಹಂಚಿಕೆ ಮತ್ತು ಸಾಮಾಜಿಕ ಪ್ರಗತಿ ಸಾಧನೆಯಲ್ಲಿ ಸರ್ಕಾರದ ಮಧ್ಯಪ್ರವೇಶ, ನಿರ್ದೇಶನ, ನೆರವು ಹೆಚ್ಚಾಗಿರುತ್ತದೆ." [6]

ಈ ಮೇಲಿನ ಮಾಹಿತಿಯನ್ನು ಅನುವಾದಕರು ಪ್ರಮುಖ ಅರ್ಥಶಾಸ್ತ್ರಜ್ಞರ ಹೇಳಿಕೆಗಳೊಂದಿಗೆ ವ್ಯತ್ಯಾಸಗಳ ಪಟ್ಟಿಯನ್ನು ನೀಡಿರುತ್ತಾರೆ. ಆದರೆ ಈ ಅನುವಾದಕರು ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಯ ಅರ್ಥವನ್ನು ತಿಳಿಸುವ ಸಂದರ್ಭದಲ್ಲಿ ಪ್ರಮುಖ

ಅರ್ಥಶಾಸ್ತ್ರಜ್ಞರ ವ್ಯಾಖ್ಯಾನಗಳನ್ನು ಸಾಕಷ್ಟು ನೀಡಿರುವುದರಿಂದ ಅಧ್ಯಯನದ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಉಪನ್ಯಾಸಕರಿಗೆ ನೆನಪಿನಲ್ಲಿ ಉಳಿಸಿಕೊಳ್ಳುವುದು ತುಂಬಾ ಅನುಕೂಲ ಎಂದು ತಿಳಿಯುವುದು ಕಷ್ಟ.

"1.1 (ಬ) ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿಗಳ ನಡುವಿನ ವ್ಯಾತ್ಯಾಸಗಳು

ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿ ಎಂಬ ಎರಡೂ ಪದಗಳನ್ನು ಸಾಮಾನ್ಯವಾಗಿ ಒಂದೇ ಅರ್ಥದಲ್ಲಿ ಉಪಯೋಗಿಸುವುದುಂಟು. ಆದರೆ ಅವೆರಡೂ ಪದಗಳು ಒಂದೇ ಅರ್ಥವನ್ನು ಕೊಡುವುದಿಲ್ಲ. ಅವೆರಡರಲ್ಲಿ ಕೆಲವು ವ್ಯಾತ್ಯಾಸಗಳಿವೆ. ಈ ವ್ಯತ್ಯಾಸಗಳನ್ನು ಕೆಳಗೆ ಕೊಟ್ಟಿದೆ.

1. ಆರ್ಥಿಕ ಬೆಳವಣಿಗೆ ಎಂದರೆ ದೇಶದ ಪ್ರತಿ ತಲಾ ಉತ್ಪನ್ನದಲ್ಲಿನ ಅಥವಾ ವರಮಾನದಲ್ಲಿನ ಅವಿರತವಾದ ಗಾತ್ರತ್ರಕ ಹೆಚ್ಚಳವಾಗಿದೆ. ಈ ಹೆಚ್ಚಳದೊಂದಿಗೆ ಕಾರ್ಮಿಕರ ಸಂಖ್ಯೆಯಲ್ಲಿ ಹೆಚ್ಚಳ, ಅನುಭೋಗ ಮತ್ತು ವ್ಯಾಪಾರದ ಪ್ರಮಾಣದಲ್ಲಿ ಹೆಚ್ಚಳವಾಗುತ್ತದೆ.

ಆದರೆ ಆರ್ಥಿಕ ಆಭಿವೃದ್ಧಿಯು ಆರ್ಥಿಕ ಬೆಳವಣಿಗೆಗಿಂತಲೂ ವಿಶಾಲವಾದ ಪದವಾಗಿದೆ. ಅದು ಆರ್ಥಿಕ ಬೇಡಿಕೆಗಳು, ಸರಕುಗಳು, ಉತ್ತೇಜಕಗಳು ಮತ್ತು ಸಂಸ್ಥೆಗಳಲ್ಲಿ ಪರಿಮಾಣಾತ್ಮಕ ಬದಲಾವಣೆಗೆ ಸಂಬಂಧಿಸಿರುತ್ತದೆ. ಅದು ಬೆಳವಣಿಗೆಯ ಮೂಲಭೂತ ನಿರ್ಧಾರಕಗಳಾದ ತಾಂತ್ರಿಕ ಮತ್ತು ರಚನಾತ್ಮಕ ಬದಲಾವಣೆಗಳನ್ನು ವಿವರಿಸುತ್ತದೆ.

2. ಆರ್ಥಿಕ ಬೆಳವಣಿಗೆ ಎಂದರೆ ಆರ್ಥಿಕ ಚಲಕಗಳಾದ ರಾಷ್ಟ್ರೀಯ ಉತ್ಪನ್ನ ರಾಷ್ಟ್ರೀಯ ವರಮಾನ ಬಂಡವಾಳದ ಪ್ರಮಾಣ ಕೈಗಾರಿಕೆಗಳ ಸಂಖ್ಯೆ ಮತ್ತು ಗಾತ್ರ ಇವೆ ಮೊದಲಾದವುಗಳಲ್ಲಿನ ಅವಿರತ / ಅವಿಶ್ರಾಂತ ಹೆಚ್ಚಳವಾಗಿದೆ.

ಆದರೆ ಆರ್ಥಿಕ ಅಭಿವೃದ್ಧಿ ಎಂದರೆ ಜನಸಾಮಾನ್ಯರ ಜೀವನ ಮಟ್ಟದಲ್ಲಿ ಹೆಚ್ಚಳ, ರಾಷ್ಟ್ರೀಯ ವರಮಾನದಲ್ಲಿನ ಹೆಚ್ಚಳ, ಪ್ರತಿ ತಲಾ ವರಮಾನದಲ್ಲಿ ಹೆಚ್ಚಳ, ಜನಸಂಖ್ಯೆಯು ಏರಿಕೆಗಿಂತಲೂ ಒಟ್ಟು ವರಮಾನ ಹಾಗೂ ಪ್ರತಿ ತಲಾ ವರಮಾನಗಳ ಏರಿಕೆಯು ಅಧಿಕವಾಗಿರುವುದು, ಒಟ್ಟಿನಲ್ಲಿ ಜನರ ಕಲ್ಯಾಣದಲ್ಲಿ ಹೆಚ್ಚಳವಾಗುತ್ತದೆ.

3. ಆರ್ಥಿಕ ಬೆಳವಣಿಗೆ ಎಂದರೆ ಅನೇಕ ಆರ್ಥಿಕ ಚಲಕಗಳಲ್ಲಿನ ಹೆಚ್ಚಳ ಅಥವಾ ವಿಸ್ತರಣೆಯಾಗಿದೆ ಮತ್ತು ಅವುಗಳಲ್ಲಿ ಇಳಿಕೆಯಾಗುವುದೇ ಇಲ್ಲ.

ಆದರೆ ಆರ್ಥಿಕ ಅಭಿವೃದ್ಧಿಯಲ್ಲಿ ಬೆಳವಣಿಗೆಯು ಆಗಬಹುದು ಮತ್ತು ಇಳಿಕೆಯು ಆಗಬಹುದು.

4. ಆರ್ಥಿಕ ಬೆಳವಣಿಗೆಯು ಆರ್ಥಿಕ ವ್ಯವಸ್ಥೆಯಲ್ಲಿ ಅನುಕೂಲಕರವಾದ ಸ್ಥಿತಿಗತಿಗಳಿರುವುದರಿಂದ ಮತ್ತು ದೇಶದ ಜನರು ಸಾಹಸಿ ಉದ್ದಿಮೆದಾರರು ಆಗಿರುವುದರಿಂದ ತಂತ್ರಜ್ಞಾನ ಮೊದಲಾದವುಗಳು ಬೆಳೆದಿರುವುದರಿಂದ ಸಾಧ್ಯವಾಗುತ್ತದೆ ಅದರಲ್ಲಿ, ಸರಕಾರದ

ಪಾತ್ರವೇನು ಇರುವುದಿಲ್ಲ.

ಆದರೆ ಆರ್ಥಿಕ ಅಭಿವೃದ್ಧಿಯಲ್ಲಿ ಸರಕಾರದ ಪಾತ್ರವು ಅತ್ಯಂತ ಮುಖ್ಯವಾಗಿರುತ್ತದೆ. ಸರಕಾರವು ಸುವ್ಯವಸ್ಥಿತವಾಗಿ ರಚಿಸಿದ ಯೋಜನೆಯ ಮೂಲಕ ದೇಶದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಕ್ರಮಕೈಗೊಳ್ಳುತ್ತದೆ.

5. ಆರ್ಥಿಕ ಬೆಳವಣಿಗೆಯು ಸಂಕುಚಿತವಾದ ಪದವಾಗಿದೆ ಆದರೆ ಆರ್ಥಿಕ ಅಭಿವೃದ್ಧಿಯು ವಿಶಾಲವಾದ ಪದವಾಗಿದೆ. ಆರ್ಥಿಕ ಬೆಳವಣಿಗೆಯು ಉತ್ಪನ್ನದಲ್ಲಿನ (**Output**) ಬದಲಾವಣೆಯನ್ನು ಸೂಚಿಸುತ್ತದೆ. ಆದರೆ ಆರ್ಥಿಕ ಅಭಿವೃದ್ಧಿಯು ಕೇವಲ ಉತ್ಪನ್ನದ ಬೆಳವಣಿಗೆಯನ್ನಲ್ಲದೇ ಅರ್ಥವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆಗಳನ್ನು ಸೂಚಿಸುತ್ತದೆ, ಏಕೆಂದರೆ ಆರ್ಥಿಕ ಅಭಿವೃದ್ಧಿಯು ಕೇವಲ ಉತ್ಪನ್ನದಲ್ಲಿನ ಹೆಚ್ಚಳವಿಲ್ಲದೆ, ದೇಶದ ಒಟ್ಟು ವರಮಾನ, ಜನರ ಪ್ರತಿತಲಾ ವರಮಾನ, ಬಡತನ ನಿವಾರಣೆ, ನಿರುದ್ಯೋಗ ನಿವಾರಣೆ, ಶಿಕ್ಷಣ ಮಟ್ಟದಲ್ಲಿ ಹೆಚ್ಚಳ, ಉತ್ಪಾದನಾ ತಂತ್ರಗಳಲ್ಲಿ ಬದಲಾವಣೆ, ಜನರ ಜೀವನ ಮಟ್ಟದಲ್ಲಿ ಸುಧಾರಣೆ ಇವೇ ಮೊದಲಾದ ಅಂಶಗಳು ಒಳಗೊಂಡಿರುತ್ತವೆ.

6. ಆರ್ಥಿಕ ಬೆಳವಣಿಗೆ ಎಂಬ ಪರಿಭಾವನೆಯು ಅಭಿವೃದ್ಧಿತ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಅನ್ವಯಿಸುತ್ತದೆ. ಏಕೆಂದರೆ ಈ ರಾಷ್ಟ್ರಗಳಲ್ಲಿ ಆರ್ಥಿಕ ಜೀವನವು ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಉನ್ನತ ಮಟ್ಟವನ್ನು ತಲುಪಿರುತ್ತದೆ. ಮತ್ತು ಅರ್ಥವ್ಯವಸ್ಥೆಯು ಕೇವಲ ಬೆಳೆಯುವುದರಿಂದ, ಅಲ್ಲಿನ ಜನರಿಗೆ ತಮ್ಮ ಶ್ರೀಮಂತ ಜೀವನದ ಗುಣಮಟ್ಟವನ್ನು ಮತ್ತು ಗಾತ್ರವನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ.

ಆದರೆ ಆರ್ಥಿಕ ಬೆಳವಣಿಗೆ ಎಂಬ ಪದವು ಅರೆಅಭಿವೃದ್ಧಿ ಹೊಂದಿದ ಭಾರತದಂತಹ ರಾಷ್ಟ್ರಗಳಿಗೆ ಏಳ್ಳಷ್ಟು, ಉಪಯುಕ್ತವಾಗಲಾರದು. ಆದ್ದರಿಂದ ಅವುಗಳಿಗೆ ಆರ್ಥಿಕ ಅಭಿವೃದ್ಧಿ ಎಂಬ ಪದವು ಅರೇ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಬಹಳೇ ಉಪಯುಕ್ತವಾಗುತ್ತದೆ. ಏಕೆಂದರೆ ಆರ್ಥಿಕ ಅಭಿವೃದ್ಧಿ ಎಂಬ ಪದವು ಬೆಳವಣಿಗೆಯನ್ನು ಮತ್ತು ಅಭಿವೃದ್ಧಿಯನ್ನು ಕೂಡಿಯೇ ಒಳಗೊಂಡಿರುತ್ತದೆ. ಬೆಳವಣಿಗೆ ಮತ್ತು ಅಭಿವೃದ್ಧಿ ಈ ಎರಡೂ ಪದಗಳು ಅವುಗಳ ಆರ್ಥಿಕ ಪ್ರಗತಿಗೆ ಅತ್ಯಾವಶ್ಯಕವಾಗಿರುತ್ತವೆ.

7. ಅಭಿವೃದ್ಧಿತ (**Developed**) ರಾಷ್ಟ್ರಗಳಿಗೆ ಸಂಬಂಧಿಸಿದಂತೆ, ಬೆಳವಣಿಗೆಯನ್ನು ಮುಂದುವರೆಸಲು ಪ್ರಮುಖ ಆರ್ಥಿಕ ಸಮಸ್ಯೆಗಳಾದ ವ್ಯಾಪಾರಿ ಚಕ್ರಗಳ ನಿವಾರಣೆ ಪರಿಣಾಮಕಾರಿ ಬೇಡಿಕೆಯನ್ನು ಕಾಯ್ದುಕೊಳ್ಳುವುದು, ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆ, ಮಾರುಕಟ್ಟೆಯ ವಿಸ್ತರಣೆ, ಇವೇ ಮೊದಲಾದವುಗಳಿಗೆ ಅವು ತಮ್ಮ ಗಮನವನ್ನು ಕೇಂದ್ರಿಕರಿಸಬೇಕಾಗುತ್ತದೆ.

ಆದರೆ ಅರೇ ಅಭಿವೃದ್ಧಿ ಹೊಂದಿದ ಭಾರತದಂತಹ ರಾಷ್ಟ್ರಗಳಿಗೆ ಸಂಬಂಧಿಸಿದಂತೆ ಅವು ಕೇವಲ ಆರ್ಥಿಕ ಸಮಸ್ಯೆಗಳನ್ನಷ್ಟೆಯಲ್ಲದೆ, ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳನ್ನು

ಸಹ ಪರಿಹರಿಸಲು ತಮ್ಮ ಗಮನವನ್ನು ಕೇಂದ್ರಿಕರಿಸಬೇಕಾಗುತ್ತದೆ." [7]

ಈ ಮೇಲಿನ ಪರಿಚ್ಛೇದವನ್ನು ಪರಿಶೀಲಿಸಲಾಗಿ ಅನುವಾದಕರು ಅನೇಕ ಹೊಸ ಹೊಸ ಕನ್ನಡದ ಪದಗಳನ್ನು ಬಳಸಿರುವುದು ಕಂಡುಬರುತ್ತದೆ. ಇತರ ಕನ್ನಡ ಮಾಧ್ಯಮದ ಪಠ್ಯಪುಸ್ತಕಗಳಲ್ಲಿ ಇಲ್ಲದೆ ಇರುವ ಹೊಸ ಪದಗಳು ಉಪನ್ಯಾಸಕ ಮತ್ತು ವಿದ್ಯಾರ್ಥಿಗಳ ಮೆಚ್ಚುಗೆಗೆ ಕಾರಣವಾಗುವ ಸಾಧ್ಯತೆಗಳಿವೆ ಅಲ್ಲದೆ ತೀರಾ ಪ್ರಾದೇಶಿಕ ಪದಗಳ ಬಳಕೆಯಾಗಿರುವದನ್ನು ಕಾಣಬಹುದಾಗಿದೆ.

**" Differences between Economic growth and Economic Development**

The following are some of the major differences between Economic growth and Economic development.

| **Economic Growth** | **Economic Development** |
| --- | --- |
| 1 It is a narrow concept as it indicates only rise in per capita income and consumption | 1. It is a wider concept as it indicates the growth of national income and standard of living of the people |
| 2.It is quantitative study as it deals mainly with the increase in output of goods and Services | 2. It is aqualitative study, because it studies both increase in the productionof goods and services and institutional changes |
| 3. It relates to developed countries, because growth helps to rise higher standard of living people with higher consumption. | 3. It relates to under developed countries, because it helps for the development of all sectors of the economy |
| 4. It is a macro Economic study | 4. It is a micro economic study |
| 5. Less governmental interference as the economy has developed in all fields | 5.Here there will be more Govt. Interference to achive planed development |
| 6. It may not ensure the | 6. It ensure the welfare of the |

| | |
|---|---|
| welfare of the of people, as it is a free economy. | people country |
| 7. It is a long term economic phenomenon process. | 7. It is a short period economic after reaching certain stage in changes ” [8] |

ಈ ಮೇಲಿನ ವಿಷಯವು ಅಧ್ಯಯನದ ದೃಷ್ಟಿಯಿಂದ ಅಗತ್ಯ ಮಾಹಿತಿ ದೊರೆಯುತ್ತದೆ. ಹೆಚ್ಚಿನ ಗೊಂದಲವಿಲ್ಲದೆ ಕೇವಲ ವ್ಯಾತ್ಯಾಸಗಳನ್ನು ಮಾತ್ರ ಪಟ್ಟಿಯ ಮೂಲಕ ನೀಡಿರುವುದು ಸೂಕ್ತವಾಗಿದೆ. ಪರೀಕ್ಷೆಗಾಗಿ ವಿದ್ಯಾರ್ಥಿಗಳು ನೆನಪಿನಲ್ಲಿಡಲು ನೇರವಾಗುವಂತಹ ಮಾಹಿತಿ ಇದರಿಂದ ಲಭ್ಯವಾಗುತ್ತದೆ. ಇದರಲ್ಲಿ ಯಾವುದೆ ಸಮಸ್ಯೆಗೆ ಆಸ್ಪದವಾಗುವಂತಹ ವಿಚಾರವಿರುವುದಿಲ್ಲ. ಆದರೆ ಒಟ್ಟು ಸರಾಂಶವನ್ನು ತಿಳಿಸುವ ಅಂಶಗಳಿದ್ದರೆ ಇನ್ನಷ್ಟು ಸುಲಭವಾಗುತ್ತಿತ್ತು.

**“1.1.2. ಅವಿಶ್ರಾಂತ ಅಭಿವೃದ್ಧಿ**

(Sustainable development )

ಅವಿಶ್ರಾಂತ ಅಭಿವೃದ್ಧಿ ಅಥವಾ ಸಮರ್ಥನೀಯ ಅಭಿವೃದ್ಧಿ ಎಂಬ ಪರಿಕಲ್ಪನೆಯು ತೀರಾ ಇತ್ತೀಚಿನ ಬೆಳವಣಿಗೆಯಾಗಿದೆ. ಈ ಪರಿಕಲ್ಪನೆಯನ್ನು 1980ರಲ್ಲಿ ನಿಸರ್ಗ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯ ಅಂತರರಾಷ್ಟ್ರೀಯ ಕೂಟ (Inter national Union for the Conservation of Nature and Natural Resources) ವು ಮಂಡಿಸಿದ ಜಾಗತಿಕ ಸಂರಕ್ಷಣೆ ಕಾರ್ಯನೀತಿ (World Conservation stratejy) ಯಲ್ಲಿ ಮೊಟ್ಟ ಮೊದಲ ಬಾರಿಗೆ ಬಳಸಿಕೊಳ್ಳಲಾಯಿತು. ಈ ಕ್ಷೇತ್ರಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಶೀಲಿಸಲು ವಿಶ್ವ ಸಂಸ್ಥೆಯು 1983ರಲ್ಲಿ ಬ್ರಂಟ್‌ಲ್ಯಾಂಡ್ ಆಯೋಗ (Bruntland commission) ಎಂದು ಕರೆಯಲಾಗುವ ಪರಿಸರ ಮತ್ತು ಅಭಿವೃದ್ಧಿ ಮೇಲಿನ ಜಾಗತಿಕ ಆಂಯೋಗ (world Commission on Enveronment and Development)ವನ್ನು ರಚಿಸಿತು. ಈ ಆಯೋಗವು 1997ರಲ್ಲಿ ಸಲ್ಲಿಸಿದ “ನಮ್ಮ ಸಾಮಾನ್ಯ ಭವಿಷ್ಯ” (Our Common Future) ಎಂಬ ವರದಿಯಲ್ಲಿ ಅವಿಶ್ರಾಂತ ಅಭಿವೃದ್ಧಿ (ಸಮರ್ಥನೀಯ ಅಭಿವೃದ್ಧಿ) ಎಂಬ ಪರಿಕಲ್ಪನೆಯನ್ನು ಮೊಟ್ಟಮೊದಲ ಬಾರಿಗೆ ವ್ಯಾಖ್ಯಾನಿಸಿ ಬಳಸಿಕೊಂಡಿತು.

**ಅವಿಶ್ರಾಂತ ಅಭಿವೃದ್ಧಿಯ ಅರ್ಥವಿವರಣೆ**

( Meaning of Sustainable Development)

ಅವಿಶ್ರಾಂತ ಅಭಿವೃದ್ಧಿ ಎಂಬುದು ಸುದೀರ್ಘ ಕಾಲ ಅಸ್ತಿತ್ವದಲ್ಲಿರುವ ಅಭಿವೃದ್ಧಿಯಾಗಿದೆ.

ಅಂದರೆ, ಅವಿಶ್ರಾಂತ ಎಂದರೆ ಸದಾ ಮುಂದುವರೆಯುವ ಅಭಿವೃದ್ಧಿಯಾಗಿದೆ. ಈ ಅಭಿವೃದ್ಧಿಯು ಬಹಳ ಕಾಲ ಮುಂದುವರಿಯುತ್ತದೆ ಮತ್ತು ನೈಸರ್ಗಿಕ ವಾತಾವರಣದ ಸುಧಾರಣೆಯ ಮೂಲಕ ಜೀವನದ ಗುಣಮಟ್ಟಕ್ಕೆ ಕೊಡುಗೆ ಸಲ್ಲಿಸುತ್ತದೆ. ಇತ್ತೀಚಿನ ದಿನಗಳಲ್ಲಿ ವಾಯುಮಾಲಿನ್ಯ, ಜಲಮಾಲಿನ್ಯ, ಭೂಸವೆತ, ಅರಣ್ಯನಾಶ, ಆಮ್ಲಮಳೆ(Acid rains) ಓಝೋನ್ ಸ್ತರದ ನಾಶ ಮುಂತಾದ ಪರಿಸರ ಸಂಬಂಧಿ ಸಮಸ್ಯೆಗಳ ಬಗ್ಗೆ ಅರಿವು ಮೂಡಲಾರಂಭಿಸಿದೆ. ಅವಿಶ್ರಾಂತ ಅಭಿವೃದ್ಧಿ ಎಂಬ ಪರಿಕಲ್ಪನೆಯು ಈ ಎಲ್ಲಾ ಜಾಗತಿಕ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಹುಡುಕುವ ಪ್ರಯತ್ನ ನಡೆಸುತ್ತಿದೆ.

ಅವಿಶ್ರಾಂತ ಅಭಿವೃದ್ಧಿ ಎಂಬ ಪರಿಕಲ್ಪನೆಯನ್ನು ವ್ಯಾಖ್ಯಾನಿಸಲು ಅನೇಕ ಮಂದಿ ಪ್ರಯತ್ನಿಸಿದ್ದಾರೆ. ಕೆಲವು ಜನಪ್ರಿಯ ವ್ಯಾಖ್ಯಾನಗಳ ಪರಿಚಯ ಈ ಕೆಳಗೆ ಲಭ್ಯವಿದೆ.

ಬ್ರಂಟ್‌ಲ್ಯಾಂಡ್ ವರದಿಯ ಪ್ರಕಾರ ಅವಿಶ್ರಾಂತ ಅಭಿವೃದ್ಧಿ ಎಂದರೆ "ಮುಂದಿನ ಪೀಳಿಗೆಯ ಅಗತ್ಯಗಳೊಂದಿಗೆ ಯಾವುದೇ ರಾಜಿ ಇಲ್ಲದೆ ಇಂದಿನ ಪೀಳಿಗೆಯ ಅಗತ್ಯಗಳನ್ನು ಪೂರೈಸುವುದು."

ಡಿ. ಡಬ್ಲ್ಯು. ಪಿಯರ್ಸ್ ಮತ್ತು ಈ. ಬಾರ್ಬಿಯರ್ ಅವರ ಪ್ರಕಾರ, "ಅವಿಶ್ರಾಂತ ಅಭಿವೃದ್ಧಿಯು ನೈಸರ್ಗಿಕ ಸಂಪನ್ಮೂಲಗಳ ತಳಪಾಯವು ಕೆಡಲು ಅವಕಾಶ ನೀಡದಿರುವ ಪ್ರಕ್ರಿಯೆಯನ್ನು ವಿವರಿಸುತ್ತದೆ. ಅದು ನೈಜ ಆದಾಯ ಮತ್ತು ಜೀವನದ ಗುಣಮಟ್ಟವನ್ನು ಹೆಚ್ಚಿಸುವ ಪ್ರಕ್ರಿಯೆಯಲ್ಲಿ ಇದುವರೆಗೆ ಉಪೇಕ್ಷಿಸಲಾಗಿದ್ದ ಪರಿಸರದ ಗುಣಮಟ್ಟ ಮತ್ತು ಪರಿಸರದ ಆದಾನಗಳು ವಹಿಸುವ ಪಾತ್ರಕ್ಕೆ ಆದ್ಯತೆ ನೀಡುತ್ತದೆ."

2000ರ ವಿಶ್ವ ಅಭಿವೃದ್ಧಿ ವರದಿಯು ಎಲ್ಲಾ ಜನರ ಜೀವನದ ಗುಣಮಟ್ಟದಲ್ಲಿನ ಸಮರ್ಥನೀಯ ಸುಧಾರಣೆಯ ಸೃಷ್ಟಿಯು ಅಭಿವೃದ್ಧಿ ನೀತಿಯ ಪ್ರಮುಖ ಗುರಿಯಾಗಿರಬೇಕು ಎಂದು ಒತ್ತಿ ಹೇಳಿದೆ.

ಆದ್ದರಿಂದ, ಸಮರ್ಥನೀಯ ಅಥವಾ ಅವಿಶ್ರಾಂತ ಅಭಿವೃದ್ಧಿ ಪರಿಕಲ್ಪನೆಯು ಅಭಿವೃದ್ಧಿ, ಪರಿಸರ ಸಂರಕ್ಷಣೆ ಮತ್ತು ಸಂರಕ್ಷಣೆ ವಿಚಾರಗಳಿಗೆ ಸಮಾನ ಆದ್ಯತೆ ನೀಡುತ್ತದೆ. ಅದು ತಲಾದಾಯದಲ್ಲಿರುವ ಏರಿಕೆ, ಶಿಕ್ಷಣ, ಆರೋಗ್ಯ ಮತ್ತು ಜೀವನದ ಸಾಮಾನ್ಯ ಗುಣಮಟ್ಟದಲ್ಲಿನ ಸುಧಾರಣೆ ಹಾಗೂ ನೈಸರ್ಗಿಕ ಪರಿಸರ ಸಂಪನ್ಮೂಲಗಳ ಗುಣಮಟ್ಟದಲ್ಲಿ ಸುಧಾರಣೆಯ ಮೂಲಕ ಎಲ್ಲಾ ಜನರ ಜೀವನದ ಗುಣಮಟ್ಟದಲ್ಲಿ ಸಮರ್ಥನೀಯ ಸುಧಾರಣೆಯ ಸೃಷ್ಟಿಗೆ ಹೆಚ್ಚು ಒತ್ತು ನೀಡುತ್ತದೆ. ಅದು ಕಾಲಾ ನಂತರದಲ್ಲಿ ಆರ್ಥಿಕ ಅಭಿವೃದ್ಧಿಯು ಕಡಿಮೆಗೊಳ್ಳದ ಸ್ಥಿತಿಯನ್ನು ಬಿಂಬಿಸುತ್ತದೆ.

ಕಳೆದ ಹಲವಾರು ವರ್ಷಗಳಲ್ಲಿ ಕೈಗಾರಿಕಾ ಅಭಿವೃದ್ಧಿಗಾಗಿ ಕಂಡು ಬಂದ ಹುಚ್ಚು ಆತುರವು ಬೃಹತ್ ಪ್ರಮಾಣದ ಪರಿಸರ ವಿನಾಶ ಮತ್ತು ಸಂಪನ್ಮೂಲಗಳ ಬರಿದಾಗುವಿಕೆಗೆ ದಾರಿ ಮಾಡಿತು. ಇಂತಹ ಪರಿಸರ ವಿನಾಶವನ್ನು ತಡೆಗಟ್ಟುವ ಮೂಲಕ ಪರಿಸರವನ್ನು

ಸಂರಕ್ಷಿಸುವ ಮತ್ತು ಸುಧಾರಿಸುವ ಕಾರ್ಯವನ್ನು ಕೈಗೆತ್ತಿಕೊಂಡಾಗ ಮಾತ್ರ ಸಮರ್ಥನೀಯ ಅಭಿವೃದ್ಧಿ ಸಾಧನೆ ಸಾಧ್ಯವಾಗುತ್ತದೆ. ಆದ್ದರಿಂದ, " ಒಟ್ಟಾರೆ ಬಂಡವಾಳ ಆಸ್ತಿಗಳ ಸಂಗ್ರಹವು ಕಾಲ ನಂತರದಲ್ಲಿ ಸ್ಥಿರವಾಗಿದ್ದರೆ ಅಥವಾ ಹೆಚ್ಚಳಗೊಂಡರೆ ಮಾತ್ರ ಅಭಿವೃದ್ಧಿ ಪಥವು ಸಮರ್ಥನೀಯವಾಗಿರುತ್ತದೆ" ೨.

ಅನುವಾದಕರು ಅವಿಶ್ರಾಂತ ಅಭಿವೃದ್ಧಿಯನ್ನು ಕುರಿತು ಇರಬಹುದಾದ ಹಲವು ಮಾಹಿತಿಗಳನ್ನು ತಜ್ಞರ ವ್ಯಾಖ್ಯಾನಗಳೊಂದಿಗೆ ಅನುವಾದಿಸಿರುತ್ತಾರೆ. ಇಲ್ಲಿನ ಮಾಹಿತಿಯು ಒಮ್ಮೊಮ್ಮೆ ಅಧಿಕವೆನಿಸಿದರೂ ಜ್ಞಾನದ ದೃಷ್ಟಿಯಿಂದ ಸೂಕ್ತ ಎನಿಸಿದೆ. ಆದರೆ ಪಿಯುಸಿ ವಿದ್ಯಾರ್ಥಿಗಳಿಗೆ ಇಷ್ಟೊಂದು ಮಾಹಿತಿ ಭಾರ ಎನಿಸಬಹುದು ಎನ್ನುವ ಅನುಮಾನ ಬರುವ ಸಾಧ್ಯತೆಗಳಿವೆ.

**" ಈ. ಜೈವಿಕ ಪರಿಸರಕ್ಕೆ ಸಂಬಂಧಿಸಿದಂತೆ ಸುಸ್ಥಿರಗತಿಯ ಅಭಿವೃದ್ಧಿ**

ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಹೆಚ್ಚಿನ ಅಭಿವೃದ್ಧಿ ಸಾಧಿಸಲು ಹಾಗೂ ಇತರೆ ರಾಷ್ಟ್ರಗಳ ಮೇಲೆ ಹಿಡಿತ ಸಾಧಿಸಲು ತೀವ್ರ ಪೈಪೋಟಿ ನಡೆಸುತ್ತಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ತಮ್ಮ ಸಮಸ್ಯೆಗಳನ್ನು ಪರಿಹರಿಸಿ ಹೆಚ್ಚಿನ ಆದಾಯ ಸಾಧಿಸಲು ಹೆಣಗಾಡುತ್ತಿವೆ. ಈ ಪ್ರಯತ್ನದಲ್ಲಿ ಸಂಪನ್ಮೂಲಗಳ ಬಳಕೆ ಅಪಾರವಾಗಿದೆ, ಹಲವು ಬಾರಿ ಅಗತ್ಯಕ್ಕಿಂತ ಹೆಚ್ಚು ಬಳಕೆ ಹಾಗೂ ವಿವೇಚನಾ ರಹಿತ ಬಳಕೆ, ವ್ಯರ್ಥ ಬಳಕೆ ಆಗುತ್ತಿದೆ. ಅದರ ಪರಿಣಾಮ ಸಂಪನ್ಮೂಲಗಳ ಬರಿದಾಗುವಿಕೆ, ಕೊರತೆ, ಪರಿಸರ ಮಾಲಿನ್ಯ ಪರಿಸರದ ಅಸಮತೋಲನಾ ಉಂಟಾಗಿ ಜೀವನ ವೈವಿಧ್ಯತೆಯ ನಾಜೂಕಾದ ಸಮತೋಲನದಲ್ಲಿ ಏರುಪೇರು ಉಂಟಾಗಿದೆ.

ಶುದ್ಧ ಜಲಮೂಲಗಳ ನಾಶ, ವಾಯುಮಾಲಿನ್ಯದಿಂದ ರೋಗಗಳ ಹರಡುವಿಕೆ, ಭೂಮಿಯ ಫಲವತ್ತತೆಯ ನಾಶ, ಅರಣ್ಯಗಳ ನಾಶ, ಹಸಿರುಮನೆ ಪರಿಣಾಮ, ಓಜೋನ್ ಪದರದ ಹಾಳಾಗುವಿಕೆ, ಆಮ್ಲದ ಮಳೆ ಉಂಟಾಗುತ್ತಿದೆ. ಇದರಿಂದ ಇಂದಿನ ಪೀಳಿಗೆಯ ಜೀವನ ದುಸ್ಥರವಾಗಿದ್ದು ಮುಂದಿನ ಪೀಳಿಗೆಗೆ ಉತ್ತಮ ಜೀವನದ ಎಲ್ಲಾ ಅವಶ್ಯಕ ಸೌಲಭ್ಯಗಳ ಕೊರತೆಯಾಗಲಿದೆ. ಆದ್ದರಿಂದ ಈಗಿನ ಪೀಳಿಗೆಯ ಅವಶ್ಯಕತೆಗಳನ್ನು ಪೂರೈಸುವುದಲ್ಲದೆ ಮುಂದಿನ ಪೀಳಿಗೆಗಳ ಉತ್ತಮ ಜೀವನಕ್ಕೆ ಅಗತ್ಯವಾದ ಸಂಪನ್ಮೂಲಗಳು, ಪರಿಸರ ಹಾಗೂ ಪರಿಸ್ಥಿತಿಗಳನ್ನು ಸೃಷ್ಟಿಸುವ ಬಗ್ಗೆ ಪರಿಸರವನ್ನು ಸಂರಕ್ಷಿಸುವ ಹಾಗೂ ಉತ್ತಮವಾಗಿ ಬಳಸುವ ಕಡೆಗೆ ಹೆಚ್ಚಿನ ಗಮನ ನೀಡಬೇಕಾಗಿದೆ. ಇದಕ್ಕಾಗಿ ಸುಸ್ಥಿರಗತಿಯ ಅಭಿವೃದ್ಧಿಯ ಪರಿಕಲ್ಪನೆ ರೂಪಿಸಲಾಗಿದೆ.

ಪರಿಸರ ಸಂರಕ್ಷಣೆಯೊಂದಿಗೆ ಪ್ರಗತಿ ಸಾಧಿಸುವ ಕುರಿತು ಅಧ್ಯಯನ ಮಾಡಲು ವಿಶ್ವ ಸಂಸ್ಥೆಯು 1983ರಲ್ಲಿ ಬ್ರಂಟ್‌ಲ್ಯಾಂಡ್ ಸಮಿತಿ ರಚಿಸಿತು. ಸಮಿತಿಯು 1987ರಲ್ಲಿ "ಅವರ್ ಕಾಮನ್ ಫ್ಯೂಚರ್" ಎಂಬ ಶೀರ್ಷಿಕೆಯ ವರದಿ ಸಲ್ಲಿಸಿತು.

ಬ್ರಂಟ್‌ಲ್ಯಾಂಡ್ ಸಮಿತಿಯ ಪ್ರಕಾರ " ಮುಂದಿನ ಪೀಳಿಗೆಗಳು ಅವರ ಅಗತ್ಯಗಳನ್ನು ಪೂರೈಸಿಕೊಳ್ಳಲು ಅವಶ್ಯಕವಾದ ಸಾಮರ್ಥ್ಯದೊಡನೆ ರಾಜಿಮಾಡಿಕೊಳ್ಳದೆ ಸಧ್ಯದ ಪೀಳಿಗೆಯ ಅಗತ್ಯಗಳು ಮಹದಾಸೆಗಳನ್ನು ಒದಗಿಸಲು ಪ್ರಯತ್ನಿಸುವುದು ಸುಸ್ಥಿರಗತಿಯ ಅಭಿವೃದ್ಧಿ."

ಎಂದರೆ ಈಗಿನ ಪೀಳಿಗೆಯ ಅಗತ್ಯಗಳನ್ನು ಪೂರೈಸುವಾಗ, ಮುಂದಿನ ಪೀಳಿಗೆಗಳಿಗೆ ಅವಶ್ಯಕವಾದ ಸಂಪನ್ಮೂಲ, ಸಂಪತ್ತು ಮತ್ತು ವ್ಯವಸ್ಥೆಗಳ ನಾಶಮಾಡದಂತೆ ಅವುಗಳನ್ನು ಸಂರಕ್ಷಿಸುವಂತಹ ಪ್ರಕ್ರಿಯೆ, ಅಭಿವೃದ್ಧಿಯನ್ನು ಮುಂದೆಯೂ ಸ್ಥಿರವಾಗಿರಸಬಲ್ಲ ಪ್ರಗತಿ ಸುಸ್ಥಿರಗತಿಯ ಅಭಿವೃದ್ಧಿ, ಇದು ಆರ್ಥಿಕ ಪ್ರಗತಿ ದೀರ್ಘಕಾಲ ಮುಂದುವರೆಯಲು ಅನುವು ಮಾಡಿಕೊಡುವ ಅಭಿವೃದ್ಧಿ.

ಡಿ.ಡಬ್ಲ್ಯೂ.ಪಿಯರ್ಸ್ ಮತ್ತು ಇ. ಬಾರ್ಬಿಯರ್‌ರವರು ಸೂಚಿಸುವಂತೆ ನೈಸರ್ಗಿಕ ಸಂಪನ್ಮೂಲಗಳು, ಮೂಲಗುಣಮಟ್ಟ ಕಳೆದುಕೊಳ್ಳಲು ಅವಕಾಶ ನೀಡದಂತಹ ಅಭಿವೃದ್ಧಿ ವ್ಯವಸ್ಥೆಯೆ ಸುಸ್ಥಿರಗತಿ ಅಭಿವೃದ್ಧಿ. ಕಾಲಾಂತರದಲ್ಲಿ ಒಟ್ಟಾರೆ ಬಂಡವಾಳ ಆಸ್ತಿಗಳ ಪ್ರಮಾಣ ಸ್ಥಿರವಾಗಿ ಉಳಿದರೆ ಅಥವಾ ಹೆಚ್ಚಾದರೆ ಮಾತ್ರ ಸುಸ್ಥಿರಗತಿ ಸಾಧ್ಯ.

ಪ್ರಗತಿ ಸತತವಾಗಿ ಮುಂದುವರೆಯಬೇಕಾದರೆ ನೈಸರ್ಗಿಕ ಬಂಡವಾಳ ಆಸ್ತಿಯ ಪ್ರಮಾಣವನ್ನು ಈಗೀರುವ ಪ್ರಮಾಣ ಹಾಗೂ ಗುಣಮಟ್ಟದಲ್ಲಿ ಉಳಿಸಿಕೊಳ್ಳಬೇಕು ಅಥವಾ ಅವು ಲಾಭದಾಯಕ ಬಳಕೆಗೆ ಬರುವಂತೆ ಅವುಗಳ ಗುಣಮಟ್ಟ ಕಾಯ್ದುಕೊಳ್ಳಬೇಕು.

ಆದ್ದರಿಂದ ಸುಸ್ಥಿರಗತಿ ಅಭಿವೃದ್ಧಿಯು ನೈಜ ತಲಾ ಉತ್ಪನ್ನದ ಹೆಚ್ಚಳ ಮಾತ್ರವಲ್ಲದೆ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣಾತ್ಮಕ ಅಭಿವೃದ್ಧಿ ಕಾರ್ಯವು ಆಗಿದೆ.

ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ತಾವು ಈಗ ಸಾಧಿಸಿರುವ ಬೆಳವಣಿಗೆ ಪ್ರಮಾಣ ಮುಂದುವರೆಸಿಕೊಂಡು ಹೋಗಲು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಸತತವಾಗಿ ತೀವ್ರ ಆರ್ಥಿಕ ಪ್ರಗತಿ ಸಾಧಿಸಲು ಇದು ನೆರವಾಗುತ್ತದೆ.

ವಸ್ತುಗಳ ಉತ್ಪಾದನೆ, ಸೇವೆಗಳ ಸೃಷ್ಟಿ ಹಾಗೂ ಉತ್ತಮ ಜೀವನ ಸ್ಥಿತಿ ರೂಪಿಸುವಲ್ಲಿ ವ್ಯಾಪಕವಾಗಿ ನೈಸರ್ಗಿಕ ಸಂಪನ್ಮೂಲಗಳ ಬಳಕೆಯಾಗುತ್ತದೆ. ಆದ್ದರಿಂದ ಪ್ರಗತಿಯ ವೆಚ್ಚದ ಲೆಖ್ಖ ಮಾಡುವಾಗ ಆರ್ಥಿಕ ಸಂಪನ್ಮೂಲಗಳ ವೆಚ್ಚದೊಡನೆ ಪರಿಸರದ ಬಳಕೆಯ ಪ್ರಮಾಣವನ್ನು ಸಮನ್ವಯಗೊಳಿಸಿ ಲೆಕ್ಕಮಾಡುವುದು ಅವಶ್ಯಕ. ಇದು ಪರಿಸರದ ಲೆಖ್ಖಾಚಾರ. ನಿರ್ದಿಷ್ಟ ಪ್ರಮಾಣದ ಆದಾಯದ ಉತ್ಪನ್ನದ ಹೆಚ್ಚಳ ಸಾಧಿಸುವಲ್ಲಿ ಅದಕ್ಕಿಂತ ಹೆಚ್ಚಿನ ಪ್ರಮಾಣದ ಪರಿಸರ ನಾಶವಾಗುವುದಾದರೆ ಅದು ಋಣಾತ್ಮಕ ಲೆಕ್ಕದ ಬಾಕಿ ಎನಿಸುತ್ತದೆ.

ಆದ್ದರಿಂದ ಆರ್ಥಿಕತೆಗೆ ಆಗಿರುವ ಲಾಭಕ್ಕಿಂತ ಪರಿಸರಕ್ಕೆ ಆಗಿರುವ ನಷ್ಟ ಕಡಿಮೆ ಇರುವಂತೆ ಯೋಜಿಸುವುದು ಅವಶ್ಯಕ. ಇದು ಸುಸ್ಥಿರಗತಿ ಅಭಿವೃದ್ಧಿಯಿಂದ ಸಾಧ್ಯವಾಗುತ್ತದೆ.

ಭಾರತದಲ್ಲಿ ರಾಷ್ಟ್ರೀಯ ಉತ್ಪನ್ನದಲ್ಲಿ ಹೆಚ್ಚಳ ಉಂಟಾಗುತ್ತಿದೆ. ತಲಾ ಆದಾಯದಲ್ಲಿ ಅಷ್ಟೇ ಪ್ರಮಾಣದ ಹೆಚ್ಚಳವಾಗುತ್ತಿಲ್ಲ. ನೈಸರ್ಗಿಕ ಸಂಪನ್ಮೂಲಗಳ ಬಳಕೆ ಸಮರ್ಪಕವಾಗಿಲ್ಲ.

ಪರಿಸರ ಮಾಲಿನ್ಯ ಜೀವವೈವಿಧ್ಯಮತೆಯಲ್ಲಿ ಅಸಮತೋಲನ, ಭೂ ಜಲ ಅರಣ್ಯ ಸಂಪತ್ತಿನ ನಾಶ ಅವುಗಳ ಗುಣಮಟ್ಟದಲ್ಲಿ ಕುಸಿತ ಕಂಡು ಬರುತ್ತಿದೆ. ಆದ್ದರಿಂದ ಭಾರತದಲ್ಲಿ ಸುಸ್ಥಿರಗತಿ ಅಭಿವೃದ್ಧಿ ಅವಶ್ಯಕವಾಗಿದೆ. ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆಗೆ ಪರಿಸರದ ಸರಂಕ್ಷಣೆಗೆ ಹಾಗೂ ಅಭಿವೃದ್ಧಿಗೆ ಸರಕಾರ ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿವೆ." [10]

ಈ ಮೇಲಿನ ಅಂಶಗಳನ್ನು ಪರಿಶೀಲಿಸಿದಾಗ ಅನುವಾದಕರು ಜೈವಿಕ ಪರಿಸರ ಮತ್ತು ಆರ್ಥಿಕ ಅಭಿವೃದ್ಧಿ ಇವುಗಳ ನಡುವಿನ ಸಂಬಂಧವನ್ನು ಸರಳ ವಿಚಾರಗಳ ಮೂಲಕ ಪ್ರಯತ್ನಿಸಿದ್ದಾರೆ. ವಿವರವಾದ ಮಾಹಿತಿಯಿಂದ ವಿದ್ಯಾರ್ಥಿಗಳಿಗೆ ಹೆಚ್ಚು ನೆನಪಿನಲ್ಲಿ ಉಳಿಯುತ್ತವೆಯೆಂದು ಭಾಸವಾಗುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

**"1.1 (ಕ) ಜೀವ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರಗಳಿಗೆ ಸಂಬಂಧಿಸಿದಂತೆ ಸಮರ್ಥನೆಯ ಅಭಿವೃದ್ಧಿಯ ವ್ಯಾಖ್ಯೆ**

**(Definition of Sustained Development in relation to Ecology and Environment)**

' ಸಮರ್ಥನೆಯ ಅಭಿವೃದ್ಧಿ' (ಅಥವಾ ತಾಳಿಕೆಯ ಅಭಿವೃದ್ಧಿ ಅಥವಾ ಅವಿರತ ಅಭಿವೃದ್ಧಿ) (Sustained Development) ಎಂದರೆ 'ಭಾವೀ ತಲೆಮಾರಿನವರು ತಮ್ಮ ಆಸೆ ಅಕ್ಷಾಂಕ್ಷೆಗಳನ್ನು ಮತ್ತು ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುವ ಸಾಮರ್ಥ್ಯವನ್ನು ಕಡೆಗಣಿಸದೆ, ಪ್ರಸ್ತುತ ತಲೆಮಾರಿನವರು ತಮ್ಮ ಆಸೆ ಆಕ್ಷಾಂಕ್ಷೆಗಳನ್ನು ಮತ್ತು ಅವಶ್ಯಕತೆಗಳನ್ನು ಈಡೇರಿಸುವ ಅಭಿವೃದ್ಧಿಯೆ ಸಮರ್ಥನೆಯ ಇಲ್ಲವೆ ತಾಳಿಕೆಯ ಅಭಿವೃದ್ಧಿಯಾಗಿದೆ."

ಇದರರ್ಥವೆನೆಂದರೆ ಭಾವೀ ತಲೇಮಾರಿನವರ ಆಶೆ–ಆಕಾಂಕ್ಷೆ ಮತ್ತು ಅವಶ್ಯಕತೆಗಳನ್ನು ಕಡೆಗಣಿಸದೆ, ಈಗಿನವರ ಆಶೆ – ಆಕಾಂಕ್ಷೆಗಳನ್ನು ಮತ್ತು ಅವಶ್ಯಕತೆಗಳನ್ನು ಈಡೇರಿಸುವ ಪ್ರಕ್ರಿಯೆಯು ತಾಳಿಕೆಯ ಅಥವಾ ಸಮರ್ಥನೆಯ ಅಭಿವೃದ್ಧಿಯಾಗಿದೆ. ಪರಿಸರವನ್ನು ರಕ್ಷಿಸಿದರೆ ಮತ್ತು ಸುಧಾರಿಸಿದರೆ ತಾಳಿಕೆಯ ಅಭಿವೃದ್ಧಿಯನ್ನು ನಾವು ಸಾಧಿಸಬಹುದಾಗಿದೆ. ಆದ್ದರಿಂದ ಡಾವ್ಹಿಡ್ ಡಬ್ಲ್ಯೂ ಪಿಯರ್ಸ್ ಮತ್ತು ಜೆರೆಮಿ ಜೆ.ವಾರ್‌ಪೋರ್ಡ್ ಎಂಬವರ ಪ್ರಕಾರ, " ಸಮಗ್ರ ಬಂಡವಾಳದ ಎಲ್ಲಾ ಸ್ವತ್ತುಗಳ ದಾಸ್ತಾನು ಬಹು ಕಾಲದ ವರೆಗೆ ಸ್ಥಿರವಾಗಿ ಉಳಿದರೆ ಅಥವಾ ಅವುಗಳಲ್ಲಿ ಹೆಚ್ಚಳವಾದರೆ ಮಾತ್ರ, ಅಭಿವೃದ್ಧಿಯ ಮಾರ್ಗವು ಸಮರ್ಥನೀಯವಾಗುತ್ತದೆ ಅಂದರೆ ತಾಳಿಕೊಳ್ಳುವಂತದಾಗುತ್ತದೆ." ಇದರರ್ಥವೆನೆಂದರೆ – "ನೈಸರ್ಗಿಕ ಸಂಪನ್ಮೂಲಗಳನ್ನೊಳಗೊಂಡಿರುವ ನೈಸರ್ಗಿಕ ಬಂಡವಾಳದ ಒಟ್ಟು ದಾಸ್ತಾನನ್ನು ಮತ್ತು ಪರಿಸರದ ಗುಣಮಟ್ಟವನ್ನು ಅಂದರೆ ಭೂಜಲ ವಾಯುವಿನ ಗುಣಮಟ್ಟವನ್ನು ಪೂರ್ತಿಯಾಗಿ ಕಾಯ್ದುಕೊಳ್ಳಬೇಕು ಮತ್ತು ಸಾಧ್ಯವಿದ್ದರೆ ಅದನ್ನು ಸುಧಾರಿಸಬೇಕು." [11]

ಅನುವಾದಕರು ಇಂಗ್ಲಿಷ ಭಾಷೆಯ (Definition of Sustained Devel-

opment in relation to Ecology and Environment )ಪದವನ್ನು ಜೀವ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರಗಳಿಗೆ ಸಂಬಂಧಿಸಿದಂತೆ ಸಮರ್ಥನೆಯ ಅಭಿವೃದ್ಧಿ ಎಂದು ಅನುವಾದಿಸಿರುತ್ತಾರೆ. ಕನ್ನಡ ಮಾಧ್ಯಮದ ಯಾವ ಪುಸ್ತಕದಲ್ಲಿಯೂ ಈ ಪದವನ್ನು ಬಳಸಿರುವುದಿಲ್ಲ. ಆದ್ದರಿಂದ ಅನುವಾದಿಸುವ ಸಂದರ್ಭದಲ್ಲಿ ವಿಷಯದ ಸರಿಯಾದ / ಯೋಗ್ಯವಾದ ತಾಂತ್ರಿಕ ಪದವನ್ನು ಬಳಸುವುದು ಸೂಕ್ತವೆನಿಸುತ್ತದೆ.

**"Sustainable Development in relation to Ecology and Environment**

The Concept of Sustainable development is of recent origin. It was introduced in Brundtland Report in 1987. According to Brundtland Report Sustainable development refers to "meeting the needs of the present generation without compromising with the needs of the future generations." Sustainable development aims at accelerating economic development in order to conserve and enhance the stock of environmental, human and physical capital without making future generation worse off.

According to world Commission on Environment and Development, Sustainable development is the development that meets the needs of the present without compromising the ability of future generations to meet their own needs. It implies, forms of economic growth and other human activities that meeting the requirement of the present generation without Jeopardizing the ability of future generation to meet their own needs.

To day the whole world is facing the environmental problems like Air pollution, water pollution, deforestation, soil erosion, ozone depletion etc..., man is held responsible for this kind of ecological imbalance. He uses the natural resource in an excessive manner to achieve industrialization, to increase production and to rise the standard of living of the people. He has neglected the othe Co-organisms like animals and plants.

On the one side population is increasing and on the other side forests are decreasing, animals are killed recklessly, there is excessive use of minerals, water and other resources. This has created the problems like shortage of food, minerals, water. less rainfall, problems of population, high temperature, diseases etc..,

Thus the concept of Sustainable development gives equal imporatnce for both development and environmental protection. It emphasis the improvement of standard of living of all people throgh increasing real per capita income, improment in education, health etc.., It also stresses the need of protection of environmental resources like forest, minerals, water animals etc.., So Sustainable development can be achieved only if the environment is conserved and improved." [12]

ಈ ಮೇಲಿನ ಮಾಹಿತಿಯು ವಿದ್ಯಾರ್ಥಿಗಳಿಗೆ ಹಾಗೂ ಉಪನ್ಯಾಸಕರಿಗೆ ಅಗತ್ಯವಾದ ವಿಷಯವನ್ನು ಮನಮುಟ್ಟುವಂತೆ ತಿಳಿಸಿಕೊಡುತ್ತದೆ. ಅನಾವಶ್ಯಕವಾದ ವಿಷಯವನ್ನು ಇದರಲ್ಲಿ ಸೇರ್ಪಡೆಮಾಡದೆ ಕೇವಲ ಅಧ್ಯಯನದ ಅಗತ್ಯತೆಯನ್ನು ಪರಿಗಣಿಸಿ ಪಠ್ಯಕ್ರಮದಂತೆ ವಿಷಯ ಜೋಡಣೆ ಮಾಡಿರುವುದು ತೃಪ್ತಿ ತಂದಿದೆ ಎಂದು ತಿಳಿದು ಬರುತ್ತದೆ.

**"1.1.3. ವಿಶ್ವ ಅಭಿವೃದ್ಧಿ ವರದಿ ಪ್ರಕಾರ ದೇಶಗಳ ವರ್ಗೀಕರಣ**
**( Classification of countris as per the WDR)**

ಸಮಸ್ತ ಜಾಗತಿಕ ಆರ್ಥಿಕ ವ್ಯವಸ್ಥೆಯನ್ನು (i) ಅಪೂರ್ಣ ಅಭಿವೃದ್ಧಿ ಹೊಂದಿದ ಅಥವಾ ಅಭಿವೃದ್ಧಿಶೀಲ ಆರ್ಥಿಕತೆಗಳು (Under developed or developing economies) ಮತ್ತು (ii)ಅಭಿವೃದ್ಧಿ ಹೊಂದಿದ ಆರ್ಥಿಕತೆಗಳು (developed economies ) ಎಂದು ಎರಡು ಗುಂಪುಗಳಾಗಿ ವರ್ಗೀಕರಿಸಲಾಗಿದೆ. ಆದರೆ ಈ ವರ್ಗೀಕರಣವು ಪೂರ್ಣವಾಗಿ ಸಮಂಜಸ ಎಂದು ಪರಿಗಣಿಸುವುದು ಸಾಧ್ಯವಾಗುವುದಿಲ್ಲ. ಏಕೆಂದರೆ, ಅಪೂರ್ಣ ಅಭಿವೃದ್ಧಿ ಹೊಂದಿದ ಆರ್ಥಿಕತೆಯನ್ನು ವ್ಯಾಖ್ಯಾನಿಸುವುದು ಅಷ್ಟು ಸುಲಭವಲ್ಲ, ಅಷ್ಟಲ್ಲದೆ ಅಪೂರ್ಣ ಅಭಿವೃದ್ಧಿ ಹೊಂದಿದ ದೇಶಗಳು ಎಂಬ ಪರಿಕಲ್ಪನೆ ಸಾಪೇಕ್ಷವಾದುದಾಗಿದೆ.

ವಿಶ್ವಸಂಸ್ಥೆಯ ಪರಿಣಿತರ ತಂಡವೊಂದು ಹೇಳುವಂತೆ "ನಾವುಗಳು ಅಪೂರ್ಣ ಅಭಿವೃದ್ಧಿ ಹೊಂದಿದ ದೇಶಗಳು ಎಂಬ ಪರಿಕಲ್ಪನೆಯನ್ನು ಅರ್ಥೈಸುವಲ್ಲಿ ಕೆಲವೊಂದು ತೊಂದರೆಗಳನ್ನು ಹೊಂದಿದ್ದೆವು. ನಾವು ಇದನ್ನು ಅಮೆರಿಕ, ಕೆನಡ, ಆಸ್ಟ್ರೇಲಿಯ ಮತ್ತು ಪಶ್ಚಿಮ ಯೂರೋಪಿನ ತಲಾ ನೈಜ ಆದಾಯಗಳಿಗೆ ಹೋಲಿಸಿದಾಗ ಕಡಿಮೆ ತಲಾ ನೈಜ ಆದಾಯ ಹೊಂದಿದ ದೇಶಗಳೆಂದು ತಿಳಿಸಲು ಬಳಸಿಕೊಂಡಿದ್ದೇವೆ. ಈ ಅರ್ಥದಲ್ಲಿ ಒಂದು ಸರಿಯಾದ ಸಮಾನ ಪದವು ಬಡದೇಶಗಳು ಎಂಬುದಾಗುತ್ತದೆ."

ಇತ್ತೀಚಿನ ದಿನಗಳಲ್ಲಿ ವಿಶ್ವಸಂಸ್ಥೆಯ ಪ್ರಕಟಣೆಗಳಲ್ಲಿ ಅಪೂರ್ಣ ಅಭಿವೃದ್ಧಿ ಹೊಂದಿದ ದೇಶಗಳನ್ನು 'ಅಭಿವೃದ್ಧಿಶೀಲ ದೇಶಗಳು' (Developing countries) ಎಂದು ಬಣ್ಣಿಸಲಾಗುತ್ತಿದೆ. ಅಭಿವೃದ್ಧಿಶೀಲ ಆರ್ಥಿಕತೆ ಎಂಬ ಪರಿಕಲ್ಪನೆಯು ಈ ದೇಶಗಳು ಇನ್ನೂ ಅಭಿವೃದ್ಧಿ ಹೊಂದಿಲ್ಲವಾದರೂ ಅವು ಅಭಿವೃದ್ಧಿ ಪ್ರಕ್ರಿಯೆಯನ್ನು ಆರಂಭಿಸಿವೆ ಎಂಬುದನ್ನು ತಿಳಿಯಪಡಿಸುತ್ತದೆ. ಆದ್ದರಿಂದ, ವಿಶ್ವಸಂಸ್ಥೆಯ ಪ್ರಕಟಣೆಗಳು ಜಗತ್ತಿನ ಆರ್ಥಿಕತೆಗಳನ್ನು ಅಭಿವೃದ್ಧಿಶೀಲ ಆರ್ಥಿಕತೆಗಳು (Developing economies) ಮತ್ತು ಅಭಿವೃದ್ಧಿ ಆರ್ಥಿಕತೆಗಳು (Developed economies) ಎಂದು ಎರಡು ಪ್ರಕಾರಗಳಲ್ಲಿ ವರ್ಗೀಕರಿಸಿದೆ.

ವಿಶ್ವಬ್ಯಾಂಕು ತನ್ನ 2005ರ ವಿಶ್ವ ಅಭಿವೃದ್ಧಿ ವರದಿ (World Development report)ಯಲ್ಲಿ ವಿವಿಧ ದೇಶಗಳನ್ನು ಅವುಗಳ ತಲಾ ಒಟ್ಟು ರಾಷ್ಟ್ರೀಯ ಆದಾಯ(GNI or GNP)ದ ಆಧಾರದಲ್ಲಿ ಮೂರು ಗುಂಪುಗಳನ್ನಾಗಿ ವರ್ಗೀಕರಿಸಿದೆ. ಅವುಗಳು ಈ ಮುಂದಿನಂತಿವೆ.

**a. ಕಡಿಮೆ ಆದಾಯದ ದೇಶಗಳು**

(Low income counties)

ವಿಶ್ವ ಅಭಿವೃದ್ಧಿ ವರದಿ, 2005ರ ಪ್ರಕಾರ 2003ರಲ್ಲಿ 765 ಡಾಲರುಗಳಿಗಿಂತ ಕಡಿಮೆ ತಲಾ ಒಟ್ಟು ರಾಷ್ಟ್ರೀಯ ಆದಾಯವನ್ನು ಹೊಂದಿದ್ದ ದೇಶಗಳು ಕಡಿಮೆ ಆದಾಯದ ದೇಶಗಳು. ಈ ದೇಶಗಳು ಜಗತ್ತಿನ ಜನಸಂಖ್ಯೆಯಲ್ಲಿ ಶೇಕಡ 36.84(2,310.3 ದಶಲಕ್ಷ) ಹಾಗೂ ಜಗತ್ತಿನ ಒಟ್ಟು ರಾಷ್ಟ್ರೀಯ ಆದಾಯದಲ್ಲಿ ಶೇಕಡ 3ರ ಪಾಲು ಹೊಂದಿದ್ದವು.

ವಿಶ್ವ ಅಭಿವೃದ್ಧಿ ವರದಿ, 2005ರ ಪ್ರಕಾರ ಕಡಿಮೆ ಆದಾಯದ ದೇಶಗಳ ಗುಂಪಿನಲ್ಲಿರುವ ದೇಶಗಳೆಂದರೆ : ಕಾಂಬೋಡಿಯಾ, ಕೊರಿಯಾ ಪ್ರಜಾಪ್ರಭುತ್ವ ಗಣರಾಜ್ಯ, ಲಾವೋ, ಮಂಗೋಲಿಯ, ಮ್ಯಾನ್ಮಾರ್, ನ್ಯೂಗಯೆನಿಯಾ, ವಿಯೆಟ್ನಾಂ, ತಜಿಕಿಸ್ತಾನ್, ಉಜ್ಬೇಕಿಸ್ತಾನ್, ಹೈಟಿ, ನಿಕರಾಗುವ, ಆಫ್ಘಾನಿಸ್ತಾನ, ಬಾಂಗ್ಲಾದೇಶ, ಭೂತಾನ್, ಭಾರತ, ನೇಪಾಳ, ಪಾಕಿಸ್ತಾನ, ಅಂಗೋಲ, ಕ್ಯಾಮರೂನ್, ಕಾಂಗೋ ರಿಪಬ್ಲಿಕ್, ಇಥಿಯೋಪಿಯ, ಘಾನ, ಕೆನ್ಯ, ಲೆಸಾತೋ, ಲೈಬೀರಿಯ, ಲೆಬನಾನ್, ಮಾಲಿ, ಮೊಜಾಂಬಿಕ್, ನೈಜೀರಿಯ, ಸೆನೆಗಲ್, ಸೋಮಾಲಿಯ,

ಸೂಡಾನ್, ಟಾಂಜಾನಿಯ, ಉಗಾಂಡ, ಜಾಂಬಿಯಾ, ಜಿಂಬಾಬ್ವೆ ಮತ್ತು ಇತರ ದೇಶಗಳು.

**b.) ಮಧ್ಯಮ ಆದಾಯದ ದೇಶಗಳು**

**(Middle income countries)**

ವಿಶ್ವ ಬ್ಯಾಂಕಿನ ವಿಶ್ವ ಅಭಿವೃದ್ಧಿ ವರದಿ, 2005ರ ಪ್ರಕಾರ 2003ರಲ್ಲಿ 766 ಡಾಲರುಗಳಿಗಿಂತ ಅಧಿಕ ಮತ್ತು 9.385 ಡಾಲರುಗಳಿಗಿಂತ ಕಡಿಮೆ ತಲಾ ಒಟ್ಟು ರಾಷ್ಟ್ರೀಯ ಆದಾಯವನ್ನು ಹೊಂದಿದ್ದ ದೇಶಗಳು ಮಧ್ಯಮ ಆದಾಯದ ದೇಶಗಳು. ಈ ದೇಶಗಳು ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 47. 68 (2,990.1 ದಶಲಕ್ಷ) ಹಾಗೂ ಜಗತ್ತಿನ ಒಟ್ಟು ರಾಷ್ಟ್ರೀಯ ಆದಾಯದಲ್ಲಿ ಶೇಕಡ 16.62ರ ಪಾಲು ಹೊಂದಿದ್ದವು.

ಈ ವರದಿಯ ಪ್ರಕಾರ ಮಧ್ಯಮ ಆದಾಯದ ಗುಂಪಿನಲ್ಲಿ ಬರುವ ದೇಶಗಳೆಂದರೆ, ಚೈನಾ, ಫಿಜಿ, ಇಂಡೋನೇಷಿಯ, ಫಿಲಿಪೈನ್ಸ್, ಥೈಲೆಂಡ್, ಆಲ್ಬೇನಿಯ, ಅಜರ್‌ಬೈಜಾನ್, ಬೆಲಾರಸ್, ಬೋಸ್ನಿಯ, ಬಲ್ಗೇರಿಯ, ಜಾರ್ಜಿಯ, ಖಜಕಿಸ್ತಾನ, ರೊಮೇನಿಯ, ರಷ್ಯಾಗಣರಾಜ್ಯ, ಸೆರ್ಬಿಯ, ಟರ್ಕಿ, ಉಕ್ರೇನ, ಬೊಲಿವಿಯ, ಬ್ರೆಜಿಲ್, ಕೊಲಂಬಿಯ, ಕ್ಯೂಬಾ, ಈಕ್ವೆಡಾರ್, ಜಮೈಕ, ಪೆರು, ಅಲ್ಜೀರಿಯ, ಈಜಿಪ್ಟ್, ಇರಾನ್, ಇರಾಕ್, ಜೋರ್ಡಾನ್, ಟುನಿಷಿಯ, ಮಾಲ್ಡೀವ್ಸ್, ಶ್ರೀಲಂಕ, ನಮೀಬಿಯ, ದಕ್ಷಿಣ ಆಫ್ರಿಕ, ಮುಂತಾದವು.

ಮೇಲಿನ ಎರಡೂ ಗುಂಪಿನ ದೇಶಗಳನ್ನು ಒಳಗೊಂಡು ಈ ದೇಶಗಳನ್ನು ಅಭಿವೃದ್ಧಿಶೀಲ ದೇಶಗಳು ಎಂದು ಕರೆಯಲಾಗಿದೆ. ಅಂದರೆ ವಿಶ್ವ ಅಭಿವೃದ್ಧಿ ವರದಿ, 2005ರ ಪ್ರಕಾರ 2003ರಲ್ಲಿ 765 ಡಾಲರುಗಳಿಗಿಂತ ಅಧಿಕ ಆದರೆ 9.385ಡಾಲರುಗಳಿಗಿಂತ ಕಡಿಮೆ ತಲಾ ಒಟ್ಟು ರಾಷ್ಟ್ರೀಯ ಆದಾಯವನ್ನು ಹೊಂದಿರುವ ದೇಶಗಳು ಅಭಿವೃದ್ಧಿಶೀಲ ದೇಶಗಳಾಗಿವೆ. ಈ ದೇಶಗಳು ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 84.51 (5,300.3) ಆದರೆ ಜಗತ್ತಿನ ಒಟ್ಟು ಆದಾಯದಲ್ಲಿ ಕೇವಲ ಶೇಕಡ 19.61ರ ಪಾಲು ಹೊಂದಿವೆ.

**c. ಅಧಿಕ ಆದಾಯದ ದೇಶಗಳು (High income countries)**

ವಿಶ್ವ ಅಭಿವೃದ್ಧಿ ವರದಿ, 2005ರ ಪ್ರಕಾರ 2003ರಲ್ಲಿ 9.386 ಡಾಲರುಗಳಿಗಿಂತ ಅಧಿಕ ತಲಾ ಒಟ್ಟು ರಾಷ್ಟ್ರೀಯ ಆದಾಯ ಹೊಂದಿದ್ದ ದೇಶಗಳು ಅಧಿಕ ಆದಾಯದ ದೇಶಗಳು. ಈ ದೇಶಗಳು ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ ಕೇವಲ ಶೇಕಡ 15.49(971.4 ದಶಲಕ್ಷ) ಹಾಗೂ ಜಗತ್ತಿನ ಒಟ್ಟು ಆದಾಯದಲ್ಲಿ ಶೇಕಡ 80.40ರಷ್ಟು ಪಾಲು ಹೊಂದಿದ್ದವು.

ಅಧಿಕ ಆದಾಯದ ಗುಂಪನಲ್ಲಿ ಬರುವ ಪ್ರಮುಖ ದೇಶಗಳೆಂದರೆ : ಆಸ್ಟ್ರೇಲಿಯ, ಆಸ್ಟ್ರೀಯ, ಬೆಲ್ಜಿಯಂ, ಕೆನಡ, ಡೆನ್ಮಾರ್ಕ, ಫಿನಲೆಂಡ್, ಫ್ರಾನ್ಸ್, ಜರ್ಮನಿ, ಗ್ರೀಸ್, ಇಟಲಿ, ಜಪಾನ್, ಕೊರಿಯ ಗಣರಾಜ್ಯ, ನೆದರಲೆಂಡ್, ನ್ಯೂಜಿಲೆಂಡ್, ಮಾಲ್ಟಾ, ಕತಾರ್, ಸಿಂಗಪುರ, ಯು.ಎ.ಇ, ಸ್ಲೋವೇನಿಯ, ಪೋರ್ಚುಗಲ್, ಸ್ಪೇನ್, ಸ್ವೀಡನ್, ಸ್ವಿಟ್ಜರ್‌ಲೆಂಡ್, ಅಮೆರಿಕ, ಇಂಗ್ಲೆಂಡ್, ಬಹರೇನ್, ಹಾಂಕಾಂಗ್, ಇಸ್ರೇಲ್, ಕುವೈತ್ ಮತ್ತು ಇತರ ದೇಶಗಳು." [13]

ಅನುವಾದಕರು ಈ ಮೇಲಿನ ಮಾಹಿತಿಯನ್ನು ಅದರಲ್ಲಿಯೆ ದೇಶಗಳ ಮಾಹಿತಿಯನ್ನು ಸಮಗ್ರವಾಗಿ ಅನುವಾದದ ಮೂಲಕ ನೀಡಿರುವುದು ಸರಿ. ಆದರೂ ಸಹ ವಿದ್ಯಾರ್ಥಿಗಳಿಗೆ ನೆನಪಿನಲ್ಲಿಡಲು ತೊಂದರೆಯಾಗುತ್ತದೆ. ಕಾರಣ ಈ ವಿಷಯವನ್ನು ನೋಡಿದ ಕೂಡಲೇ ಇದೆಲ್ಲವೂ ಪಠ್ಯಕ್ರಮಕ್ಕಿರಬೇಕೆಂದು ಭಾವಿಸುವ ಸಾಧ್ಯತೆಯಿಂದ ಉಪನ್ಯಾಸಕರು ಸಹ ಗೊಂದಲಕ್ಕೆ ಸಿಲುಕುವ ಸಾಧ್ಯತೆಗಳಿವೆ. ಆದ್ದರಿಂದ ಮೂರು ವಿಧದ ರಾಷ್ಟ್ರಗಳ ವರ್ಗೀಕರಣದ ಆಧಾರ ಮತ್ತು ನಾಲ್ಕಾರು ದೇಶಗಳನ್ನು ಪ್ರತಿ ಗುಂಪಿಗೆ ತಿಳಿಸಿದ್ದರೆ ಸಾಕಾಗುತ್ತಿತ್ತು.

" 2006 'ವಿಶ್ವ ಅಭಿವೃದ್ಧಿ ವರದಿ'(World development report ) ಪ್ರಕಾರ ತಲಾ ಆದಾಯದ ಆಧಾರದ ಮೇಲೆ (Per Capita GDP) ವಿಶ್ವದ ರಾಷ್ಟ್ರಗಳನ್ನು ಮೂರು ಪ್ರಕಾರವಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ

1. ಕಡಿಮೆ ವರಮಾನದ ರಾಷ್ಟ್ರಗಳು.
2. ಮಧ್ಯಮ ವರಮಾನದ ರಾಷ್ಟ್ರಗಳು.
3. ಹೆಚ್ಚು ವರಮಾನದ ರಾಷ್ಟ್ರಗಳು.



1. **ಕಡಿಮೆ ವರಮಾನದ ರಾಷ್ಟ್ರಗಳು** : ವಿಶ್ವ ಅಭಿವೃದ್ಧಿ ವರದಿಯ ಪ್ರಕಾರ 2004ನೇ ವರ್ಷದಲ್ಲಿ ಯಾವ ರಾಷ್ಟ್ರಗಳ ತಲಾ ಆದಾಯವು 825 ಡಾಲರ್‌ಗಳಿಗಿಂತ ಕಡಿಮೆ ಇರುತ್ತದೆಯೊ ಅಂತಹ ರಾಷ್ಟ್ರಗಳನ್ನು ಕಡಿಮೆ ವರಮಾನದ ರಾಷ್ಟ್ರಗಳೆಂದು ಪರಿಗಣಿಸಲಾಗಿದೆ <u>ಉದಾಹರಣೆ</u> : ಭಾರತ, ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇಶ, ನೇಪಾಳ, ಆಫ್ರೀಕಾ ದೇಶಗಳು ಮುಂತಾದವು.

2. **ಮಧ್ಯಮ ವರಮಾನದ ರಾಷ್ಟ್ರಗಳು** : ಯಾವ ರಾಷ್ಟ್ರಗಳ ತಲಾ ಆದಾಯ 826ರು ಡಾಲರನಿಂದ 10065 ಡಾಲರ್‌ವರೆಗಿರುತ್ತದೆಯೊ ಅಂತಹ ರಾಷ್ಟ್ರಗಳನ್ನು ಮಧ್ಯಮ ವರಮಾನದ ರಾಷ್ಟ್ರಗಳೆಂದು ಪರಿಗಣಿಸಲಾಗಿದೆ. <u>ಉದಾ :</u> ಚೈನಾ, ಈಜಿಪ್ತ, ಇಂಡೋನೇಷಿಯಾ, ಫಿಲಿಪೈನ್ಸ್, ಇರಾನ್, ಇರಾಕ್, ಬ್ರೆಜಿಲ್, ಕೊಲಂಬಿಯಾ ಮುಂತಾದವು.

3. **ಹೆಚ್ಚು ವರಮಾನದ ರಾಷ್ಟ್ರಗಳು** : ಯಾವ ರಾಷ್ಟ್ರಗಳು 10066 ಡಾಲರ್‌ಗಿಂತ ಹೆಚ್ಚು ತಲಾದಾಯವನ್ನು ಹೊಂದಿರುತ್ತವೆಯೊ ಅವುಗಳನ್ನು ಹೆಚ್ಚು ವರಮಾನದ ರಾಷ್ಟ್ರಗಳೆಂದು ಪರಿಗಣಿಸಲಾಗಿದೆ. ಈ ರಾಷ್ಟ್ರಗಳು ಅಭಿವೃದ್ಧಿ ಹೊಂದಿದ ಅಥವಾ ಶ್ರೀಮಂತ ರಾಷ್ಟ್ರಗಳಾಗಿರುತ್ತವೆ. <u>ಉದಾ :</u> ಅಮೇರಿಕಾ, ಇಂಗ್ಲೆಂಡ್, ಜಪಾನ್, ಜರ್ಮನಿ, ಫ್ರಾನ್ಸ್, ಕೆನಡಾ, ಆಸ್ಟ್ರೇಲಿಯಾ, ಸ್ವಿಜರ್‌ಲ್ಯಾಂಡ್ ಮುಂತಾದವು." [14]

ಅನುವಾದಕರು ಪಠ್ಯಕ್ರಮಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸೂಕ್ತ ಮತ್ತು ಅಗತ್ಯ ಅಂಶಗಳನ್ನು ಮಾತ್ರ ಅನುವಾದದ ಮೂಲಕ ಪ್ರಕಟಿಸಿರುವುದು ಅತ್ಯಂತ ಸೂಕ್ತವಾಗಿದೆ. ಇಲ್ಲಿ ಭಾರತ ದೇಶದ ಸುತ್ತಮುತ್ತಲಿನ ದೇಶಗಳ ಮತ್ತು ಜನಪ್ರಿಯವಾದ ಹಾಗೂ ನೆನಪಿನಲ್ಲಿ ಉಳಿಯುವ ದೇಶಗಳ ಪಟ್ಟಿಯನ್ನು ನೀಡಿರುವುದು ಸಮಸ್ಯೆಗಳಿಗೆ ಆಸ್ಪದ

ನೀಡದಂತಹ ಕೆಲಸವಾಗಿದೆ.

### " 1.1.7 PQLI, HDI ಮತ್ತು SOLI

ಕೆಲವು ಅರ್ಥಶಾಸ್ತ್ರಜ್ಞರು ಆರ್ಥಿಕ ಅಭಿವೃದ್ಧಿಯನ್ನು ಮೂಲ ಅವಶ್ಯಕತೆಗಳ ಸಾಮಾಜಿಕ ಸೂಚಕಗಳ ಮೂಲಕ ಮಾಪನ ಮಾಡಲು ಯತ್ನಿಸಿದ್ದಾರೆ. ಅವರುಗಳು ಸಂಯುಕ್ತ ಮಾನವ ಅಭಿವೃದ್ಧಿ ಸೂಚಿಯನ್ನು ನಿರ್ಮಿಸುವ ಸಲುವಾಗಿ ಸಾಮಾಜಿಕ ಸೂಚಕಗಳಲ್ಲಿ ಆರೋಗ್ಯ, ಶಿಕ್ಷಣ, ನೀರು ಪೂರೈಕೆ, ಆಹಾರ, ನೈರ್ಮಲ್ಯ, ಪೌಷ್ಠಿಕಾಂಶ ಕೊರತೆ, ವಸತಿ ಮುಂತಾದ ವೈವಿಧ್ಯಮಯ ಅಂಶಗಳನ್ನು ಸೇರ್ಪಡೆಗೊಳಿಸಿದ್ದಾರೆ. ಈ ಮೂಲ ಅವಶ್ಯಕತೆಗಳ ನೇರ ಪೂರೈಕೆಯು ಅಲ್ಪಾವಧಿಯಲ್ಲಿ ಬಡತನದ ಮೇಲೆ ಅತ್ಯಲ್ಪ ಹಣಕಾಸು ಸಂಪನ್ಮೂಲಗಳೊಂದಿಗೆ ಸಾಕಷ್ಟು ಪ್ರಭಾವ ಬೀರುತ್ತವೆ. ಅಂದರೆ ಈ ಸೌಲಭ್ಯಗಳನ್ನು ಕಲ್ಪಿಸಿದಾಗ ಬಡಜನರ ಸ್ಥಿತಿಗತಿಗಳು ಸುಧಾರಿಸುತ್ತವೆ. ಪ್ರಸ್ತುತ ನಾವು ಎಂ.ಡಿ.ಮೊರಿಸ್ ಅವರ ಜೀವನದ ಭೌತಿಕ ಗುಣಮಟ್ಟ ಅನುಸೂಚಿ (PQLI), UNDPಯ ಮಾನವ ಅಭಿವೃದ್ಧಿ ಅನುಸೂಚಿ (HDI) ಮತ್ತು ಜೀವನಮಟ್ಟ ಅನುಸೂಚಿ (SOLI)ಯನ್ನು ಪರಿಗಣಿಸಲಿದ್ದೇವೆ.

**ಎ) ಜೀವನದ ಭೌತಿಕ ಗುಣಮಟ್ಟ ಅನುಸೂಚಿ**

**(Physical Quality of Life Index - PQLI)**

ಮೊರಿಸ್ ಡಿ. ಮೊರಿಸ್ ಅವರು 1979ರಲ್ಲಿ ಸಾಪೇಕ್ಷ ಅಧ್ಯಯನಕ್ಕಾಗಿ ಮುಂದುವರಿದ ಮತ್ತು ಮುಂದುವರೆಯುತ್ತಿರುವ ರಾಷ್ಟ್ರಗಳಿಗೆ ಸಂಬಂಧಿಸಿದಂತೆ ಒಂದು ಸಂಯುಕ್ತ ಜೀವನದ ಭೌತಿಕ ಗುಣಮಟ್ಟ ಅನುಸೂಚಿಯನ್ನು ((PQLI)) ನಿರ್ಮಿಸಿದರು/ ಅವರು ಜನರ ಬಹುಮುಖ್ಯ ಮೂಲಭೂತ ಅವಶ್ಯಕತೆಗಳ ಪೂರೈಕೆಯ ಕಾರ್ಯನಿರ್ವಹಣೆಯನ್ನು ಮಾಪನ ಮಾಡುವ ಉದ್ದೇಶದಿಂದ ಶಿಶು ಮರಣ, ಒಂದನೇ ವಯಸ್ಸಿನಲ್ಲಿನ ಜೀವನ ನಿರೀಕ್ಷೆ ಮತ್ತು 15ನೇ ವಯಸ್ಸಿನಲ್ಲಿಯ ಸಾಕ್ಷರತೆ ಮುಂತಾದ ಮೂರು ಉಪಾಂಗ ಸೂಚಕಗಳನ್ನು ಸಂಯೋಜಿಸಿದರು. ಈ ಅನುಸೂಚಿಯು ಆರೋಗ್ಯ, ಶಿಕ್ಷಣ, ಕುಡಿಯುವ ನೀರು, ಪೌಷ್ಠಿಕಾಂಶ, ನೈರ್ಮಲ್ಯ ಮುಂತಾದ ವ್ಯಾಪಕವಾದ ಸೂಚಕಗಳನ್ನು ಪ್ರತಿನಿಧಿಸುತ್ತದೆ.

ಮೇಲಿನ ಮೂರು ಉಪಾಂಗ ಸೂಚಕಗಳಲ್ಲಿ ಪ್ರತಿಯೊಂದನ್ನು ಶೂನ್ಯದಿಂದ ನೂರರವರೆಗಿನ ದರ್ಜೆ ಅಥವಾ ಶ್ರೇಣಿಯಲ್ಲಿ ಸ್ಥಾನೀಕರಿಸಲಾಗಿದೆ. ಇದರಲ್ಲಿ ಶೂನ್ಯ ಎಂಬುದು ಸಂಪೂರ್ಣ ನಿಕೃಷ್ಟ ಸಾಧನೆಯಾದರೆ ನೂರು ಎಂಬುದು ಅತ್ಯುತ್ತಮ ಸಾಧನೆಯನ್ನು ಪ್ರತಿನಿಧಿಸುತ್ತದೆ. ಜೀವನದ ಭೌತಿಕ ಗುಣಮಟ್ಟ ಅನುಸೂಚಿ (PQLI)ಯನ್ನು ಈ ಮೂರು ಸೂಚಕಗಳ ಸರಾಸರಿಯಿಂದ (ಪ್ರತಿಯೊಂದಕ್ಕೂ ತಕ್ಕ ಪ್ರಾಶಸ್ತ್ಯ ನೀಡಿ) ಲೆಖ್ಖಾಚಾರ ಹಾಕಲಾಗುತ್ತದೆ ಹಾಗೂ ಈ ಅನುಸೂಚಿಯನ್ನು ಶೂನ್ಯದಿಂದ ನೂರರವರೆಗಿನ ದರ್ಜೆಗೊಳಪಡಿಸಲಾಗುತ್ತದೆ. ಈ ಸೂಚಕಗಳಲ್ಲಿನ ಯಾವುದೇ ರೀತಿಯ ಸುಧಾರಣೆಯು ಅವುಗಳಿಂದ ಅಧಿಕ ಸಂಖ್ಯೆಯ

ಜನರು ಪ್ರಯೋಜನ ಪಡೆಯುತ್ತಿದ್ದಾರೆ ಎಂಬುದನ್ನು ತಿಳಿಯಪಡಿಸುತ್ತದೆ.

ಮೊರಿಸ್ ಅವರ ಪ್ರತಿಯೊಂದು ಸೂಚಕ ಅಂತರ್‌ರಾಷ್ಟ್ರೀಯ ಹೋಲಿಕೆಗೆ ಲಭ್ಯವಿರುತ್ತದೆ. ಗ್ಯಬೋನ್ ಅವರ 1950ರ ಪ್ರತಿ ಸಾವಿರಕ್ಕೆ 229 ಶಿಶುಮರಣ ಸಂಖ್ಯೆಯನ್ನು ಅತ್ಯಂತ ನಿಕೃಷ್ಟ ಎಂದು ಪರಿಗಣಿಸಿ ಅದಕ್ಕೆ ಶೂನ್ಯದ ದರ್ಜೆ ನೀಡುತ್ತಾರೆ. ಇದರ ಮೇಲ್ಮಟ್ಟದಲ್ಲಿ 2000ನೇ ಇಸವಿಗೆ ಪ್ರತಿ ಸಾವಿರಕ್ಕೆ ಏಳು ಶಿಶುಗಳ ಮರಣವನ್ನು ಅತ್ಯುತ್ತಮ ಸಾಧನೆ ಎಂದು ಪರಿಗಣಿಸಲಾಗಿದೆ. ಅದೇ ರೀತಿ ವಿಯೆಟ್ನಾಂ ದೇಶದ 1950ರ ಒಂದನೇ ವಯಸ್ಸಿನಲ್ಲಿ 38 ವರ್ಷಗಳ ಆಯುಷ್ಯವನ್ನು ಜೀವನ ನಿರೀಕ್ಷೆ ಸೂಚಿಯ ಶೂನ್ಯ ಬಿಂದು ಎಂದು ಮೊರಿಸ್ ಪರಿಗಣಿಸಿದ್ದಾರೆ. ಗರಿಷ್ಟ ಮಿತಿಯನ್ನು ಪರುಷರಿಗೆ ಮತ್ತು ಮಹಿಳೆಯರಿಗೆ 2000ನೇ ಇಸವಿಗೆ 77 ವರ್ಷಗಳೆಂದು ನಿರ್ಧರಿಸಲಾಗಿದೆ. ಅಂತಿಮವಾಗಿ 15ನೇ ವಯಸ್ಸಿನಲ್ಲಿಯ ಸಾಕ್ಷರತಾ ದರವನ್ನು ಸಾಕ್ಷರತಾ ಅನುಸೂಚಿ ಎಂದು ತೆಗೆದುಕೊಳ್ಳಲಾಗಿದೆ. ಮೊರಿಸ್ ಅವರು ಒಂದನೆ ವಯಸ್ಸಿನಲ್ಲಿನ ಜೀವನ ನಿರೀಕ್ಷೆ ಮತ್ತು ಶಿಶುಮರಣವನ್ನು ಜೀವನದ ಭೌತಿಕ ಗುಣಮಟ್ಟದ ಅತ್ಯುತ್ತಮ ಅನುಸೂಚಿಗಳೆಂದು ಪರಿಗಣಿಸಿದ್ದಾರೆ. ಅದೇ ರೀತಿ ಸಾಕ್ಷರತೆ ಮತ್ತು ಜೀವನ ನಿರೀಕ್ಷೆಗಳೂ ಸಹ. ವಾಸ್ತವವಾಗಿ ಸಾಕ್ಷರತೆ ಅನುಸೂಚಿಯು ಅಭಿವೃದ್ಧಿಯ ಸಾಧ್ಯತೆ ಅಥವಾ ಸುಪ್ತತೆಯನ್ನು ಪ್ರತಿಬಿಂಬಿಸುತ್ತದೆ.

### b. ಮಾನವ ಅಭಿವೃದ್ಧಿ ಅನುಸೂಚಿ
### (Human Development Index - HDI)

ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ 'ಯುಎನ್‌ಡಿಪಿ' (ವಿಶ್ವಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮ UNDP) ಯು 1990ರಿಂದ ತನ್ನ ವಾರ್ಷಿಕ ಮಾನವ ಅಭಿವೃದ್ಧಿ ವರದಿಯಲ್ಲಿ 'ಮಾನವ ಅಭಿವೃದ್ಧಿ ಅನುಸೂಚಿ (HDI)'ಯ ಮೂಲಕ ಮಾನವ ಅಭಿವೃದ್ಧಿಯನ್ನು ಮಾಪನ ಮಾಡುವ ಪ್ರಯತ್ನ ನಡೆಸುತ್ತಿದೆ. ಪಾಕಿಸ್ತಾನದ ಖ್ಯಾತ ಅರ್ಥಶಾಸ್ತ್ರಜ್ಞ ಮಹಬೂಬ್ ವುಲ್ ಹಕ್ ಮತ್ತು ಅರ್ಥಶಾಸ್ತ್ರದಲ್ಲಿನ ನೊಬೆಲ್ ಪಾರಿತೋಷಕ ವಿಜೇತ ಭಾರತೀಯ ಅರ್ಥಶಾಸ್ತ್ರಜ್ಞ ಡಾ. ಅಮರ್ತ್ಯ ಸೇನ್ ಅವರುಗಳು ಈ ಅನುಸೂಚಿಯ ತಯಾರಿಕೆಗೆ ಸಾಕಷ್ಟು ಶ್ರಮಿಸಿದ್ದಾರೆ. ಈ ಅನುಸೂಚಿಯು ಇಂದಿನ ದಿನಗಳಲ್ಲಿ ಆರ್ಥಿಕ ಅಭಿವೃದ್ಧಿಯ ಮಾಪನದ ಅತ್ಯುತ್ತಮ ಮಾನದಂಡ ಎಂದು ಪರಿಗಣಿಸಲ್ಪಟ್ಟಿದೆ.

ಮಾನವ ಅಭಿವೃದ್ಧಿ ಅನುಸೂಚಿಯು (HDI) ಜೀವನ ನಿರೀಕ್ಷೆ, ವಯಸ್ಕ ಶಿಕ್ಷಣ ಮತ್ತು ಶಾಲೆಗೆ ಹೋದ ವರ್ಷಗಳ ಸಂಖ್ಯೆಯಂತಹ ಮೂರು ಪ್ರಮುಖ ಸಾಮಾಜಿಕ ಸೂಚಕಗಳ ಒಂದು ಸಂಯುಕ್ತ ಅನುಸೂಚಿಯಾಗಿದೆ. ಇದು ಒಟ್ಟು ದೇಶಿಯ ನೈಜ ತಲಾ ಉತ್ಪನ್ನವನ್ನೂ ಪರಿಗಣಿಸುತ್ತದೆ. ಆದ್ದರಿಂದ ಮಾನವ ಅಭಿವೃದ್ಧಿ ಅನುಸೂಚಿ (HDI) ಎಂಬುದು ದೀರ್ಘ ಮತ್ತು ಆರೋಗ್ಯವಂತ ಜೀವನ, ಅರಿವು ಮತ್ತು ಯೋಗ್ಯ ಜೀವನಮಟ್ಟದಂತಹ ಮೂರು ಮೂಲಭೂತ ಆಯಾಮಗಳಲ್ಲಿನ ಸಾಧನೆಯ ಒಂದು ಸಂಯುಕ್ತ ಅನುಸೂಚಿಯಾಗಿದೆ.

**ಮಾನವ ಅಭಿವೃದ್ಧಿ ಎಂದರೇನು ?**

ಮಾನವ ಅಭಿವೃದ್ಧಿ ವರದಿಯು ಮಾನವ ಅಭಿವೃದ್ಧಿ ಎಂಬ ಪರಿಕಲ್ಪನೆಯನ್ನು ಜನರ ಆಯ್ಕೆಯ ಪರಿಧಿಯನ್ನು ವಿಸ್ತರಿಸುವ ಪ್ರಕ್ರಿಯೆ ಎಂದು ವ್ಯಾಖ್ಯಾನಿಸಿದೆ. ಇದರಲ್ಲಿ ತುಂಬಾ ಪ್ರಮುಖವಾದವುಗಳು ಎಂದರೆ ದೀರ್ಘ ಮತ್ತು ಆರೋಗ್ಯವಂತ ಜೀವನ ನಡೆಸುವುದು, ಶಿಕ್ಷಿತರಾಗಿರುವುದು ಮತ್ತು ಒಂದು ಉತ್ತಮ ಜೀವನಮಟ್ಟವನ್ನು ಸಾಗಿಸುವುದು. ಹೆಚ್ಚುವರಿ ಆಯ್ಕೆಗಳು ರಾಜಕೀಯ ಸ್ವಾತಂತ್ರ್ಯ, ಇತರೆ ಖಾತ್ರಿಯಾದ ಮಾನವ ಹಕ್ಕುಗಳು ಮತ್ತು ಸ್ವಗೌರವದ ವಿವಿಧ ಅಂಶಗಳು. ಆದ್ದರಿಂದ, ಮಾನವ ಅಭಿವೃದ್ಧಿ ಎಂಬುದು ಜನರ ಆಯ್ಕೆಗಳನ್ನು ವಿಸ್ತರಿಸುವ ಮತ್ತು ಜೀವನ ಮಟ್ಟವನ್ನು ಹೆಚ್ಚಿಸುವ ಪ್ರಕ್ರಿಯೆಯಾಗಿದೆ.

ಯಾವುದೇ ಒಂದು ದೇಶದ ಮಾನವ ಅಭಿವೃದ್ಧಿ ಅನುಸೂಚಿಯ ಮೌಲ್ಯವನ್ನು ಈ ಕೆಳಗಿನ ಮೂರು ಸೂಚಕಗಳ ಸಹಾಯದಿಂದ ಅಂದಾಜು ಮಾಡಲಾಗುತ್ತದೆ.

**1. ದೀರ್ಘಾಯುಷ್ಯ (Longevity)**

ದೀರ್ಘಾಯುಷ್ಯವು ಜನರ ಆರೋಗ್ಯದ ಸ್ಥಿತಿಗತಿಗಳನ್ನು ಅವಲಂಬಿಸಿರುತ್ತದೆ. ಇದನ್ನು ಜನನದ ವೇಳೆಯಲ್ಲಿನ ಜೀವನ ನಿರೀಕ್ಷೆಯ ಸಹಾಯದಿಂದ ಅಳೆಯಲಾಗುತ್ತದೆ. ಇಲ್ಲಿ 25 ಮತ್ತು 85 ವರ್ಷಗಳ ನಡುವಿನ ವರ್ಷಗಳನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

**2. ಶಿಕ್ಷಣದ ಪ್ರಾಪ್ತಿ (Educational attainment)**

ಮಾನವ ಅಭಿವೃದ್ಧಿ ಅನುಸೂಚಿಯನ್ನು ತಯಾರಿಸಲು ಬಳಸಲಾಗುವ ಇನ್ನೊಂದು ಅನುಸೂಚಕವೆಂದರೆ ಸಂಪಾದಿಸಿದ ವಿದ್ಯೆಯಾಗಿದೆ. ಇದನ್ನು ವಯಸ್ಕ ಶಿಕ್ಷಣ (2/3 ಪ್ರಾಶಸ್ತ್ಯ) ಹಾಗೂ ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯ ದಾಖಲುಗಳ ಒಗ್ಗೂಡಿಕೆಯ (1/3ಪ್ರಾಶಸ್ತ್ಯ) ಅನುಪಾತಗಳ ಸಂಯೋಜನೆಯಿಂದ ಅಂದಾಜು ಮಾಡಲಾಗುತ್ತದೆ. ಇದರಲ್ಲಿ ವಯಸ್ಕ ಶಿಕ್ಷಣಕ್ಕೆ 0% ದಿಂದ 100% ಮತ್ತು ಸಂಯುಕ್ತ ದಾಖಲಾತಿ ಅನುಪಾತಕ್ಕೆ 0% ದಿಂದ 100% ಪ್ರಾಶಸ್ತ್ಯ ನೀಡಲಾಗುತ್ತದೆ.

**3. ಜೀವನ ಮಟ್ಟ (Standard of living)**

ಜೀವನಮಟ್ಟವನ್ನು ಡಾಲರುಗಳ ರೂಪದಲ್ಲಿ ಕೊಳ್ಳುವ ಶಕ್ತಿ ಸರಿಸಮಾನತೆಯ (PPP$) ಆಧಾರದಲ್ಲಿ ಕಂಡುಹಿಡಿಯಲಾದ ಒಟ್ಟು ದೇಶಿಯ ನೈಜ ತಲಾ ಉತ್ಪನ್ನದ ಮೂಲಕ ಅಂದಾಜು ಮಾಡಲಾಗುತ್ತದೆ.

ಮಾನವ ಅಭಿವೃದ್ಧಿ ಅನುಸೂಚಿಯು (HDI) ಜೀವನ ನಿರೀಕ್ಷೆ ಅನುಸೂಚಿ, ಶಿಕ್ಷಣ ಪ್ರಾಪ್ತಿ ಅನುಸೂಚಿ ಮತ್ತು ಹೊಂದಿಸಿದ ನೈಜ ಒಟ್ಟು ದೇಶೀ ತಲಾ ಉತ್ಪನ್ನ (PPP$) ಅನುಸೂಚಿಯ ಸರಳ ಸರಾಸರಿಯಾಗಿರುತ್ತದೆ. ಇದನ್ನು ಈ ಮೂರು ಅನುಸೂಚಕಗಳ ಒಟ್ಟು ಮೌಲ್ಯವನ್ನು ಮೂರರಿಂದ ವಿಭಾಗಿಸುವುದುರ ಮೂಲಕ ಕಂಡುಹಿಡಿಯಲಾಗುತ್ತದೆ. ಈ ಮೂರು ಅನುಸೂಚಕಗಳ ಮೌಲ್ಯವನ್ನು ಶೂನ್ಯದಿಂದ ಒಂದರ ನಡುವಿನ ದರ್ಜೆಗೆ

ಇಳಿಸಲಾಗುತ್ತದೆ. ಈ ಹಂತದಲ್ಲಿ ಪ್ರತಿಯೊಂದು ರಾಷ್ಟ್ರ ಈ ದರ್ಜೆಯ ಒಂದು ನಿರ್ದಿಷ್ಟ ಬಿಂದುವಿನಲ್ಲಿರುತ್ತದೆ.

(HDI) ಮಾಪನಕ್ಕೆ ಈ ಕೆಳಗಿನ ಸೂತ್ರವನ್ನು ಬಳಸಲಾಗುತ್ತದೆ.

$$(HDI) = \frac{\text{ಜೀವನ ನಿರೀಕ್ಷೆ ಅನುಸೂಚಿ + ಶಿಕ್ಷಣ ಪ್ರಾಪ್ತಿ ಅನುಸೂಚಿ + ನೈಜ ತಲಾದಾಯ ಅನುಸೂಚಿ}}{3}$$

ಉದಾಹರಣೆಗೆ : 2005ರಲ್ಲಿ ಜೀವನ ನಿರೀಕ್ಷೆ ಅನುಸೂಚಿಯು 0.62, ಶಿಕ್ಷಣದ ಪ್ರಾಪ್ತಿ ಅನುಸೂಚಿಯು 0.78 ಮತ್ತು ನೈಜ GDP ತಲಾದಾಯ ಸೂಚಿಯು 0.52 ಆಗಿದ್ದರೆ, ಮಾನವ ಅಭಿವೃದ್ಧಿ ಸೂಚಿಯು 0.64ಕ್ಕೆ ಸಮವಾಗಿರುತ್ತದೆ. ಆದ್ದರಿಂದ :

$$HDI = \frac{0.62+0.78+0.52}{3}$$

$$= \frac{1.92}{3} = 0.64$$

ಪ್ರತಿಯೊಂದು ರಾಷ್ಟ್ರದ ಮಾನವ ಅಭಿವೃದ್ಧಿ ಅನುಸೂಚಿಯ (HDI ) ಮೌಲ್ಯವು ಅದು 85 ವರ್ಷಗಳ ಜೀವನಾಯುಷ್ಯ, ಎಲ್ಲರಿಗೂ ಶಿಕ್ಷಣ ಮತ್ತು ಒಂದು ಯೋಗ್ಯ ಜೀವನ ಮಟ್ಟದಂತಹ ಗುರಿಗಳನ್ನು ಸಾಧಿಸಲು ಎಷ್ಟು ವರ್ಷಗಳ ಕಾಲಾವಕಾಶ ತೆಗೆದುಕೊಳ್ಳುತ್ತದೆ ಎಂಬುದನ್ನು ತಿಳಿಸುತ್ತದೆ. HDI ಯು ವಿವಿಧ ರಾಷ್ಟ್ರಗಳಿಗೆ ಸಾಪೇಕ್ಷವಾದ ದರ್ಜೆ ಅಥವಾ ಸ್ಥಾನವನ್ನು ನಿರ್ಣಯಿಸುತ್ತದೆ. ಯಾವುದೇ ಒಂದು ರಾಷ್ಟ್ರದ HDI ದರ್ಜೆಯು ಜಾಗತಿಕ ವಿತರಣೆಯ ಚೌಕಟ್ಟಿನೊಳಗಿರುತ್ತದೆ. ಅಂದರೆ HDI ದರ್ಜೆ ಒಂದು ರಾಷ್ಟ್ರ HDI ಕನಿಷ್ಟ ಮೌಲ್ಯವಾದ ಶೂನ್ಯದಿಂದ (0) ಗರಿಷ್ಟ ಮೌಲ್ಯವಾದ ಒಂದರವರಗೆ (1) ಸಾಗಲು ಎಷ್ಟು ಕಾಲಾವಧಿ ತೆಗೆದುಕೊಳ್ಳುತ್ತದೆ ಎಂಬ ಆಧಾರದಲ್ಲಿ ನಿರ್ಧಾರವಾಗುತ್ತದೆ. ಈ ಹಿನ್ನಲೆಯಲ್ಲಿ 0.5ಕ್ಕಿಂತ ಕಡಿಮೆ ಮಾನವ ಅಭಿವೃದ್ಧಿ ಅನುಸೂಚಿ (HDI) ಮೌಲ್ಯ ಹೊಂದಿರುವ ರಾಷ್ಟ್ರಗಳನ್ನು ಕಡಿಮೆ ಮಾನವ ಅಭಿವೃದ್ಧಿ ಸಾಧನೆಯ ರಾಷ್ಟ್ರಗಳೆಂದು, 0.5 ರಿಂದ 0.8 ರವರೆಗಿನ HDI ಮೌಲ್ಯ ಹೊಂದಿರುವ ರಾಷ್ಟ್ರಗಳನ್ನು ಮಾನವ ಅಭಿವೃದ್ಧಿಯ ಮಧ್ಯಮ ದರ್ಜೆಯ ರಾಷ್ಟ್ರಗಳೆಂದೂ ಹಾಗೂ 0.8ಕ್ಕಿಂತ ಹೆಚ್ಚಿನ HDI ಮೌಲ್ಯ ಹೊಂದಿದ ರಾಷ್ಟ್ರಗಳನ್ನು ಅತ್ಯುತ್ತಮ ಮಾನವ ಅಭಿವೃದ್ಧಿ ಸಾಧಿಸಿದ ರಾಷ್ಟ್ರಗಳೆಂದೂ ಪರಿಗಣಿಸಲಾಗುತ್ತದೆ. ಮಾನವ ಅಭಿವೃದ್ಧಿ ಅನುಸೂಚಿಯಲ್ಲಿ ರಾಷ್ಟ್ರಗಳ ದರ್ಜೆಯನ್ನು ಅವುಗಳ ಒಟ್ಟು ದೇಶಿಯ ತಲಾ ಉತ್ಪನ್ನದಿಂದಲೂ ನಿರ್ಧರಿಸಲಾಗುತ್ತದೆ.

2004ರ ಮಾನವ ಅಭಿವೃದ್ಧಿ ವರದಿಯು 2002ನೇ ಸಾಲಿಗೆ ಸಂಬಂಧಿಸಿದಂತೆ 177 ಮುಂದುವರಿದ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸಂಬಂಧಿಸಿದಂತೆ ಮಾನವ ಅಭಿವೃದ್ಧಿ ಅನುಸೂಚಿ ಮೌಲ್ಯಗಳು (HDI Values), ಮಾನವ ಅಭಿವೃದ್ಧಿ ಅನುಸೂಚಿ ದರ್ಜೆ

(HDI Rank) ಮತ್ತು ನೈಜ ಒಟ್ಟು ದೇಶಿಯ ತಲಾ ಉತ್ಪನ್ನದ ದರ್ಜೆಗಳನ್ನು ನೀಡಿದೆ. ಅವುಗಳ ವಿವರ ಈ ಮುಂದಿನ ಪುಟದ ಪಟ್ಟಿಯಲ್ಲಿ ಲಭ್ಯವಾಗುತ್ತದೆ.

ಪಟ್ಟಿಯಲ್ಲಿ ವ್ಯಕ್ತವಾದಂತೆ ಮಾನವ ಅಭಿವೃದ್ಧಿ ಅನುಸೂಚಿಯಲ್ಲಿ ನಾರ್ವೆ, ಸ್ವೀಡನ್ ಮತ್ತು ಆಸ್ಟ್ರೇಲಿಯಾಗಳು ಮೊದಲ ಮೂರು ಸ್ಥಾನ ಆಕ್ರಮಿಸಿಕೊಂಡಿವೆ. ಮಾನವ ಅಭಿವೃದ್ಧಿ ಅನುಸೂಚಿ ದರ್ಜೆಯಲ್ಲಿ (HDI Rank) ಶ್ರೀಲಂಕಾದ್ದು 96ನೇ ಸ್ಥಾನ, ಚೈನಾದ್ದು 94ನೇ ಸ್ಥಾನ, ಪಾಕಿಸ್ತಾನದ್ದು 142ನೇ ಸ್ಥಾನ, ಭಾರತದ್ದು 127ನೇ ಸ್ಥಾನ ಹಾಗೂ ನೇಪಾಳದ್ದು 140ನೇ ಸ್ಥಾನವಾಗಿದೆ. ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿ ವರದಿಯ ಪ್ರಕಾರ ಕೆಲ ರಾಷ್ಟ್ರಗಳಲ್ಲಿ ನೈಜ ಒಟ್ಟು ದೇಶೀಯ ತಲಾ ಉತ್ಪನ್ನದ ದರ್ಜೆ HDI ದರ್ಜೆಗಿಂತ ಅಧಿಕವಿದೆ. ಅಂದರೆ ಈ ರಾಷ್ಟ್ರಗಳಲ್ಲಿ HDI ದರ್ಜೆಯನ್ನು ಸುಧಾರಿಸಲು ವಿಪುಲ ಅವಕಾಶಗಳಿವೆ. ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿ ಅನುಸೂಚಿಯು ವಿವಿಧ ರಾಷ್ಟ್ರಗಳಲ್ಲಿನ ಅಭಿವೃದ್ಧಿ ಸಾಧನೆಯ ಚಿತ್ರಣವನ್ನು ನೀಡುತ್ತದೆ. ಈ ಮಾನವ ಅಭಿವೃದ್ಧಿ ವರದಿಯ ಪ್ರಕಾರ ಕನಿಷ್ಟ ಮಾನವ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಉನ್ನತ ಮಾನವ ಅಭಿವೃದ್ಧಿ ಹಂತವನ್ನು ತಲುಪಲು 200ಕ್ಕೂ ಹೆಚ್ಚಿನ ವರ್ಷಗಳನ್ನು ತೆಗೆದುಕೊಳ್ಳುತ್ತವೆ. ಚೈನಾ ದೇಶ ಈ ಹಂತವನ್ನು 25 ವರ್ಷಗಳ ಒಳಗೇ ತಲುಪಿದರೆ ಭಾರತ ಶತಮಾನಕ್ಕಿಂತಲೂ ಅಧಿಕ ಕಾಲಾವಧಿ ತೆಗೆದುಕೊಳ್ಳುತ್ತದೆ.

ಮಿತಿಗಳು (Limitations) :

ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದವರು ತಯಾರಿಸಿದ ಮಾನವ ಅಭಿವೃದ್ಧಿ ಅನುಸೂಚಿಯೂ ಸಹ ದೋಷಗಳಿಂದ ಹೊರತಾಗಿಲ್ಲ. ಪ್ರಮುಖ ದೋಷ ಅಥವಾ ಮಿತಿಗಳು ಈ ಮುಂದಿನಂತಿವೆ.

1. ಮಾನವ ಅಭಿವೃದ್ಧಿಯ ನಿರ್ಧಾರದಲ್ಲಿ ಕೇವಲ ಮೂರು ಅನುಸೂಚಕಗಳನ್ನು ಪರಿಗಣಿಸಿದರೆ ಸಾಲದು. ಇವುಗಳ ಜೊತೆಗೆ ಶಿಶುಮರಣ, ಪೌಷ್ಟಿಕಾಂಶ ಮುಂತಾದ ಅಂಶಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಪಟ್ಟಿ : ಕೆಲ ಆಯ್ದ ರಾಷ್ಟ್ರಗಳ ಮಾನವ ಅಭಿವೃದ್ಧಿ ಸೂಚಿ, 2002

| ದೇಶ | HDI ಮೌಲ್ಯ 2002 | HDI ದರ್ಜೆ 2002 | ನೈಜಾGDP ತಲಾ ಉತ್ಪನ್ನ (PPP$)2002 | ನೈಜಾGDP ತಲಾ ಉತ್ಪನ್ನ ದರ್ಜೆ-HDI |
|---|---|---|---|---|
| **1. ಉನ್ನತ ಮಾನವ ಅಭಿವೃದ್ಧಿ** | | | | |
| ಸ್ವೀಡನ್ | 0.946 | 2 | 26,050 | 19 |
| ನಾರ್ವೆ | 0.956 | 1 | 36,600 | 1 |
| ಆಸ್ಟ್ರೇಲಿಯಾ | 0.946 | 3 | 28.260 | 9 |
| ಕೆನಡಾ | 0.943 | 4 | 29.480 | 5 |
| ಬೆಲ್ಜಿಯಂ | 0.942 | 6 | 27.570 | 7 |
| ಅಮೆರಿಕ | 0.939 | 8 | 35,750 | –4 |
| ಜಪಾನ್ | 0.938 | 9 | 26.940 | 6 |
| ಇಂಗ್ಲೆಂಡ್ | 0.936 | 12 | 26.150 | 8 |
| **2. ಮಧ್ಯಮ ಮಾನವ ಅಭಿವೃದ್ಧಿ** | | | | |
| ಮೆಕ್ಸಿಕೊ | 0.802 | 53 | 8.970 | 5 |
| ಶ್ರೀಲಂಕಾ | 0.740 | 96 | 3.570 | 16 |
| ಟರ್ಕಿ | 0.751 | 88 | 6.390 | –12 |
| ಚೈನಾ | 0.745 | 94 | 4.580 | 5 |
| ಭಾರತ | 0.595 | 127 | 2.670 | –10 |
| **3. ಕನಿಷ್ಠ ಮಾನವ ಅಭಿವೃದ್ಧಿ** | | | | |
| ಪಾಕಿಸ್ತಾನ | 0.497 | 142 | 1.940 | –7 |
| ನೇಪಾಳ | 0.504 | 140 | 1,370 | 11 |
| ಬಾಂಗ್ಲಾದೇಶ | 0.509 | 138 | 1,700 | 1 |
| ಇಥಿಯೋಪಿಯಾ | 0.359 | 170 | 780 | –1 |
| ಸಿಯಾರಾ ಲಿಯೊನ್ | 0.273 | 177 | 520 | – |

ಆಧಾರ : ಮಾನವ ಅಭಿವೃದ್ಧಿ ವರದಿ, 2004

2. ಮಾನವ ಅಭಿವೃದ್ಧಿ ಅನುಸೂಚಿಯು ಸಾಪೇಕ್ಷ ಅಂದಾಜಾಗಿದೆಯೇ ಹೊರತು ನಿರಪೇಕ್ಷ ಅಂದಾಜಲ್ಲ. ಒಂದು ವೇಳೆ ಎಲ್ಲಾ ರಾಷ್ಟ್ರಗಳು ತಮ್ಮ HDI ಮೌಲ್ಯವನ್ನು

ಸುಧಾರಿಸಿಕೊಂಡರೆ ಕನಿಷ್ಟ ಮಾನವ ಅಭಿವೃದ್ಧಿ ಮೌಲ್ಯ ಹೊಂದಿರುವ ರಾಷ್ಟ್ರಗಳು ತಮ್ಮ ಸುಧಾರಣೆಯ ಪರಿಗಣನೆ ಪಡೆಯುವುದೇ ಇಲ್ಲ.

3. ಒಂದು ರಾಷ್ಟ್ರದ ಮಾನವ ಅಭಿವೃದ್ಧಿ ಅನುಸೂಚಿಯು ಅಲ್ಲಿನ ಅತೀ ಹೆಚ್ಚಿನ ಅದಾಯ ಅಸಮಾನತೆಯಿಂದ ಗಮನವನ್ನು ಬೇರೆಡೆಗೆ ಸೆಳೆಯುತ್ತದೆ.
4. ಈ ವಿಧಾನಕ್ಕಿಂತ ಒಟ್ಟು ದೇಶಿಯ ತಲಾ ಉತ್ಪನ್ನದ ದರ್ಜೆಯೊಂದಿಗೆ ಇತರೆ ಸಾಮಾಜಿಕ ಸೂಚಕಗಳನ್ನು ಪರಿಗಣಿಸಿದರೆ ಒಂದು ಉತ್ತಮ ಪರ್ಯಾಯ ಮಾರ್ಗವಾಗಬಲ್ಲದು.
5. ಈ ವಿಧಾನದಲ್ಲಿ ನೈತಿಕ ಅಂಶಗಳು ಪರಿಗಣನೆ ಅಧಿಕವಿದೆ.
6. ಇಲ್ಲಿ ಗುಣಮಟ್ಟಕ್ಕೆ ಪ್ರಾಶಸ್ತ್ಯವಿಲ್ಲ.

**ಜೀವನಮಟ್ಟ ಅನುಸೂಚಿ (Standard of living Index - SOLI)**

ಆರ್ಥಿಕ ಅಭಿವೃದ್ಧಿಯನ್ನು ಮಾಪನ ಮಾಡಲು ಬಳಸಲಾಗುವ ಇನ್ನೊಂದು ಮಾನದಂಡವೆಂದರೆ ಜೀವನಮಟ್ಟ ಅನುಸೂಚಿಯಾಗಿದೆ. ಕೆಲವು ಅರ್ಥಶಾಸ್ತ್ರಜ್ಞರ ಅಭಿಪ್ರಾಯದಲ್ಲಿ ಅನುಭೋಗದ ಏರಿಕೆ ಮತ್ತು ಉನ್ನತ ಜೀವನಮಟ್ಟವು ಆರ್ಥಿಕ ಅಭಿವೃದ್ಧಿಯ ಸೂಚಕವಾಗಿದೆ. ಈ ದೃಷ್ಟಿಕೋನದ ಪ್ರಕಾರ, ನೈಜ ತಲಾದಾಯ ಅಥವಾ ನೈಜ ರಾಷ್ಟ್ರೀಯ ಆದಾಯದಲ್ಲಿನ ಏರಿಕೆಗೆ ಬದಲಾಗಿ ಜೀವನ ಮಟ್ಟವನ್ನು ಆರ್ಥಿಕ ಅಭಿವೃದ್ಧಿಯ ಸೂಚಿಯಾಗಿ ತೆಗೆದುಕೊಳ್ಳಬೇಕು. ಜನಸಾಮಾನ್ಯರಿಗೆ ಜೀವನಮಟ್ಟದಲ್ಲಿನ ಸುಧಾರಣೆಯ ಮೂಲಕ ಉತ್ತಮ ಜೀವನವನ್ನು ಕಲ್ಪಿಸಿಕೊಡುವುದು ಆರ್ಥಿಕ ಅಭಿವೃದ್ಧಿಯ ಪರಮ ಧ್ಯೇಯವಾಗಿದೆ.

ಜನರ ಸರಾಸರಿ ಅನುಭೋಗ ಪ್ರಮಾಣ ಹೆಚ್ಚಿದೆ ಎಂದರೆ ಅವರ ಜೀವನಮಟ್ಟ ಸುಧಾರಿಸಿದೆ ಎಂದರ್ಥ, ಆಗ ಅವರ ಜೀವನ ಉತ್ತಮವಾಗಿರುತ್ತದೆ. ಹೀಗೆ ಜೀವನಮಟ್ಟದಲ್ಲಿ ಸುಧಾರಣೆಯಾಗುವುದು ಆರ್ಥಿಕ ಅಭಿವೃದ್ಧಿ ಸೂಚಕವಾಗಬಲ್ಲದು. ಅಂದರೆ, ಯಾವುದೇ ದೇಶ ತನ್ನ ಪ್ರಜೆಗಳ ಜೀವನಮಟ್ಟ ಮತ್ತು ಅನುಭೋಗ ಪ್ರಮಾಣವನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿದೆ ಎಂದರೆ ಆ ದೇಶ ಆರ್ಥಿಕ ಅಭಿವೃದ್ಧಿಯತ್ತ ಮುನ್ನಡೆದಿದೆ ಎಂದರ್ಥ. ಉದಾಹರಣೆಗೆ ಅಮೇರಿಕ, ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್ ಮೊದಲಾದ ದೇಶಗಳನ್ನು ಮುಂದುವರಿದ ಅಭಿವೃದ್ಧಿ ದೇಶಗಳು ಎಂದು ಕರೆದಿರುವುದು ಅವುಗಳ ಉನ್ನತ ದರದ ಅನುಭೋಗ ಮತ್ತು ಉತ್ತಮ ಜೀವನಮಟ್ಟದ ಕಾರಣದಿಂದಾಗಿ. ಪ್ರತಿಯಾಗಿ,ಕಡಿಮೆ ಪ್ರಮಾಣದ ಅನುಭೋಗ ಮತ್ತು ಕನಿಷ್ಟ ಜೀವನಮಟ್ಟದ ಕಾರಣದಿಂದಾಗಿ ಭಾರತ, ಪಾಕಿಸ್ತಾನ, ಶ್ರೀಲಂಕ, ಚೈನಾ, ನಮೀಬಿಯ, ಜಿಂಬಾವ್ವೆ, ಕೆನ್ಯಾ ಮೊದಲಾದ ದೇಶಗಳನ್ನು ಅಭಿವೃದ್ಧಿಶೀಲ ದೇಶಗಳು ಎಂದು ಕರೆಯಲಾಗಿದೆ.

**SOLIನ ಮಿತಿಗಳು (Limitations of SOLI)**

ಆರ್ಥಿಕ ಅಭಿವೃದ್ಧಿ ಮಾಪನದ ಮಾನದಂಡವಾಗಿ ಜೀವನಮಟ್ಟ ಸೂಚಿಯು ಈ

ಕೆಳಗಿನ ಮಿತಿಗಳನ್ನು ಹೊಂದಿದೆ.

i ) ಜೀವನಮಟ್ಟ ಎಂಬುದು ಮಾನಸಿಕವಾದುದು. ಇದನ್ನು ಯಾವುದೇ ವಸ್ತುನಿಷ್ಠ ಮಾನದಂಡದಿಂದ ಅಳೆಯಲಾಗುವುದಿಲ್ಲ.

ii) ಹಿಂದುಳಿದ ದೇಶಗಳಲ್ಲಿ ಅನುಭೋಗ ಪ್ರವೃತ್ತಿಯು ಈಗಾಗಲೇ ಅಧಿಕವಿದೆ. ಆದ್ದರಿಂದ ಮಿತಿಮೀರಿದ ಅನುಭೋಗವನ್ನು ತಡೆಗಟ್ಟುವ ಮೂಲಕ ಉಳಿತಾಯ ಮತ್ತು ಬಂಡವಾಳ ಸಂಚಯನವನ್ನು ಹೆಚ್ಚಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ.

iii) ಸರ್ಕಾರವು ವಿಧಿಸುವ ಅಧಿಕ ದರದ ತೆರಿಗೆಯು ಅನುಭೋಗ ಮತ್ತು ಜೀವನಮಟ್ಟವನ್ನು ಕಡಿಮೆಗೊಳಿಸಬಹುದು."[15]

ಈ ಮೇಲಿನ ಮಾಹಿತಿಗಳಲ್ಲಿ 'ಅನುಸೂಚಿ' ಎಂದು ಅನುವಾದಿಸಿದ್ದಾರೆ, ಅದು 'ಸೂಚಿ' ಎಂದಷ್ಟೆ ಹೇಳಿದ್ದರೆ ಸಾಕಾಗುತ್ತಿತ್ತು. ಅಲ್ಲದೆ ಗೊಂದಲಗಳಿಗೆ ಸಿಲುಕುವ ಸಾಧ್ಯತೆಗಳಿವೆ ಕಾರಣ ಅನುವಾದಕರು ಪಠ್ಯಕ್ರಮದ ಪ್ರಕಾರ Index ಪದಕ್ಕೆ ಮಾಹಿತಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಪೂರೈಸಿರುತ್ತಾರೆ. ಇದೆಲ್ಲವೂ ಪಠ್ಯಕ್ರಮಕ್ಕೆ ಇದೆಯೆಂದು ಭಾವಿಸುವವರಿಗೆ ಅಧಿಕ ಹೊರೆಯಾಗುವ ಸಾಧ್ಯತೆಗಳಿವೆ. ಆದ್ದರಿಂದ ಅನುವಾದಕರು ಪಠ್ಯ ಕ್ರಮಕ್ಕೆ ಸಂಬಂಧಿಸಿದ ಮಾಹಿತಿಯನ್ನು ವಿದ್ಯಾರ್ಥಿಗಳ ಬೌದ್ಧಿಕ ಮಟ್ಟ ಹಾಗೂ ಅವರಿಗೆ ದೊರೆಯುವ ಸಮಯವನ್ನು ಗಮನಿಸಲು ವಿನಂತಿಸಲಾಗಿದೆ.

**" ಮಾನವ ಅಭಿವೃದ್ಧಿ ಸೂಚಿ**
**(Human Development Index)**

"ಒಂದು ದೇಶದ ಜನರ ಜೀವಿತಾವಧಿ, ಆರೋಗ್ಯ, ಶಿಕ್ಷಣ ಜೀವನಮಟ್ಟಗಳ, ಮುಖಾಂತರ ಆರ್ಥಿಕ ಪ್ರಗತಿಯನ್ನು ಅಳೆಯುವುದಕ್ಕೆ ಮಾನವ ಅಭಿವೃದ್ಧಿ ಸೂಚಿ ಎಂದು ಕರೆಯುತ್ತಾರೆ".

ದೀರ್ಘಾಯುಷ್ಯದಿಂದ ಕೂಡಿದ ಉತ್ತಮವಾದ ಹಾಗೂ ಆರೋಗ್ಯವಂತ ಜೀವನ ನಡೆಸುವುದಕ್ಕೆ ಮಾನವ ಅಭಿವೃದ್ಧಿ ಎನ್ನಲಾಗುತ್ತದೆ. ಅಲ್ಲದೆ ಉತ್ತಮ ಜೀವನಮಟ್ಟ, ರಾಜಕೀಯ ಸ್ವಾತಂತ್ರ್ಯ ಮಾನವ ಹಕ್ಕು, ಸ್ವಾಭಿಮಾನ ಮುಂತಾದ ಅಂಶಗಳು ಮಾನವ ಅಭಿವೃದ್ಧಿಯಲ್ಲಿ ಸೇರಿರುತ್ತವೆ.

ಯಾವುದೇ ದೇಶದ ಮಾನವ ಅಭಿವೃದ್ಧಿಯನ್ನು ಲೆಕ್ಕ ಹಾಕಲು ಕೆಳಕಂಡ ಮೂರು ಘಟಕಗಳನ್ನು (Indicators) ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

1. ನಿರೀಕ್ಷಿತ ಜೀವಿತಾವಧಿ ಸೂಚಿ LEI
2. ಶೈಕ್ಷಣಿಕ ಸಿದ್ಧಿಯ ಸೂಚಿ EAI
3. ಜೀವನಮಟ್ಟ ಸೂಚಿ SOLI

ಈ ಮೂರು ಸೂಚಿಗಳ ಸರಾಸರಿಯೇ ಮಾನವ ಅಭಿವೃದ್ಧಿ ಸೂಚಿ. ಇದನ್ನು ಈ ಕೆಳಕಂಡಂತೆ ಸೂತ್ರದ ರೂಪದಲ್ಲಿ ತಿಳಿಸಬಹುದು.

$$HDI = \frac{LEI + EAI + SOLI}{3}$$

1. ನಿರೀಕ್ಷಿತ ಜೀವಿತಾವಧಿ ಸೂಚಿ : ಇಲ್ಲಿ ಹುಟ್ಟಿದ ಮಗು ಎಷ್ಟೂ ವರ್ಷಗಳು ಬದುಕುತ್ತದೆ ಎಂಬುದನ್ನು ಕಂಡು ಹಿಡಿಯಲಾಗುತ್ತದೆ. PQLIನಲ್ಲಿ ತೆಗೆದುಕೊಂಡಂತೆ ಕನಿಷ್ಟ 25ವರ್ಷ ಗರಿಷ್ಟ 85ವರ್ಷಗಳನ್ನು ತೆಗೆದುಕೊಳ್ಳಲಾಗುತ್ತದೆ.

2. ಶೈಕ್ಷಣಿಕ ಸಿದ್ದಿ ಸೂಚಿ : ದೇಶದ ಜನರ ಸರಾಸರಿ ಶೈಕ್ಷಣಿಕ ಸಾಧನೆಯ ಮಟ್ಟವನ್ನು ಸೂಚಿಸುವುದೇ ಶೈಕ್ಷಣಿಕ ಸಿದ್ದಿ ಇಲ್ಲಿ ಎರಡೂ ಘಟಕಗಳನ್ನು ತೆಗೆದುಕೊಳ್ಳಲಾಗುತ್ತದೆ ಅವುಗಳೆಂದರೆ ವಯಸ್ಕ ಸಾಕ್ಷರತಾ ದರ ALR (Adult Literacy Rate) 15 ವರ್ಷಕ್ಕೂ ಮೇಲ್ಪಟ್ಟ ಜನರಲ್ಲಿ ಒಂದು ಸರಳ ವಾಕ್ಯವನ್ನು ಓದಲು, ಬರೆಯಲು ಶಕ್ತರಾದ ಜನರ ಶೇಕಡಾ ಪ್ರಮಾಣ,

ಒಟ್ಟು ದಾಖಲಾತಿ ದರ (Gross Enrolment Ratio) ಇಲ್ಲಿ ಶಿಕ್ಷಣದ ವಿವಿಧ ಹಂತಗಳಲ್ಲಿ ದಾಖಲಾತಿ ಪಡೆದ ವಿದ್ಯಾರ್ಥಿಗಳ ಒಟ್ಟು ಶೇಕಡಾ ಪ್ರಮಾಣವನ್ನು ತೆಗೆದುಕೊಳ್ಳಲಾಗುತ್ತದೆ. GER ಹೆಚ್ಚಾಗಿದ್ದರೆ ಜೀವನ ಗುಣಮಟ್ಟದ ಹೆಚ್ಚಳವನ್ನು ಸೂಚಿಸುತ್ತದೆ.

3. ಜೀವನ ಮಟ್ಟ ಸೂಚಿ : ದೇಶದ ಜನರು ಉತ್ತಮ ಗುಣಮಟ್ಟದ ಸರಕು ಮತ್ತು ಸೇವೆಗಳನ್ನು ಕೊಂಡು ಬಳಸುವ ಪ್ರಮಾಣವನ್ನು ಯೋಗ್ಯ ಜೀವನ ಮಟ್ಟ ಸೂಚಿಸುತ್ತದೆ. ಜೀವನ ಮಟ್ಟವು ತಲಾ ವರಮಾನದಿಂದ ನಿರ್ಧರಿಸಲ್ಪಡುತ್ತದೆ. ಇಲ್ಲಿ ಕೊಳ್ಳುವ ಶಕ್ತಿಯ ಆಧಾರಕ್ಕಾಗಿ PPP$ ತಲಾ ವರಮಾನವನ್ನು (ಕನಿಷ್ಟ 100 ಡಾಲರ್ ಎಂದು ಗರಿಷ್ಟ 40,000ಡಾಲರ್ ಎಂದು ತೆಗೆದುಕೊಳ್ಳಲಾಗುತ್ತದೆ)

ಮೇಲಿನ ಮೂರು ಸೂಚಿಗಳನ್ನು ಕಂಡು ಹಿಡಿದು ಅನಂತರ HDI ಯನ್ನು ಲೆಕ್ಕಹಾಕಲಾಗುತ್ತದೆ ಉದಾ: 2005ನೇ ವರ್ಷದಲ್ಲಿ ಭಾರತದ ನಿರೀಕ್ಷಿತ ಜೀವಿತಾವಧಿ ಸೂಚಿ 0.62, ಶೈಕ್ಷಣಿಕ ಸಿದ್ದಿ ಸೂಚಿ 0.78 ಹಾಗೂ ಜೀವನಮಟ್ಟ ಸೂಚಿ 0.52ರಷ್ಟಿದೆ ಎಂದು ಭಾವಿಸಿದರೆ, ಮಾನವ ಅಭಿವೃದ್ಧಿ ಸೂಚಿಯನ್ನು ಈ ಕೆಳಕಂಡಂತೆ ಲೆಕ್ಕ ಹಾಕಬಹುದು

$$HDI = \frac{LEI + EAI + SOLI}{3}$$

$$= \frac{0.62 + 0.78 + 0.52}{3}$$

$$= \frac{1.923}{3} = 0.64$$

HDIನ ಮೌಲ್ಯ 0.8ಕ್ಕಿಂತ ಹೆಚ್ಚಾಗಿದ್ದರೆ ಉತ್ತಮ ಮಾನವ ಅಭಿವೃದ್ಧಿ ಹೊಂದಿದ ದೇಶವೆಂದು 0.5ರಿಂದ 0.8ರವರಗೆ ಇದ್ದರೆ ಸಾಧರಣ ಮಾನವ ಅಭಿವೃದ್ಧಿ ಹೊಂದಿದ ದೇಶವೆಂದು 0.5ಕ್ಕಿಂತ ಕಡಿಮೆ ಇದ್ದರೆ ಕಡಿಮೆ ಮಾನವ ಅಭಿವೃದ್ಧಿ ಹೊಂದಿದ ದೇಶವೆಂದು ಪರಿಗಣಿಸಲಾಗುತ್ತದೆ, ಹೀಗಾಗಿ 2005ರ ಅಂಕಿ ಅಂಶಗಳ ಪ್ರಕಾರ ಭಾರತದ HDI 0.64 ಆಗಿದ್ದು ಭಾರತದಲ್ಲಿ ಮಾನವ ಸಂಪತ್ತು ಉತ್ತಮ ಸ್ಥಿತಿಯತ್ತ ಸಾಗುತ್ತಿದೆ ಎಂಬುದು ತಿಳಿದು ಬರುತ್ತದೆ.

**ಜೀವನ ಮಟ್ಟ ಸೂಚಿ**

**(Standard of living Index )**

"ದೇಶದ ಜನರು ಉಪಯೋಗಿಸುವ ಅವಶ್ಯಕ ಆರಾಮದ ಮತ್ತು ವಿಲಾಸಿ ವಸ್ತುಗಳ ಮುಖಾಂತರ ಆರ್ಥಿಕ ಪ್ರಗತಿಯನ್ನು ಅಳೆಯುವುದಕ್ಕೆ ಜೀವನ ಮಟ್ಟ ಸೂಚಿ ಎನ್ನುವರು".

ಒಂದು ನಿರ್ದಿಷ್ಟ ಕಾಲದಲ್ಲಿ ದೇಶದಲ್ಲಿನ ಜನರು ಕೊಂಡು ಬಳಸುವ ಅವಶ್ಯಕ, ಆರಾಮದ ಹಾಗೂ ವಿಲಾಸಿ ವಸ್ತುಗಳ ಪ್ರಮಾಣ ಮತ್ತು ಗುಣಮಟ್ಟವು ಅಲ್ಲಿನ ಜನರ ಜೀವನ ಮಟ್ಟವನ್ನು ಸೂಚಿಸುತ್ತದೆ. ದೇಶದ ಜನರು ಹೆಚ್ಚು ಹೆಚ್ಚು ಆರಾಮದ ಹಾಗೂ ವಿಲಾಸಿ ವಸ್ತುಗಳಾದ ಉತ್ತಮ ಆಹಾರ, ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯ, ವಾಹನಗಳು, ಆಭರಣಗಳು, ವಿಮಾನ ಪ್ರಯಾಣ, ಟಿ.ವಿ, ವಿ.ಸಿ.ಡಿ, ರೆಫ್ರಿಜಿರೇಟರ್, ಸೌಂದರ್ಯ ಸಾಧನಗಳು, ಮೊಬೈಲ್ ಪೋನ್‌ಗಳು ಮುಂತಾದವಗುಗಳನ್ನು ಬಳಸುತ್ತಿದ್ದು ಸುಖವಾದ ಜೀವನವನ್ನು ನಡೆಸುತ್ತಿದ್ದರೆ ಅವರ ಜೀವನ ಮಟ್ಟ ಉತ್ತಮವಾಗಿರುತ್ತದೆ. ಆಗ ದೇಶದ ಆರ್ಥಿಕ ಮಟ್ಟವು ಉತ್ತಮವಾಗಿದೆ ಎಂದು ತಿಳಿದು ಬರುತ್ತದೆ.

ಉದಾ :- ಆಮೆರಿಕಾ, ಇಂಗ್ಲೆಂಡ್, ಯೂರೋಪು ದೇಶಗಳು, ಜಪಾನ್, ಆಸ್ಟ್ರೇಲಿಯಾ ಮುಂತಾದ ದೇಶಗಳ ಜನರು ಅತ್ಯಾಧುನಿಕ ವಸ್ತುಗಳನ್ನು ಹೆಚ್ಚು ಪ್ರಮಾಣದಲ್ಲಿ ಅನುಭೋಗಿಸುತ್ತಾರೆ. ಆದ್ದರಿಂದ ಅವರ ಜೀವನ ಮಟ್ಟ ಉತ್ತಮವಾಗಿದೆ. ಆದರೆ ಭಾರತ, ಚೀನಾ, ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳ, ಆಫ್ರಿಕಾ ಮುಂತಾದ ದೇಶಗಳ ಜನರ ಅನುಭೋಗ ಪ್ರಮಾಣ ಕಡಿಮೆ ಇರುವುದರಿಂದ ಈ ದೇಶಗಳ ಜನರ ಜೀವನಮಟ್ಟ ಸಾಧಾರಣವಾಗಿದೆ.

ಉದಾ :- ಪ್ರತಿ ಸಾವಿರ ಜನರಿಗೆ ಭಾರತದಲ್ಲಿ 69 ಟಿ.ವಿಗಳಿದ್ದರೆ ಅಮೆರಿಕಾದಲ್ಲಿ 847 ಹಾಗೂ ಇಂಗ್ಲೆಂಡಿನಲ್ಲಿ 645 ಟಿ.ವಿ.ಗಳಿವೆ, ಚೈನಾದಲ್ಲಿ 272 ಟಿ.ವಿಗಳಿವೆ.

ಒಟ್ಟಿನಲ್ಲಿ ಇತ್ತೀಚಿಗೆ ರಾಷ್ಟ್ರೀಯ ಆದಾಯ ಹಾಗೂ ತಲಾ ಆದಾಯಕ್ಕಿಂತ ಜನರ ಜೀವನ ಮಟ್ಟದ ಆಧಾರದ ಮೇಲೆ ದೇಶದ ಆರ್ಥಿಕ ಅಭಿವೃದ್ಧಿಯನ್ನು ಅಳೆಯಲಾಗುತ್ತದೆ."[16]

ಮೇಲಿನ ಸಾರಾಂಶವನ್ನು ಪರಿಶೀಲಿಸಲಾಗಿ ಅನುವಾದಕರು ಅನೇಕ ವಿಚಾರಗಳನ್ನು ಕನ್ನಡಕ್ಕೆ ತಂದಿರುವುದು ಸಂತೋಷದ ಸಂಗತಿ. Index ಎನ್ನುವ ಆಂಗ್ಲಪದ ಕನ್ನಡದಲ್ಲಿ ಸೂಚಿ ಎಂದು ಅನುವಾದಿಸಿರುವುದು ವಿದ್ಯಾರ್ಥಿಗಳಿಗೆ ಮತ್ತು ಬೋಧಕರಿಗೆ ಯಾವುದೆ

ಆತಂಕವಾಗಲಿ ಇಲ್ಲವೆ ಸಮಸ್ಯೆಯಾಗಲಿ ಆಗದೆ ನಿರಾಳವಾಗಿರಲು ಸಹಕಾರಿಯಾಗಿದೆ. ನೀಡಿರುವ ಮಾಹಿತಿಯು ಸಹ ಸೂಕ್ತ ಮತ್ತು ಸಮರ್ಪಕವಾದ ಪ್ರಮಾಣದಲ್ಲಿ ಇರುವುದು ಯೋಗ್ಯವೆನಿಸುತ್ತದೆ.

**" ದತ್ತಾಂಶಗಳ ವಿಧಗಳು ಮತ್ತು ಅವುಗಳ ವಿವರಣೆ**

**( Types and Diescription of Data)**

ದತ್ತಾಂಶ ಅಥವಾ ಅಂಕಿ ಅಂಶಗಳು ಸಂಖ್ಯಾಶಾಸ್ತ್ರದ ಅಧ್ಯಯನದಲ್ಲಿ ಹೆಚ್ಚು ಮಹತ್ವವನ್ನು ಹೊಂದಿವೆ. ಅರ್ಥಶಾಸ್ತ್ರವೂ ಸಹ ತನ್ನ ಅಧ್ಯಯನದಲ್ಲಿ ಸಂಖ್ಯಾಶಾಸ್ತ್ರದ ಅಂಕಿ ಸಂಖ್ಯೆಗಳನ್ನು ವ್ಯಾಪಕವಾಗಿ ಬಳಸಿಕೊಳ್ಳುತ್ತದೆ. ರಾಷ್ಟ್ರೀಯ ಆದಾಯ, ತಲಾ ಆದಾಯ, ಕೃಷಿ, ಕೈಗಾರಿಕೆಗಳ ಉತ್ಪಾದನೆ, ವ್ಯಾಪಾರ, ವಾಣಿಜ್ಯ, ಬ್ಯಾಂಕು ಮುಂತಾದ ಎಲ್ಲಾ ಕ್ಷೇತ್ರಗಳ ಅಧ್ಯಯನದಲ್ಲಿ ಅಂಕಿ ಅಂಶಗಳು ಅಥವಾ ದತ್ತಾಂಶಗಳು ಮಹತ್ವದ ಪಾತ್ರವಹಿಸುತ್ತವೆ.

**ಆರ್ಥಿಕ ದತ್ತಾಂಶಗಳ ವಿಧಗಳು**

**(Types of Economic Data)**

ಆರ್ಥಿಕ ವ್ಯವಸ್ಥೆಯ ವಾಸ್ತವಾಂಶಗಳ ಬಗ್ಗೆ ಸಂಗ್ರಹಿಸುವ ಅಂಕಿ ಅಂಶಗಳನ್ನು ಆರ್ಥಿಕ ದತ್ತಾಂಶ ಎಂದು ಕರೆಯುತ್ತೇವೆ. ಉದಾ : ರಾಷ್ಟ್ರೀಯ ಆದಾಯ, ತಲಾ ಆದಾಯ, ಕೃಷಿ ಮತ್ತು ಕೈಗಾರಿಕೆಗಳ ಉತ್ಪಾದನೆ, ವ್ಯಾಪಾರ, ವಾಣಿಜ್ಯ, ರಫ್ತು, ಪ್ರಮಾಣ, ಜನಸಂಖ್ಯಾ ಬೆಳವಣಿಗೆ ಮುಂತಾದವುಗಳು.

ಆರ್ಥಿಕ ದತ್ತಾಂಶಗಳನ್ನು ಈ ಕೆಳಕಂಡಂತೆ ವಿಂಗಡಿಸಿ ಅಧ್ಯಯನ ಮಾಡಬಹುದು.

1. ಪ್ರಾಥಮಿಕ ದತ್ತಾಂಶ
2. ಮಾಧ್ಯಮಿಕ ದತ್ತಾಂಶ
3. ಅಡ್ಡ ವಿಭಾಗ ಮತ್ತು ಸಮಯ ಶ್ರೇಣಿ ದತ್ತಾಂಶ
4. ಸಮೀಕ್ಷೆ ಮತ್ತು ಗಣತಿ ದತ್ತಾಂಶ

**1. ಪ್ರಾಥಮಿಕ ದತ್ತಾಂಶ (ಅಂಕಿ ಅಂಶ)**

**(Primary Data )**

ಮೊದಲ ಬಾರಿಗೆ ಸಂಗ್ರಹಿಸಲ್ಪಡುವ ಮಾಹಿತಿಗಳಿಗೆ ಪ್ರಾಥಮಿಕ ದತ್ತಾಂಶ ಎಂದು ಹೆಸರು. ಅಂದರೆ ಒಬ್ಬ ಶೋಧಕನು ಮೊದಲ ಬಾರಿಗೆ ತನ್ನ ಸ್ವಂತ ಉಪಯೋಗಕ್ಕಾಗಿ ಸಂಗ್ರಹಿಸಿದ ದತ್ತಾಂಶಗಳನ್ನು ಪ್ರಾಥಮಿಕ ದತ್ತಾಂಶಗಳು ಎನ್ನುತ್ತೇವೆ. ಇಲ್ಲಿ ಶೋಧಕನು ತಾನೇ ಸ್ವತಃ ಮಾಹಿತಿಯನ್ನು ನೇರವಾಗಿ ಸಂಗ್ರಹಿಸುತ್ತಾನೆ. ಪ್ರಾಥಮಿಕ ದತ್ತಾಂಶ ಕಚ್ಚ ವಸ್ತುವಿನ ರೂಪದಲ್ಲಿದ್ದು ಶೋಧಕನಿಗೆ ಹೆಚ್ಚು ಉಪಯೋಗಕ್ಕೆ ಬರುತ್ತವೆ. ಆದರೆ ಇಲ್ಲಿ ಸ್ವಲ್ಪ ವೆಚ್ಚ ಹೆಚ್ಚು.

**ಪ್ರಾಥಮಿಕ ದತ್ತಾಂಶವನ್ನು ಸಂಗ್ರಹಿಸುವ ವಿಧಾನಗಳು**

ಪ್ರಾಥಮಿಕ ದತ್ತಾಂಶಗಳನ್ನು ನಾಲ್ಕು ವಿಧಾನಗಳಲ್ಲಿ ಸಂಗ್ರಹಿಸಲಾಗುತ್ತದೆ ಅವುಗಳೆಂದರೆ.

1. **ನೇರ ವೈಯಕ್ತಿಕ ಸಂದರ್ಶನ ವಿಧಾನ** : ಇಲ್ಲಿ ಶೋಧಕನು ತಾನೇ ಸ್ವತಃ ಜನರನ್ನು ಭೇಟಿ ಮಾಡಿ ಅಂಕಿ ಅಂಶಗಳನ್ನು ಸಂಗ್ರಹಿಸುತ್ತಾನೆ.

2. **ಪರೋಕ್ಷ ಮೌಖಿಕ ಶೋಧನಾ ವಿಧಾನ** : ಇಲ್ಲಿ ಮಾಹಿತಿ ಗೊತ್ತಿರುವ ಮೂರನೆ ವ್ಯಕ್ತಿಯ ಮೂಲಕ ಪರೋಕ್ಷವಾಗಿ ಸಂಗ್ರಹಿಸಲಾಗುತ್ತದೆ.

3. **ಪ್ರಶ್ನಾವಳಿಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸುವುದು** : ಇಲ್ಲಿ ಒಬ್ಬ ಪ್ರತಿನಿಧಿ ಅಥವಾ ಅಂಚೆಯ ಮೂಲಕ ಪ್ರಶ್ನಾವಳಿ ಕಳುಹಿಸಿ ಅದಕ್ಕೆ ಉತ್ತರವಾಗಿ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ.

4. **ಸ್ಥಳೀಯ ವರದಿಗಳ ಮೂಲಕ ಸಂಗ್ರಹಣೆ** : ಇಲ್ಲಿ ದಿನಪತ್ರಿಕೆ, ಟಿ.ವಿ., ರೇಡಿಯೋ, ಪ್ರತಿನಿಧಿ ಮುಂತಾದವುಗಳ ಮೂಲಕ ಮಾಹಿತಿ ಸಂಗ್ರಹಿಸಲಾಗುತ್ತದೆ.

**2. ಮಾಧ್ಯಮಿಕ ದತ್ತಾಂಶ (ಅಂಕಿ ಅಂಶ)**

**(Secondary Data )**

ಬೇರೆಯವರು ಈಗಾಗಲೇ ಸಂಗ್ರಹಿಸಿ ಪ್ರಕಟಿಸಲಾಗಿರುವ ಮೂಲದಿಂದ ಪಡೆದುಕೊಳ್ಳುವ ದತ್ತಾಂಶವನ್ನು ಮಾಧ್ಯಮಿಕ ದತ್ತಾಂಶ ಎಂದು ಕರೆಯುತ್ತಾರೆ. ಇಲ್ಲಿ ಮಾಹಿತಿಯು ಒಂದು ಬಾರಿ ಸಂಗ್ರಹಿಸಲಾಗಿರುತ್ತದೆ. ಅದನ್ನು ಮತ್ತೊಬ್ಬ ಶೋಧಕ ಅಥವಾ ಸಂಸ್ಥೆ ತನ್ನ ಉಪಯೋಗಕ್ಕಾಗಿ ಬಳಸಿಕೊಳ್ಳುತ್ತದೆ. ಮಾಧ್ಯಮಿಕ ದತ್ತಾಂಶ ಸಿದ್ದ ವಸ್ತುವಿನ ರೂಪದಲ್ಲಿರುತ್ತದೆ. ಇಲ್ಲಿ ನಿಖರತೆ ಕಡಿಮೆ ಇರುತ್ತದೆ. ಆದರೆ ಕಾಲ ಮತ್ತು ಹಣದ ಉಳಿತಾಯವಾಗುತ್ತದೆ. ಉದಾ : ಜನಗಣತಿಯ ಮೂಲಕ ಸಂಗ್ರಹಿಸಿದ ಜನಸಂಖ್ಯೆಯ ಅಂಕಿ ಅಂಶಗಳು ಸರ್ಕಾರಕ್ಕೆ ಪ್ರಾಥಮಿಕ ದತ್ತಾಂಶವಾದರೆ ಅದನ್ನು ಬೇರೆ ಉಪಯೋಗಕ್ಕಾಗಿ ಬಳಸಿಕೊಳ್ಳುವವರಿಗೆ ಮಾಧ್ಯಮಿಕ ದತ್ತಾಂಶವಾಗಿರುತ್ತದೆ.

**ಮಾಧ್ಯಮಿಕ ದತ್ತಾಶಗಳ ಮೂಲಗಳು ( Sources of Secondary Data )**

ಮಾಧ್ಯಮಿಕ ದತ್ತಾಂಶಗಳನ್ನು ಎರಡು ಮೂಲಗಳಿಂದ ಸಂಗ್ರಹಿಸಬಹುದು ಅವುಗಳೆಂದರೆ ಪ್ರಕಟಿತ ಮೂಲಗಳು ಮತ್ತು ಅಪ್ರಕಟಿತ ಮೂಲಗಳು.

1. **ಪ್ರಕಟಿತ ಮೂಲಗಳು :–** ಸರ್ಕಾರಿ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು, ಇಲಾಖೆಗಳು, ಖಾಸಗಿ ಸಂಸ್ಥೆಗಳು, ಮಾಹಿತಿಗಳನ್ನು ಸಂಗ್ರಹಿಸಿ ಅವುಗಳನ್ನು ದಿನಪತ್ರಿಕೆ, ವಾರಪತ್ರಿಕೆ, ಮಾಸ ಹಾಗೂ ವಾರ್ಷಿಕ ಪತ್ರಿಕೆಗಳಲ್ಲಿ ಪ್ರಕಟಿಸುತ್ತವೆ ಅವುಗಳನ್ನು ಪ್ರಕಟಿತ ದತ್ತಾಂಶ ಎನ್ನುತ್ತಾರೆ.

**ಉದಾ :–**

1. ವಿಶ್ವ ಬ್ಯಾಂಕ್, ವಿಶ್ವ ಸಂಸ್ಥೆ, **IMF, ILO** ಮುಂತಾದ ಅಂತರಾಷ್ಟ್ರೀಯ ಸಂಘಟನೆಗಳು ಪ್ರಕಟಿಸುವ ಮಾಹಿತಿಗಳು.
2. ಕೇಂದ್ರ ಸರ್ಕಾರಿ ಸಂಸ್ಥೆಗಳಾದ ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಘಟನೆ **NSSO,**

ಆರ್ಥಿಕ ಸಮೀಕ್ಷೆ, ಕೇಂದ್ರ ಅಂಕಿ ಅಂಶಗಳ ಸಂಸ್ಥೆ, **RBI** ಮುಂತಾದವುಗಳ ವರದಿಗಳು.

3. ಅರೆ ಸರ್ಕಾರಿ ಸಂಸ್ಥೆಗಳಾದ ಯೋಜನಾ ಆಯೋಗ, ಹಣಕಾಸು ಆಯೋಗ, ಅನೇಕ ಮಂಡಳಿಗಳು, ನಿಗಮಗಳು ಹಾಗೂ ಸಮಿತಿ ವರದಿಗಳು.
4. ರಾಜ್ಯ ಸರ್ಕಾರಿ ಸಂಸ್ಥೆಗಳು **KSRTC, KEB,**ಶಿಕ್ಷಣ ಸಂಸ್ಥೆಗಳು, ನಗರ ಸಭೆ, ಪುರಸಭೆಗಳ ವರದಿಗಳು.
5. ಖಾಸಾಗಿ ಪ್ರಕಟಣೆಗಳಾದ ದಿನಪತ್ರಿಕೆಗಳು, ನಿಯತಕಾಲಿಕೆಗಳು, ಮಾಸ ಪತ್ರಿಕೆಗಳು, ದೂರದರ್ಶನ, ರೇಡಿಯೋ ವರದಿಗಳು, ಪ್ರಕಟಿತ ಮೂಲಗಳು ಎಲ್ಲ ವರ್ಗದ ಜನರಿಗೂ ಮಾಹಿತಿಯನ್ನು ಒದಗಿಸುತ್ತವೆ.

2. **ಅಪ್ರಕಟಿತ ಮೂಲಗಳು** : ಕೆಲವು ವ್ಯಕ್ತಿಗಳು ಹಾಗೂ ಸಂಸ್ಥೆಗಳು ಹಲವಾರು ಮಾಹಿತಿಗಳನ್ನು ಸಂಗ್ರಹಿಸಿರುತ್ತವೆ. ಆದರೆ ಅವುಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಪ್ರಕಟಿಸಿರುವುದಿಲ್ಲ. ಅವುಗಳನ್ನು ಅಪ್ರಕಟಿತ ದತ್ತಾಂಶ ಎನ್ನುತ್ತೇವೆ. ಇವುಗಳನ್ನು ಸಂಗ್ರಹಿಸಿದ ಸಂಸ್ಥೆಗಳು, ವ್ಯಕ್ತಿಗಳು ತಮ್ಮ ಬಳಕೆಗೆ ಮಾತ್ರ ಬಳಸಿಕೊಳ್ಳುತ್ತಾರೆ. ಉದಾ : ಸಂಶೋಧನಾ ಸಂಸ್ತೆಗಳು, ವಾಣಿಜ್ಯ ಸಂಸ್ಥೆಗಳ ಮಾಹಿತಿಗಳು, ಕೆಲವು ಡೈರಿಗಳು, ಹಳೆಯ ನೆನಪುಗಳು ಮುಂತಾದವು, ಆದರೆ ಕೆಲವು ವೇಳೆ ಸಂಗ್ರಹಣಾಗಾರನ ಅನುಮತಿಯನ್ನು ಪಡೆದು ಅವುಗಳನ್ನು ಬಳಸಿಕೊಳ್ಳುಬಹುದು.” [17]

ಈ ಮೇಲಿನ ಮಾಹಿತಿಯು ಅನುವಾದಕರಿಂದ ಕನ್ನಡಕ್ಕೆ ಅನುವಾದಿಸಿರುವುದು ಸಮರ್ಪಪಕವಾಗಿ ಮತ್ತು ಪರೀಕ್ಷಾ ದೃಷ್ಟಿಯಿಂದ ನೆನಪಿಡಲು ವಿದ್ಯಾರ್ಥಿಗಳಿಗೆ ಸಾಕಾಗುತ್ತದೆ. ಆದರೆ ಅನುವಾದಕರು ಇನ್ನಷ್ಟು ಮಾಹಿತಿಯನ್ನು ಸೇರ್ಪಡೆ ಮಾಡಿದ್ದರೆ ಉತ್ತಮವಾಗುತ್ತಿತ್ತು. ಉಪನ್ಯಾಸಕರಿಗೂ ಬೋಧನೆಯಲ್ಲಿ ಯಾವುದೇ ತೊಂದರೆಗಳಾಗುವುದಿಲ್ಲ ಎಂಬುದು ಸರಿ. ಬಳಸಿರುವ ಭಾಷೆ ಸರಳವಾಗಿದೆ ಕ್ಲಿಷ್ಟಕರವಾದ ಪದಗಳಿರುವುದಿಲ್ಲ ಉತ್ತಮ ಅನುವಾದವೆನಿಸಿದೆ.

**“ 1.2. ದತ್ತಾಂಶಗಳ (ಅಂಕಿಅಂಶ) ವಿಧಗಳು ಮತ್ತು ನಿರೂಪಣೆ**

**( Types and discription of data)**

ದತ್ತಾಂಶಗಳ (ಅಂಕಿಅಂಶಗಳ) ಸಂಗ್ರಹಣೆ ಮತ್ತು ನಿರೂಪಣೆಯು ಸಂಖ್ಯಾಶಾಸ್ತ್ರೀಯ ತನಿಖೆಯಲ್ಲಿ ಪ್ರಮುಖ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ಅವುಗಳು ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆ ಮತ್ತು ವಿವರಣೆಗೆ ಅವಶ್ಯವಿರುವ ಕಚ್ಚಾಮಾಲುಗಳನ್ನು ಒದಗಿಸುತ್ತವೆ. ಯಾವುದೇ ತನಿಖೆಯ ಸಮಸ್ತ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಯ ಸಂರಚನೆಯು ಕ್ರಮಬದ್ಧವಾದ ದತ್ತಾಂಶ ಸಂಗ್ರಹಣೆಯನ್ನು ಅವಲಂಬಿಸಿರುತ್ತದೆ.

**1.2.1. ಆರ್ಥಿಕ ದತ್ತಾಂಶಗಳ (ಅಂಕಿ ಅಂಶ) ಪ್ರಕಾರಗಳು**

**(Types of economic data)**

ದತ್ತಾಂಶಗಳ ಸಂಗ್ರಹಣೆಯ ಮೂಲದ ಆಧಾರದಲ್ಲಿ ಅವುಗಳನ್ನು ಎರಡು ಪ್ರಕಾರಗಳಲ್ಲಿ ವರ್ಗೀಕರಿಸಬಹುದು. ಅವುಗಳೆಂದರೆ i ) ಪ್ರಾಥಮಿಕ ದತ್ತಾಂಶ, ಮತ್ತು ii ) ಮಾಧ್ಯಮಿಕ ದತ್ತಾಂಶ. ಇವುಗಳ ವಿವರ ಈ ಕೆಳಕಂಡಂತಿದೆ.

**1. ಪ್ರಾಥಮಿಕ ದತ್ತಾಂಶ (ಅಂಕಿ ಅಂಶ)**

**(Primary data )**

ಪ್ರಾಥಮಿಕ ದತ್ತಾಂಶ ಅಥವಾ ಅಂಕಿ ಅಂಶಗಳು ಮೂಲ ಸ್ವರೂಪ ಹೊಂದಿ ಸ್ವತಂತ್ರವಾಗಿರುತ್ತವೆ. ಇವುಗಳು ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಪ್ರಾಥಮಿಕ ದತ್ತಾಂಶದ ಅರ್ಥ ವಿವರಣೆ.

ಯಾವುದೇ ಸಂಖ್ಯಾಶಾಸ್ತ್ರೀಯ ಕ್ರಮಬದ್ಧ ಪರೀಕ್ಷೆಗಾಗಿ ತನಿಖೆದಾರ ಅಥವಾ ಪ್ರತಿನಿಧಿ ಮೂಲತಃ ಪ್ರಥಮಬಾರಿಗೆ ಸಂಗ್ರಹಿಸಿದ ಮತ್ತು ಅವುಗಳನ್ನು ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಯಲ್ಲಿ ಬಳಸಿಕೊಂಡ ಅಂಕಿಅಂಶಗಳನ್ನು ಪ್ರಾಥಮಿಕ ದತ್ತಾಂಶ ಎನ್ನಲಾಗುತ್ತದೆ. ಅಂದರೆ, ಸಂಖ್ಯಾಶಾಸ್ತ್ರೀಯ ಪರೀಕ್ಷೆಗಾಗಿ ವಿಶಿಷ್ಟ ವಿಧಾನದಲ್ಲಿ ಪ್ರಪ್ರಥಮ ಬಾರಿಗೆ ಸಂಗ್ರಹಿಸಿದ ದತ್ತಾಂಶಗಳು ಪ್ರಾಥಮಿಕ ದತ್ತಾಂಶಗಳಾಗುತ್ತವೆ. ಆದ್ದರಿಂದ, ಪ್ರಾಥಮಿಕ ದತ್ತಾಂಶಗಳು ತನಿಖೆಯ ಪ್ರಕ್ರಿಯೆಯಲ್ಲಿ ಮೂಲರೂಪದಲ್ಲಿ ಸಂಗ್ರಹಿಸಿದ ಅಂಕಿ ಅಂಶಗಳಾಗಿವೆ.

ಪ್ರಾಥಮಿಕ ದತ್ತಾಂಶಗಳನ್ನು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ತನಿಖೆಯ ಕ್ಷೇತ್ರದಿಂದ ನೇರವಾಗಿ ಸಂಗ್ರಹಿಸಲಾಗುತ್ತದೆ. ಅವುಗಳು ಮೂಲ ಸ್ವರೂಪ ಹೊಂದಿರುತ್ತವೆ. ಪ್ರಾಥಮಿಕ ದತ್ತಾಂಶಗಳ ಒಂದು ವಿಶೇಷ ಪ್ರಮುಖ ಲಕ್ಷಣ ಎಂದರೆ. ಅವುಗಳನ್ನು ಸಂಶೋದನಾ ಅಧ್ಯಯನದ ಒಂದು ವಿಶಿಷ್ಟ ಅಂಕಿ ಅಂಶ ಅಗತ್ಯಗಳಿಗೆ ಅನುಗುಣವಾಗಿ ಮೊಟ್ಟ ಮೊದಲ ಬಾರಿಗೆ ಸಂಗ್ರಹಿಸಲಾಗುತ್ತದೆ. ಇವುಗಳು ಮುಖ್ಯವಾಗಿ ಒಂದು ಸರಿಯಾದ ಸಮೀಕ್ಷಾ ವಿಧಾನದಿಂದ ಸಂಗ್ರಹಿಸಲಾದ ಕ್ಷೇತ್ರ ದತ್ತಾಂಶಗಳಾಗಿರುತ್ತವೆ. ಉದಾಹರಣೆಗೆ ಪ್ರತಿ ಹತ್ತು ವರ್ಷಗಳಿಗೊಮ್ಮೆ ಸಂಗ್ರಹಿಸಲಾಗುವ ಜನಗಣತಿ ಅಂಕಿ ಅಂಶಗಳು ಪ್ರಾಥಮಿಕ ದತ್ತಾಂಶಗಳಾಗಿವೆ. ಅದೇ ರೀತಿ ವೈದ್ಯರೊಬ್ಬರು ತಮ್ಮ ವಿಶ್ಲೇಷಣೆಗಾಗಿ ರೋಗಿಗಳ ತೂಕದ ಬಗ್ಗೆ ಸಂಗ್ರಹಿಸುವ ಅಂಕಿ ಅಂಶಗಳು ವೈದ್ಯರಿಗೆ ಪ್ರಾಥಮಿಕ ದತ್ತಾಂಶಗಳಾಗಿರುತ್ತವೆ.

ಪ್ರಾಥಮಿಕ ದತ್ತಾಂಶಗಳನ್ನು ಹೆಚ್ಚು ನಂಬಿಕೆ ಮತ್ತು ಭರವಸೆಯಿಂದ ಬಳಸಿಕೊಳ್ಳಬಹುದು. ಏಕೆಂದರೆ, ಇವುಗಳ ವ್ಯಾಖ್ಯಾನ, ವ್ಯಾಪ್ತಿ ಮತ್ತು ಸಂಗ್ರಹಣೆ ವಿಧಾನದ ಬಗ್ಗೆ ತನಿಖೆದಾರನೇ ನಿರ್ಧರಿಸುತ್ತಾನೆ. ಆದರೆ ಈ ಅಂಕಿ ಅಂಶ ಮಾಹಿತಿಯನ್ನು ಸಂಗ್ರಹಿಸಲು ಅಪಾರ ಹಣ, ಜನಶಕ್ತಿ ಮತ್ತು ಕಾಲಾವಕಾಶ ಬೇಕಾಗುತ್ತದೆ.

**ಪ್ರಾಥಮಿಕ ದತ್ತಾಂಶಗಳನ್ನು ಸಂಗ್ರಹಿಸುವ ವಿಧಾನ**

( Methods of collecting primary data )

ಪ್ರಾಥಮಿಕ ದತ್ತಾಂಶಗಳ ಸಂಗ್ರಹಣೆಗೆ ಸಾಮಾನ್ಯವಾಗಿ ಬಳಸಲಾಗುವ ವಿಧಾನಗಳು ಈ ಕೆಳಗಿನಂತಿರುತ್ತವೆ.

i) ನೇರ ವೈಕ್ತಿಕ ತನಿಖೆ.

ii) ಪರೋಕ್ಷ ಮೌಖಿಕ ತನಿಖೆ.

iii) ಪತ್ರ ವ್ಯವಹಾರದ ಮೂಲಕ ಮಾಹಿತಿ

iv) ಅಂಚೆ ಪ್ರಶ್ನಾವಳಿ ವಿಧಾನ

v) ಎಣಿಕೆದಾರರ ಮೂಲಕ ಕಳಿಸಲಾಗುವ ಅನುಸೂಚಿ ಪಟ್ಟಿಗಳು.

vi) ದೂರವಾಣಿ, ದೂರದರ್ಶನ, ಅಂತರ್‌ಜಾಲ ಮತ್ತು ಟೆಲಿ ಸಂವಾದ, ಇತ್ಯಾದಿ.

**2. ಮಾಧ್ಯಮಿಕ ದತ್ತಾಂಶ (ಅಂಕಿ ಅಂಶ) (Secondary data )**

ತನಿಖೆದಾರನು ತನ್ನ ಬಳಕೆಗಾಗಿ ಈಗಾಗಲೇ ಯಾವುದೋ ಪ್ರತಿನಿಧಿ ಸಂಗ್ರಹಿಸಿದ ಅಂಕಿ ಅಂಶಗಳನ್ನು ಸಂಕಲನ ಮಾಡಿಕೊಂಡರೆ ಅವುಗಳನ್ನು ಮಾಧ್ಯಮಿಕ ದತ್ತಾಂಶ ಎನ್ನಲಾಗುತ್ತದೆ. ಅಂದರೆ, ಯಾವುದೇ ವ್ಯಕ್ತಿ ಅಥವಾ ಪ್ರತಿನಿಧಿ ಈಗಾಗಲೇ ಸಂಗ್ರಹಿಸಿ ಸಂಸ್ಕರಣೆ ಮಾಡಿಟ್ಟಿರುವ ಅಂಕಿ ಅಂಶಗಳನ್ನು ಇತರೆ ಯಾವುದೇ ಪ್ರತಿನಿಧಿ ಅಥವಾ ವ್ಯಕ್ತಿ ತನ್ನ ತನಿಖೆ ಕಾರ್ಯಕ್ಕಾಗಿ ಬಳಸಿಕೊಂಡರೆ ಅವುಗಳು ಮಾಧ್ಯಮಿಕ ಅಂಕಿ ಅಂಶ ಅಥವಾ ದತ್ತಾಂಶಗಳಾಗುತ್ತವೆ. ಆದ್ದರಿಂದ ಮಾಧ್ಯಮಿಕ ದತ್ತಾಂಶಗಳು ಎಂದರೆ ಈಗಾಗಲೇ ಯಾವುದೋ ರೂಪದಲ್ಲಿರುವ (ಪ್ರಕಟಿತ ಅಥವಾ ಅಪ್ರಕಟಿತ) ಅಂಕಿ ಅಂಶಗಳಾಗಿವೆ. ಹೆಚ್ಚಿನ ಸಂಧರ್ಭದಲ್ಲಿ ಈ ಅಂಕಿ ಅಂಶಗಳು ಪ್ರಕಟಿತ ರೂಪದಲ್ಲಿ ಲಭ್ಯವಿರುತ್ತವೆ. ಆದರೆ ಅವುಗಳು ನಮಗೆ ಬೇಕೆಂದುಕೊಳ್ಳುವ ರೂಪದಲ್ಲಿರುವುದಿಲ್ಲ.

ಮೇಲಿನ ಚರ್ಚೆಯ ಆಧಾರದಲ್ಲಿ ಹೇಳುವುದಾದರೆ, ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಈಗಾಗಲೇ ಅಂಕಿ ಅಂಶಗಳನ್ನು ಸಂಗ್ರಹಿಸಿ ಅವುಗಳನ್ನು ಸಂಖ್ಯಾಶಾಸ್ತ್ರೀಯ ತನಿಖೆಗಾಗಿ ಪೂರೈಕೆ ಮಾಡಿದರೆ ಅವುಗಳು ಮಾಧ್ಯಮಿಕ ದತ್ತಾಂಶಗಳಾಗುತ್ತವೆ. ಉದಾಹರಣೆಗೆ ಜನಗಣತಿ ವರದಿಗಳಿಂದ ಜನಗಣತಿ ಅಂಕಿ ಅಂಶಗಳನ್ನು ಸಂಶೋಧಕನೊಬ್ಬನು ಬಳಸಿಕೊಂಡರೆ ಅದು ಆತನಿಗೆ ಮಾಧ್ಯಮಿಕ ದತ್ತಾಂಶವಾಗುತ್ತದೆ. ಅದೇ ರೀತಿ ಸರ್ಕಾರದ ಖರ್ಚುವೆಚ್ಚದ ಬಗ್ಗೆ ಮುಂಗಡ ಪತ್ರದಲ್ಲಿ ಲಭ್ಯವಿರುವ ಮಾಹಿತಿಗಳನ್ನು ಬೇರೊಬ್ಬರು ತಮ್ಮ ವಿಶ್ಲೇಷಣೆಯಲ್ಲಿ ಬಳಸಿಕೊಂಡರೆ ಅವರಿಗೆ ಆ ಮಾಹಿತಿ ಮಾಧ್ಯಮಿಕ ದತ್ತಾಂಶವಾಗುತ್ತದೆ.

ಮಾಧ್ಯಮಿಕ ದತ್ತಾಂಶಗಳನ್ನು ಸಂಗ್ರಹಿಸುವುದು ದುಬಾರಿ ಎನಿಸುವುದಿಲ್ಲ. ಏಕೆಂದರೆ, ಅವುಗಳ ಸಂಗ್ರಹಣೆಗೆ ಅಲ್ಪ ಮೊತ್ತದ ಹಣ, ಕಾಲಾವಧಿ ಮತ್ತು ಶಕ್ತಿ ಸಾಮರ್ಥ್ಯ ವ್ಯಯವಾಗುತ್ತದೆ. ಆದರೆ, ಈ ದತ್ತಾಂಶಗಳು ಕೆಲವೊಮ್ಮೆ ಹಲವಾರು ಕಾರಣಗಳಿಂದಾಗಿ ನಂಬಿಕೆಗೆ ಅರ್ಹವಿರುವುದಿಲ್ಲ. ಅಂತಹ ಕಾರಣಗಳು ಸಾಮಾನ್ಯವಾಗಿ ಅಂಕಿ ಅಂಶಗಳ ಸಂಸ್ಕರಣೆ,

ವಿಶ್ಲೇಷಣೆ ಮತ್ತು ಅಂಕಿಗಳನ್ನು ಪೂರ್ಣಾಂಕ ಮಾಡುವಲ್ಲಿ ಎಸಗಲಾಗುವ ತಪ್ಪುಗಳಿಂದ ಉದ್ಭವವಾಗುತ್ತವೆ." [18]

ಈ ಮೇಲಿನ ದತ್ತಾಂಶಗಳ ಅನುವಾದವು ವಿದ್ಯಾರ್ಥಿಗಳ ಮತ್ತು ಉಪನ್ಯಾಸಕರ ಗೊಂದಲಗಳಿಗೆ ಅನುವು ಮಾಡಿಕೊಡುವಂತೆ ಮಾಹಿತಿಯನ್ನು ಸೇರ್ಪಡೆ ಮಾಡಲಾಗಿದೆ. ಆರ್ಥಿಕ ದತ್ತಾಂಶಗಳನ್ನು ಎಷ್ಟು ವಿಧಗಳಲ್ಲಿ ವರ್ಗೀಕರಿಸಿ ಅಧ್ಯಯನ ಮಾಡಬೇಕೆನ್ನುವಾಗ ಇವರು ಕೇವಲ ಎರಡು ವಿಧಾನಗಳನ್ನು ಮಾತ್ರ ಹೇಳಿರುತ್ತಾರೆ. ಉಳಿದ ವಿಧಾನಗಳನ್ನು ಇದರೊಂದಿಗೆ ಸೇರಿಸದೇ ಪ್ರತ್ಯೇಕವಾಗಿ ಪ್ರಕಟಿಸಲಾಗಿದೆ.

"ಮಾನವ ಸಂಪನ್ಮೂಲ ಮತ್ತು ಆರ್ಥಿಕ ಬೆಳವಣಿಗೆಯ ನಡುವೆ ಗಾಢವಾದ ಸಂಬಂಧವಿದೆ. ಮಹಾತ್ಮಾ ಗಾಂಧೀಜಿಯವರು " ಜನರು ದೇಶವೊಂದರ ನಿಜವಾದ ಆಸ್ತಿ ಅಥವಾ ಸಂಪತ್ತು ಚಿನ್ನ ಅಥವಾ ಬೆಳ್ಳಿಯಲ್ಲ, ಯಾವ ದೇಶ ಗರಿಷ್ಠ ಸಂಖ್ಯೆಯ ಸುಖಿ ಜನರನ್ನು ಸಲಹುತ್ತಿರುವುದೋ ಅದೇ ಸಂಪದ್ಭರಿತ ದೇಶ". ಎಂದು ಹೇಳಿದ್ದಾರೆ.

**ಮಾನವ ಸಂಪನ್ಮೂಲದ ಅರ್ಥವಿವರಣೆ (Meaning of HR)**

ಮಾನವ ಸಂಪನ್ಮೂಲ ಎಂದರೆ ದಕ್ಷತೆ, ಶೈಕ್ಷಣಿಕ ಗುಣಮಟ್ಟ, ಉತ್ಪಾದಕತೆ, ಸಂಘಟನಾ ಚಾತುರ್ಯ, ದೂರದೃಷ್ಟಿ ಮತ್ತು ವಿವೇಕವನ್ನು ಒಳಗೊಂಡ ದೇಶವೊಂದರ ಜನಸಂಖ್ಯೆಯ ಗಾತ್ರವಾಗಿದೆ. ಅಂದರೆ, ಮಾನವ ಸಂಪನ್ಮೂಲ ಎಂಬ ಪರಿಕಲ್ಪನೆಯು ದೇಶವೊಂದರ ಮಾನವ ಬಂಡವಾಳವನ್ನು ಪ್ರತಿನಿಧಿಸುತ್ತದೆ. ಮಾನವ ಬಂಡವಾಳ ಎಂದರೆ ದೇಶದ ಜನಸಂಖ್ಯೆಯ ಸಾಮರ್ಥ್ಯ, ನೈಪುಣ್ಯತೆ ಮತ್ತು ತಾಂತ್ರಿಕ ಜ್ಞಾನದ ತಿಳುವಳಿಕೆಯಾಗಿದೆ.

**ಮಾನವ ಸಂಪನ್ಮೂಲದ ಪ್ರಾಮುಖ್ಯತೆ (Importance of human resources)**

ಆರ್ಥಿಕ ಬೆಳವಣಿಗೆ ಮತ್ತು ಜನಸಂಖ್ಯಾ ಬೆಳವಣಿಗೆಗಳ ನಡುವೆ ನಿಕಟ ಸಂಬಂಧವಿದೆ. ಮನುಷ್ಯ ಪ್ರಯತ್ನವಿಲ್ಲದೆ ಅಭಿವೃದ್ಧಿ ಸಾಧ್ಯವಿಲ್ಲ. ಏಕೆಂದರೆ ಆರ್ಥಿಕಾಭಿವೃದ್ಧಿ ಎಂಬುದು ಮನುಷ್ಯ ಪ್ರಯತ್ನದಿಂದ ಆಗಬೇಕಾದ ಒಂದು ನಿರಂತರ ಪ್ರಕ್ರಿಯೆ. ದಕ್ಷ ಮಾನವ ಸಂಪನ್ಮೂಲ ಹೊಂದಿರುವ ದೇಶ ಆರ್ಥಿಕವಾಗಿ ಮುಂದುವರಿಯುವುದು ಸಾಧ್ಯವಿದೆ. ಜನರು ಆರ್ಥಿಕ ಚಟುವಟಿಕೆಗಳ ಗುರಿ ಮತ್ತು ಸಾಧನವಾಗಿದ್ದಾರೆ............

**2.2.1 ವಯೋಮಾನ ಸಂಯೋಜನೆ ( Age Composition)**

ವಯೋಮಾನ ಸಂಯೋಜನೆಯ ಅಧ್ಯಯನವು ಒಟ್ಟು ಜನಸಂಖ್ಯೆಯಲ್ಲಿನ ಶ್ರಮಶಕ್ತಿಯ ಪ್ರಮಾಣವನ್ನು ತಿಳಿಯುವಲ್ಲಿ ತುಂಬಾ ನೆರವಾಗುತ್ತದೆ. ಯಾವುದೇ ಕಾಲದಲ್ಲಿನ ಜನಸಂಖ್ಯೆಯ ಸಂಯೋಜನೆಯು ಸಂತಾನಶಕ್ತಿ, ಮರಣ ಪ್ರಮಾಣ ಮತ್ತು ವಲಸೆಯ ಹಿಂದಿನ ಪ್ರವೃತ್ತಿಯನ್ನು ಅವಲಂಭಿಸಿರುತ್ತದೆ. ಅಧಿಕ ಜನನ ಮತ್ತು ಮರಣ ದರಗಳು ಸಾಕಷ್ಟು ದೀರ್ಘಕಾಲ ಮುಂದುವರಿದಲ್ಲಿ ವಯಸ್ಸಾದ ಜನರ ಸಂಖ್ಯೆಯು ಅಧಿಕವಿರುವ ಸಂಭವವಿರುತ್ತದೆ.

ಭಾರತದಲ್ಲಿ ಕಾರ್ಯನಿರತ ಜನರ ವಯಸ್ಸನ್ನು 15 ರಿಂದ 60 ವರ್ಷಗಳು ಎಂದು

ವಿಶ್ಲೇಷಣೆ ಮತ್ತು ಅಂಕಿಗಳನ್ನು ಪೂರ್ಣಾಂಕ ಮಾಡುವಲ್ಲಿ ಎಸಗಲಾಗುವ ತಪ್ಪುಗಳಿಂದ ಉದ್ಭವವಾಗುತ್ತವೆ." [18]

ಈ ಮೇಲಿನ ದತ್ತಾಂಶಗಳ ಅನುವಾದವು ವಿದ್ಯಾರ್ಥಿಗಳ ಮತ್ತು ಉಪನ್ಯಾಸಕರ ಗೊಂದಲಗಳಿಗೆ ಅನುವು ಮಾಡಿಕೊಡುವಂತೆ ಮಾಹಿತಿಯನ್ನು ಸೇರ್ಪಡೆ ಮಾಡಲಾಗಿದೆ. ಆರ್ಥಿಕ ದತ್ತಾಂಶಗಳನ್ನು ಎಷ್ಟು ವಿಧಗಳಲ್ಲಿ ವರ್ಗೀಕರಿಸಿ ಅಧ್ಯಯನ ಮಾಡಬೇಕೆನ್ನುವಾಗ ಇವರು ಕೇವಲ ಎರಡು ವಿಧಾನಗಳನ್ನು ಮಾತ್ರ ಹೇಳಿರುತ್ತಾರೆ. ಉಳಿದ ವಿಧಾನಗಳನ್ನು ಇದರೊಂದಿಗೆ ಸೇರಿಸದೇ ಪ್ರತ್ಯೇಕವಾಗಿ ಪ್ರಕಟಿಸಲಾಗಿದೆ.

"ಮಾನವ ಸಂಪನ್ಮೂಲ ಮತ್ತು ಆರ್ಥಿಕ ಬೆಳವಣಿಗೆಯ ನಡುವೆ ಗಾಢವಾದ ಸಂಬಂಧವಿದೆ. ಮಹಾತ್ಮಾ ಗಾಂಧೀಜಿಯವರು " ಜನರು ದೇಶವೊಂದರ ನಿಜವಾದ ಆಸ್ತಿ ಅಥವಾ ಸಂಪತ್ತು ಚಿನ್ನ ಅಥವಾ ಬೆಳ್ಳಿಯಲ್ಲ, ಯಾವ ದೇಶ ಗರಿಷ್ಠ ಸಂಖ್ಯೆಯ ಸುಖಿ ಜನರನ್ನು ಸಲಹುತ್ತಿರುವುದೋ ಅದೇ ಸಂಪದ್ಭರಿತ ದೇಶ". ಎಂದು ಹೇಳಿದ್ದಾರೆ.

**ಮಾನವ ಸಂಪನ್ಮೂಲದ ಅರ್ಥವಿವರಣೆ (Meaning of HR)**

ಮಾನವ ಸಂಪನ್ಮೂಲ ಎಂದರೆ ದಕ್ಷತೆ, ಶೈಕ್ಷಣಿಕ ಗುಣಮಟ್ಟ, ಉತ್ಪಾದಕತೆ, ಸಂಘಟನಾ ಚಾತುರ್ಯ, ದೂರದೃಷ್ಟಿ ಮತ್ತು ವಿವೇಕವನ್ನು ಒಳಗೊಂಡ ದೇಶವೊಂದರ ಜನಸಂಖ್ಯೆಯ ಗಾತ್ರವಾಗಿದೆ. ಅಂದರೆ, ಮಾನವ ಸಂಪನ್ಮೂಲ ಎಂಬ ಪರಿಕಲ್ಪನೆಯು ದೇಶವೊಂದರ ಮಾನವ ಬಂಡವಾಳವನ್ನು ಪ್ರತಿನಿಧಿಸುತ್ತದೆ. ಮಾನವ ಬಂಡವಾಳ ಎಂದರೆ ದೇಶದ ಜನಸಂಖ್ಯೆಯ ಸಾಮರ್ಥ್ಯ, ನೈಪುಣ್ಯತೆ ಮತ್ತು ತಾಂತ್ರಿಕ ಜ್ಞಾನದ ತಿಳುವಳಿಕೆಯಾಗಿದೆ.

**ಮಾನವ ಸಂಪನ್ಮೂಲದ ಪ್ರಾಮುಖ್ಯತೆ (Importance of human resources)**

ಆರ್ಥಿಕ ಬೆಳವಣಿಗೆ ಮತ್ತು ಜನಸಂಖ್ಯಾ ಬೆಳವಣಿಗೆಗಳ ನಡುವೆ ನಿಕಟ ಸಂಬಂಧವಿದೆ. ಮನುಷ್ಯ ಪ್ರಯತ್ನವಿಲ್ಲದೆ ಅಭಿವೃದ್ಧಿ ಸಾಧ್ಯವಿಲ್ಲ. ಏಕೆಂದರೆ ಆರ್ಥಿಕಾಭಿವೃದ್ಧಿ ಎಂಬುದು ಮನುಷ್ಯ ಪ್ರಯತ್ನದಿಂದ ಆಗಬೇಕಾದ ಒಂದು ನಿರಂತರ ಪ್ರಕ್ರಿಯೆ. ದಕ್ಷ ಮಾನವ ಸಂಪನ್ಮೂಲ ಹೊಂದಿರುವ ದೇಶ ಆರ್ಥಿಕವಾಗಿ ಮುಂದುವರಿಯುವುದು ಸಾಧ್ಯವಿದೆ. ಜನರು ಆರ್ಥಿಕ ಚಟುವಟಿಕೆಗಳ ಗುರಿ ಮತ್ತು ಸಾಧನವಾಗಿದ್ದಾರೆ............

**2.2.1 ವಯೋಮಾನ ಸಂಯೋಜನೆ ( Age Composition)**

ವಯೋಮಾನ ಸಂಯೋಜನೆಯ ಅಧ್ಯಯನವು ಒಟ್ಟು ಜನಸಂಖ್ಯೆಯಲ್ಲಿನ ಶ್ರಮಶಕ್ತಿಯ ಪ್ರಮಾಣವನ್ನು ತಿಳಿಯುವಲ್ಲಿ ತುಂಬಾ ನೆರವಾಗುತ್ತದೆ. ಯಾವುದೇ ಕಾಲದಲ್ಲಿನ ಜನಸಂಖ್ಯೆಯ ಸಂಯೋಜನೆಯು ಸಂತಾನಶಕ್ತಿ, ಮರಣ ಪ್ರಮಾಣ ಮತ್ತು ವಲಸೆಯ ಹಿಂದಿನ ಪ್ರವೃತ್ತಿಯನ್ನು ಅವಲಂಭಿಸಿರುತ್ತದೆ. ಅಧಿಕ ಜನನ ಮತ್ತು ಮರಣ ದರಗಳು ಸಾಕಷ್ಟು ದೀರ್ಘಕಾಲ ಮುಂದುವರಿದಲ್ಲಿ ವಯಸ್ಸಾದ ಜನರ ಸಂಖ್ಯೆಯು ಅಧಿಕವಿರುವ ಸಂಭವವಿರುತ್ತದೆ.

ಭಾರತದಲ್ಲಿ ಕಾರ್ಯನಿರತ ಜನರ ವಯಸ್ಸನ್ನು 15 ರಿಂದ 60 ವರ್ಷಗಳು ಎಂದು

ಪರಿಗಣಿಸಲಾಗುತ್ತಿದೆ. ಈ ಆಧಾರದಲ್ಲಿ ಭಾರತದ ಜನಸಂಖ್ಯೆಯ ಶೇಕಡಾವಾರು ಹಂಚಿಕೆಯನ್ನು ನಿರ್ಧರಿಸಲಾಗುತ್ತದೆ............. 0ದಿಂದ 14 ವಯಸ್ಸಿನ ಗುಂಪಿಗೆ ಸೇರಿದ ಮಕ್ಕಳ ಸಂಖ್ಯೆ........ 15 ರಿಂದ 60 ವರ್ಷಗಳ ವಯೋಮಾನದವರನ್ನು ದುಡಿಯುವ ವರ್ಗವೆಂದು, 60 ಕ್ಕಿಂತಲೂ ಹೆಚ್ಚಿನ ವಯಸ್ಸಿನವರನ್ನು ವೃದ್ಧರೆಂದು ಪರಿಗಣಿಸಲಾಗಿದೆ.

**2.2.2 ಲಿಂಗ ಸಂಯೋಜನೆ ( Sex Composition)**

ಲಿಂಗಾನುಪಾತವು ಯಾವುದೇ ಸಮಾಜದ ಸಾಮಾಜಿಕ ಸ್ವಾಸ್ಥ್ಯದ (ಆರೋಗ್ಯ) ಒಂದು ಪ್ರಭಾವಿ ಸೂಚಕವಾಗಿದೆ. ಅದು ಲಿಂಗ ಸಂಬಂಧದ ಸ್ಥಿತಿಗತಿ ಮೇಲೆ ಬೆಳಕು ಚಲ್ಲುತ್ತದೆ.

ಲಿಂಗಾನುಪಾತ ಎಂದರೆ ಪ್ರತಿ ಸಾವಿರ ಪುರುಷ ಸಂಖ್ಯೆಗೆ ಎಷ್ಟು ಮಹಿಳೆಯರಿದ್ದಾರೆ ಎಂಬುದಾಗಿದೆ. ಆದ್ದರಿಂದ ಲಿಂಗಾನುಪಾತ ಸಂಯೋಜನೆಯು ಒಟ್ಟು ಜನಸಂಖ್ಯೆಯಲ್ಲಿ ಪುರುಷರೊಂದಿಗಿನ ಮಹಿಳೆಯರ ಅನುಪಾತವನ್ನು ತಿಳಿಯಪಡಿಸುತ್ತದೆ. ಅದು ಪುರುಷರ ನಡುವೆ ಮಹಿಳೆಯರು ಬದುಕಿ ಉಳಿಯುವ ಸಾಪೇಕ್ಷ ಸಾಧ್ಯತೆಗಳನ್ನು ತೋರಿಸುತ್ತದೆ" [19].

ಈ ಮೇಲಿನ ಅನುವಾದವನ್ನು ಗಮನಿಸಲಾಗಿ ಇಂಗ್ಲಿಷ ಪದಗಳಿಗೆ ಸಮಾನವಾಗಿ ಕನ್ನಡದಲ್ಲಿ

ಬಳಸಿದ ಪದಗಳು ಸೂಕ್ತವಾದ ಕಾರಣ ಎಲ್ಲರಿಗೂ ಸುಲಭವಾಗಿ ಅರ್ಥವಾಗುತ್ತದೆ. ಇವರು ಲಿಂಗ ಸಂಯೋಜನೆಗೆ ಅರ್ಥ ನೀಡದೇ ಲಿಂಗಾನುಪಾತಕ್ಕೆ ಅರ್ಥ ವಿವರಣೆ ನೀಡಿರುತ್ತಾರೆ. ಆದರೆ ಇಂಗ್ಲಿಷನಲ್ಲಿ Sex ratio ಎಂದು ಇರದೆ Sex composition ಎಂದು ಪಠ್ಯದಲ್ಲಿದೆ

**" ಜನಸಂಖ್ಯೆಯ ಸಂಯೋಜನೆ**

ಜನಸಂಖ್ಯೆಯ ಸಂಯೋಜನೆ ಅಥವಾ ಜನಸಂಖ್ಯೆಯ ರಚನೆಯು ಜನಸಂಖ್ಯೆಯ ಲಕ್ಷಣ, ಲಿಂಗ, ರಾಷ್ಟ್ರೀಯತೆ, ಭಾಷೆ, ಅಂತಸ್ತು, ಉದ್ಯೋಗ, ಆದಾಯ ಮುಂತಾದವುಗಳನ್ನು ಒಳಗೊಂಡಿದೆ. ಒಂದು ರಾಷ್ಟ್ರದ ಜನಸಂಖ್ಯೆಯ ಲಿಂಗ ಮತ್ತು ವಯಸ್ಸು, ಅಲ್ಲಿಯ ಜೈವಿಕ ಲಕ್ಷಣಗಳಾಗಿದ್ದು, ಇದರ ಮೂಲಕ ಒಂದು ಸಮಾಜದ ಅಧ್ಯಯನ ಮಾಡಬಹುದು. ಲಿಂಗ ಮತ್ತು ವಯಸ್ಸಿನ ಅಂಕಿಸಂಖ್ಯೆಗಳು ಶಿಕ್ಷಣ, ಆರೋಗ್ಯ ಮತ್ತು ಮೂಲಭೂತ ಸೌಕರ್ಯಗಳ ಬಗ್ಗೆ ವಿಶಾಲಾತ್ಮಕ ತೀರ್ಮಾನ ತೆಗೆದುಕೊಳ್ಳಲು ಸಹಾಯಕವಾಗುತ್ತವೆ, ಒಂದು ದೇಶದ ಒಟ್ಟು ಜನಸಂಖ್ಯೆಯಲ್ಲಿ ಸ್ತ್ರೀಯರ ಮತ್ತು ಪುರುಷರ ನಡುವಿನ ಅನುಪಾತವನ್ನು ಲೈಂಗಿಕ ಅನುಪಾತ ಎನ್ನಲಾಗಿದೆ.......... ಹೀಗೆ ಸ್ತ್ರೀಯರ ಮತ್ತು ಪುರುಷರ ಲೈಂಗಿಕ ಅನುಪಾತ ಅಸಮತೋಲನ ಹೊಂದಿದೆ. ಭಾರತದಲ್ಲಿ ಸ್ತ್ರೀಯರ ಪ್ರಮಾಣ ಕಡಿಮೆ ಇರುವುದಕ್ಕೆ ಹಲವಾರು ಕಾರಣಗಳಿವೆ." [20]

ಈ ಮೇಲಿನ ಅನುವಾದವನ್ನು ಗಮನಿಸಿದಾಗ ಇಂಗ್ಲಿಷನ Sex composition ಕನ್ನಡದಲ್ಲಿನ ಅನುವಾದವು ಜನಸಂಖ್ಯೆಯ ಸಂಯೋಜನೆ ಎಂದು ನಂತರದ ವಿವರಣೆಯಲ್ಲಿ

ಲೈಂಗಿಕ ಅನುಪಾತ ಎಂಬ ಅನುವಾದದ ಅರ್ಥವು ತಪ್ಪು ತಿಳುವಳಿಕೆಗೆ ಆಸ್ಪದ ಕಲ್ಪಿಸಿಕೊಡುತ್ತದೆ ಕಾರಣ ಅನುವಾದಕರು ಇಂಗ್ಲಿಷ್‌ದಿಂದ ಕನ್ನಡಕ್ಕೆ ಅನುವಾದಿಸುವಾಗ ಸರಿಯಾಗಿ ಹೊಂದಾಣಿಕೆಯಾಗುವಂಥ ಪದವನ್ನೇ ಕನ್ನಡಕ್ಕೆ ತರುವುದು ಒಳ್ಳೆಯದು. ತುಂಬಾ ಅಸಹನೀಯ ಮತ್ತು ಓದುಗರಿಗೆ ವಿಶೇಷವಾಗಿ ವಿದ್ಯಾರ್ಥಿಗಳಿಗೆ ಮುಜುಗುರ ಮತ್ತು ತಪ್ಪು ಅರ್ಥ ಕಲ್ಪಿಸಿಕೊಡುವ ಸಾಧ್ಯತೆಗಳಿವೆ. ಆದ್ದರಿಂದ ಈ ಅನುವಾದವು ಸಮರ್ಪಕವಾಗಿರುವುದಿಲ್ಲ ಎಂಬುದನ್ನು ಹೇಳಬಯಸುತ್ತೇನೆ.

**" ವಯಸ್ಸಿನ ರಚನೆ ( Age Composition)**

ವಯಸ್ಸಿನ ಆಧಾರದಲ್ಲಿ ಭಾರತದ ಜನಸಂಖ್ಯೆಯನ್ನು ಸಾಮಾನ್ಯವಾಗಿ ಮೂರು ಮುಖ್ಯ ವರ್ಗಗಳಾಗಿ ವಿಂಗಡಿಸಬಹುದು. ಅವೆಂದರೆ 1. ಯುವಕರ ವರ್ಗ, 2. ವಯಸ್ಕರ ವರ್ಗ ಮತ್ತು 3 ವೃದ್ಯಾಪ್ಯ ವರ್ಗ.

ಸಾಮಾನ್ಯವಾಗಿ 15ರ ಒಳಗಿನ ವಯಸ್ಸಿನ ಜನಸಂಖ್ಯೆಯನ್ನು ಯುವಕರೆಂಬುದಾಗಿ ಕರೆಯಲಾಗುತ್ತದೆ. 15 ರಿಂದ 59ರ ವಯಸ್ಸಿನ ಜನಸಂಖ್ಯೆಯನ್ನು ವಯಸ್ಕರರೆಂಬುದಾಗಿ ಕರೆಯಲಾಗುತ್ತದೆ ಮತ್ತು 60 ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನ ಜನಸಂಖ್ಯೆಯನ್ನು ವೃದ್ಧರೆಂಬುದಾಗಿ ಕರೆಯಲಾಗುತ್ತದೆ.

ಇಲ್ಲಿ ಗಮನಿಸಬಹುದೆನೆಂದರೆ ವಯಸ್ಕರ ವರ್ಗವನ್ನು ಕೆಲಸ ಮಾಡುವ ವಯಸ್ಸಿನ ವರ್ಗ ಎಂಬುದಾಗಿ ಕರೆಯಲಾಗುತ್ತದೆ." [21]

ಈ ಮೇಲಿನ ಅನುವಾದವು ಸಮರ್ಪಕವಾಗಿ ಆಗದೆ ಇರುವುದರಿಂದ ಅನೇಕ ಗೊಂದಲಗಳಿಗೆ ಕಾರಣವಾಗುತ್ತದೆ. ಇವರು ಮಕ್ಕಳು ಎಂದು ಅನುವಾದಿಸುವ ಬದಲಿ ಯುವಕರೆಂದು ಅನುವಾದಿಸಿರುತ್ತಾರೆ. 0 ದಿಂದ 15ರ ಒಳಗಿನವರನ್ನು ಸಾಮಾನ್ಯವಾಗಿ ಮಕ್ಕಳೆಂದು ಕರೆಯುವುದು ವಾಡಿಕೆ. ಇವರು ಯುವಕರೆಂದು ಓದುಗರನ್ನು ದಾರಿ ತಪ್ಪಿಸುತ್ತಾರೆ. ಅನುವಾದಕರು ವಿಷಯ ಸಂಗ್ರಹದಿಂದ ಆಯ್ಕೆಮಾಡಿಕೊಳ್ಳುವಾಗ ಯೋಗ್ಯವಾದುದನ್ನು ಆಯ್ಕೆ ಮಾಡಿಕೊಂಡು ಪಠ್ಯಕ್ಕೆ ಸಂಬಂಧಿಸಿದಂತೆ ಅನುವಾದಿಸಲು ವಿನಂತಿಸಲಾಗಿದೆ.

**" ಲಿಂಗಸಂಯೋಜನೆ ( Sex Composition)**

ಲಿಂಗಸಂಯೋಜನೆ ಎಂದರೆ ಜನಸಂಖ್ಯೆಯಲ್ಲಿ ಸ್ತ್ರೀ ಪುರುಷರ ಪ್ರಮಾಣ ಇದನ್ನು ಪ್ರತಿಶತಕ ಎಂದು ಎಣಿಸದೇ ಒಂದು ಸಾವಿರ ಪುರುಷರಿಗೆ ಸ್ತ್ರೀಯರ ಸಂಖ್ಯೆ ಎಷ್ಟು ಎಂದು ಎಣಿಕೆ ಮಾಡಲಾಗುತ್ತದೆ. ಇದಕ್ಕೆ ಲಿಂಗದ ಪ್ರಮಾಣ (Sex Ratio) ಎಂದೂ ಕರೆಯುತ್ತಾರೆ. ಹೀಗೆ ಲಿಂಗದ ಪ್ರಮಾಣ ಎಂದರೆ ಜನಸಂಖ್ಯೆಯಲ್ಲಿ ಒಂದು ಸಾವಿರ ಪುರುಷರಿಗೆ ಸ್ತ್ರೀಯರ ಸಂಖ್ಯೆ ಎಷ್ಟು ಎಂಬುದನ್ನು ಅದು ಸೂಚಿಸುತ್ತದೆ. ಭಾರತದಲ್ಲಿ ಈ ಲಿಂಗದ ಪ್ರಮಾಣವು ಜನಗಣತಿಯ ಇಡಿಯ ಇತಿಹಾಸದಲ್ಲಿ ಸ್ತ್ರೀಯರಿಗೆ ಬಹಳೆ ಪ್ರತಿಕೂಲವಾಗಿದೆ."[22]

ಈ ಮೇಲಿನ ಅನುವಾದದಲ್ಲಿ ಲಿಂಗ ಸಂಯೋಜನೆ ಎನ್ನುವ ಬದಲಿ ಲಿಂಗದ ಪ್ರಮಾಣ ಎಂದು ಅನುವಾದಿಸಿರುವುದು ಓದುಗರಿಗೆ ಅಪಾರ್ಥ ಕಲ್ಪಿಸುತ್ತದೆ. ಇವರು Sex composition ಮತ್ತು Sex ratio ಈ ಎರಡೂ ಪದಗಳು ಒಂದೇ ಎಂದು ಭಾವಿಸಿದ್ದಾರೆ.ಆದ್ದರಿಂದ ಅನುವಾದಕರು ಸರಿಯಾದ ಪದದ ಬಳಕೆಯ ಮೂಲಕ ಅನುವಾದಿಸಬೇಕೆಂದು ವಿನಂತಿಸಲಾಗಿದೆ.

" **ಹಳದಿ ಕ್ರಾಂತಿ ( Yellow Revolution)**

ಹಳದಿ ಕ್ರಾಂತಿ ಎಂದರೆ ಎಣ್ಣೆ ಬೀಜಗಳು ಹಾಗೂ ದ್ವಿದಳ ಧಾನ್ಯಗಳ ಉತ್ಪಾದನೆಯಲ್ಲಿನ ಗಣನೀಯವಾದ ಹೆಚ್ಚಳವಾಗಿದೆ.

ಭಾರತವು ವಿಶ್ವದಲ್ಲಿ ಎಣ್ಣೆ ಬೀಜಗಳ ಪ್ರಮುಖ ಉತ್ಪಾದಕರಲ್ಲಿ ಒಂದಾಗಿದೆ, ಅದು ಹಲವಾರು ಎಣ್ಣೆ ಬೀಜಗಳಾದ ತೆಂಗಿನಕಾಯಿ, ನೆಲೆ ಕಡಲೆಕಾಯಿ, ಅರಳೆಣ್ಣೆ ಬೀಜ, ಸಾಸಿವೆ, ಸೋಯಾ ಬೀನ್ಸ್, ವನಸ್ಪತಿ, ಅಗಸೆ ಬೀಜ, ಎಳ್ಳು ಬೀಜ, ರೇಪ್ ಬೀಜ ಇತ್ಯಾದಿಗಳನ್ನು ಬೆಳೆಯುತ್ತದೆ. ಇದೀಗ ಸುಮಾರು 23.2 ಮಿಲಿಯನ್ ಹೆಕ್ಟೇರ್ ಭೂಮಿಯನ್ನು ಎಣ್ಣೆ ಬೀಜಗಳ ವ್ಯವಸಾಯಕ್ಕೆ ಮೀಸಲಾಗಿಟ್ಟಿದ್ದು, ಅದು ದೇಶದ ಬೆಳೆ ಬೆಳೆಯುವ ಒಟ್ಟು ಪ್ರದೇಶದ 12%ದಷ್ಟಾಗುತ್ತದೆ. ಎಣ್ಣೆ ಬೀಜಗಳ ಉತ್ಪಾದನೆಯು 1950–51ರಲ್ಲಿದ್ದ 5.16 ಮಿಲಿಯನ್ ಟನ್‌ಗಳಿಂದ 2000–01ರಲ್ಲಿ 18.4 ಮಿಲಿಯನ್ ಟನ್‌ಗಳಿಗೇರಿತು.

ಭಾರತವು ಕೂಡ ದ್ವಿದಳ ಧಾನ್ಯಗಳ ಒಂದು ಪ್ರಮುಖ ಉತ್ಪಾದಕ ದೇಶವಾಗಿದೆ. ದ್ವಿದಳ ಧಾನ್ಯಗಳ ಉತ್ಪಾದನೆಯು ಹೆಚ್ಚಾಗಿದೆ. ಆದರೆ, ಅದು ಗಮನಾರ್ಹವಾಗಿಲ್ಲ." [23]

ಈ ಮೇಲಿನ ಅನುವಾದವು ಸಮರ್ಪಕ ಮತ್ತು ಸರಿಯಾಗಿ ಆಗದೆ ಇರುವುದು ಸಮಸ್ಯೆಗೆ ಕಾರಣವಾಗುತ್ತದೆ, ಕಾರಣ ಹಳದಿ ಕ್ರಾಂತಿಗೆ ಅರ್ಥ ಹೇಳುವಾಗಲೇ ಅವರು ಎಣ್ಣೆ ಬೀಜಗಳ ಮತ್ತು ದ್ವಿದಳ ಧಾನ್ಯಗಳ ಉತ್ಪಾದನೆಯಲ್ಲಿನ ಗಣನೀಯ ಹೆಚ್ಚಳ ಎಂದಿದ್ದಾರೆ. ಇಲ್ಲಿ 'ದ್ವಿದಳ ಧಾನ್ಯ' ಬಳಸಿರುವುದು ಇತರ ಅನುವಾದಕರು ನೀಡಿದ ಪಠ್ಯಕ್ರಮದಲ್ಲಿ ಸೇರಿರುವುದಿಲ್ಲ ಇದು ಓದುಗರಿಗೆಲ್ಲಾ ಗೊಂದಲವೆನಿಸುತ್ತದೆ.

" **ಹಳದಿ ಕ್ರಾಂತಿ (Yellow Revolution)** : ಎಂದರೆ ರೇಷ್ಮೆ ಉತ್ಪಾದನೆಯಲ್ಲಿ ಕ್ರಾಂತಿ, ಇದರಿಂದ ಅತೀ ದೊಡ್ಡ ಪ್ರಮಾಣದಲ್ಲಿ ರೇಷ್ಮೆಯನ್ನು ಉತ್ಪಾದಿಸಲು ಸಾಧ್ಯವಾಗಿದೆ." [24]

ಈ ಮೇಲಿನ ಅನುವಾದವು ಉಳಿದ ಅನುವಾದಗಳಿಗಿಂತ ಭಿನ್ನವಾಗಿದೆ. ಇದು ಕನ್ನಡ ಅನುವಾದದ ಯಾವ ಪುಸ್ತಕದಲ್ಲಿಯೂ ಲಭ್ಯವಿರದ ಮಾಹಿತಿಯನ್ನು ನೀಡುತ್ತದೆ. ಇದು ಯಾವ ಮೂಲದಿಂದ ಪಡೆದ ಮಾಹಿತಿ ಎಂಬುದಕ್ಕೆ ಆಧಾರ ಗ್ರಂಥಗಳ ಬಗ್ಗೆ

ಹೇಳದಿರುವುದು ಮತ್ತೊಂದು ಸಮಸ್ಯೆ ಎನಿಸುತ್ತದೆ. ಉಳಿದ ಅನುವಾದಕರು 'ಎಣ್ಣೆ ಬೀಜಕ್ಕೆ' ಸಂಬಂಧಿಸಿದ ವಿಚಾರ ಹೇಳಿದರೆ, ಇವರು ಭಿನ್ನವಾದ ವಿಚಾರ ತಿಳಿಸಿರುತ್ತಾರೆ.

**" ಹಳದಿ ಕ್ರಾಂತಿ ( Yellow Revolution)**

ದೇಶದಲ್ಲಿ ಎಣ್ಣೆಕಾಳು ಮತ್ತು ಅಡುಗೆ ಎಣ್ಣೆಯ ಉತ್ಪಾದನೆಯನ್ನು ಹೆಚ್ಚಿಸಲು ಆಳವಡಿಸಿಕೊಳ್ಳಲಾದ ಧೋರಣೆ ಕ್ರಮವನ್ನು ಹಳದಿ ಕ್ರಾಂತಿ ಎನ್ನಲಾಗುವುದು ಅಂದರೆ ಹಳದಿ ಕ್ರಾಂತಿಯು ಎಣ್ಣೆ ಕಾಳು ಮತ್ತು ಅಡುಗೆ ಎಣ್ಣೆ ಉತ್ಪಾದನೆಯ ಹೆಚ್ಚಳಕ್ಕೆ ಸಂಬಂಧಿಸಿದೆ.

ಸರ್ಕಾರವು ಮೇಲಿನ ಉದ್ದೇಶದ ಈಡೇರಿಕೆಗಾಗಿ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸಿದೆ. ಇದರ ಪರಿಣಾಮವಾಗಿ ಎಣ್ಣೆಕಾಳುಗಳ ಉತ್ಪಾದನೆಯು 1950–51ರ 5.16 ದಶಲಕ್ಷ ಟನ್ನುಗಳಿಂದ 2000–01ರ ವೇಳೆಗೆ 18.4 ದಶಲಕ್ಷ ಟನ್ನುಗಳಿಗೆ ಹೆಚ್ಚಿದೆ. ಆದಾಗ್ಯೂ ದೇಶವು ಅಡುಗೆ ಉತ್ಪಾದನೆಯಲ್ಲಿ ಇನ್ನೂ ಸ್ವಾವಲಂಬಿಯಾಗಿಲ್ಲ. " [25]

ಈ ಮೇಲಿನ ಅನುವಾದದಲ್ಲಿ ಆಡುಗೆ ಎಣ್ಣೆ ಮತ್ತು ಎಣ್ಣೆಕಾಳು ಎಂಬ ಎರಡು ಪದಗಳನ್ನು ಬಳಸಿರುವುದು ಒಂದು ಸಮಸ್ಯೆ ಕಾರಣ ವನಸ್ಪತಿಗೆ ಸಂಬಂಧಿಸಿದ ಎಣ್ಣೆ ಇದರಲ್ಲಿ ಸೇರುವುದಿಲ್ಲವೇ ಎಂಬ ಪ್ರಶ್ನೆ ಅನುವಾದಕರನ್ನು ಕೇಳಬೇಕೆನಿಸುತ್ತದೆ.

"ಅರ್ಥಶಾಸ್ತ್ರ (Economic) ಎಂಬ ಪದನಾಮವನ್ನು ಗ್ರೀಕ್ ಭಾಷೆಯ ಇಕೋಸ್ (Oikos) ಮತ್ತು ನೋಮಸ್ (Nomos) ಎಂಬ ಎರಡು ಪದಗಳಿಂದ ಪಡೆಯಲಾಗಿದೆ. ಗ್ರೀಕ್ ಭಾಷೆಯಲ್ಲಿ ಇಕೋಸ್ ಎಂದರೆ ಮನೆ ಅಥವಾ ಗೃಹ ಎಂತಲೂ ನೋಮಸ್ ಎಂದರೆ ನಿರ್ವಹಣೆ ಎಂತಲೂ ಅರ್ಥಕೊಡುತ್ತದೆ. ಆ ಮೇರೆಗೆ ಅರ್ಥಶಾಸ್ತ್ರವು 'ಗೃಹ ನಿರ್ವಹಣೆಯ ಕಲೆ' (The art of household management) ಎಂಬ ಅರ್ಥ ಕೊಡುತ್ತದೆ ಆದ್ದರಿಂದ ಗ್ರೀಕ್ ಮೂಲದ ಮೇರೆಗೆ ಅರ್ಥಶಾಸ್ತ್ರ ಎಂದರೆ ಲಭ್ಯವಿರುವ ಮಿತವಾದ ಸಂಪನ್ಮೂಲಗಳನ್ನು ದಕ್ಷವಾಗಿ ಬಳಸಿಕೊಂಡು ಕುಟುಂಬವನ್ನು ನಿರ್ವಹಿಸುವುದು ಎಂದರ್ಥವಾಗುತ್ತದೆ." [26]

ಅನುವಾದಕರು ಅರ್ಥಶಾಸ್ತ್ರದ ಮೂಲ ಪದಗಳ ಅರ್ಥವನ್ನು ಕನ್ನಡ ಮತ್ತು ಇಂಗ್ಲಿಷ ಪದಗಳನ್ನು ಒಟ್ಟಿಗೆ ಕೊಟ್ಟಿರುವುದರಿಂದ ಓದುಗರಿಗೆ ತುಂಬಾ ಅನುಕೂಲವಾಗಿದೆ, ಅನುವಾದಕರು ಮೂಲ ಪದಗಳ ಅರ್ಥವನ್ನು ಹೆಚ್ಚಿನ ಮಾಹಿತಿಯೊಂದಿಗೆ ನೀಡಿರುವುದು ಸರಿಯಿದೆ.

"ಇಕನಾಮಿಕ್ಸ್ ಎಂಬ ಇಂಗ್ಲಿಷ ಶಬ್ದವು 'ಒೈಕೋಸ್' ಮತ್ತು 'ನೋಮೋಸ್' ಎಂಬ ಗ್ರೀಕ್ ಶಬ್ದಗಳಿಂದ ವ್ಯುತ್ಪನ್ನಗೊಂಡಿದೆ. ಒೈಕೋಸ್ ಎಂದರೆ ಮನೆವಾರ್ತೆ ಮತ್ತು ನೋಮೋಸ್ ಎಂದರೆ ಆಡಳಿತ ಎಂದು ಅರ್ಥ. ಆದುದರಿಂದ ತನ್ನ ಮೂಲ ನೆಲೆಯಲ್ಲಿ ಇಕ್‌ನಾಮಿಕ್ಸ್

ಅಥವಾ ಅರ್ಥಶಾಸ್ತ್ರವೆಂದರೆ, ಮನೆವಾರ್ತೆ ಆಡಳಿತ (ಅಂದರೆ ಒಂದು ಕುಟುಂಬಕ್ಕೆ ಲಭ್ಯವಾಗುವ ಸೀಮಿತ ಸಂಪನ್ಮೂಲಗಳನ್ನು ಬೇರೆ ಬೇರೆ ಬಯಕೆಗಳ ಅಥವಾ ಉಪಯೋಗಗಳ ಮಧ್ಯ ಬುದ್ಧಿವಂತಿಕೆಯಿಂದ ಅಥವಾ ಹಿತಮಿತವಾಗಿ ಬಳಸುವುದರ ಮೂಲಕ ಕುಟುಂಬದ ಎಷ್ಟು ಸಾಧ್ಯವೋ ಅಷ್ಟು ಬಯಕೆಗಳನ್ನು ಈಡೇರಿಸಿಕೊಳ್ಳುವುದು) ಇಲ್ಲಿ ಗಮನಿಸಬಹುದೇನೆಂದರೆ, ಪ್ರಸಿದ್ಧ ಗ್ರೀಕ್ ತತ್ವಶಾಸ್ತ್ರಜ್ಞನಾದ ಅರಿಸ್ಟಾಲ್ ಅರ್ಥಶಾಸ್ತ್ರವನ್ನು ಮನೆವಾರ್ತೆ ನಿರ್ವಹಣೆಯ ಕಲೆ ಎಂಬುದಾಗಿ ಪರಿಗಣಿಸಿದ್ದನ್ನು" [27].

ಅನುವಾದಕರು ತಾವು ನೀಡಿದ ಕನ್ನಡ ಪದಕ್ಕೆ ಸಮಾನವಾದ ಇಂಗ್ಲಿಷಿನ ಮೂಲ ಪದವನ್ನು ಆವರಣದಲ್ಲಿ ನೀಡಿದ್ದರೆ ವಿದ್ಯಾರ್ಥಿಗಳಿಗೆ ಹಾಗೂ ಉಪನ್ಯಾಸಕರಿಗೆ ಸರಿಯಾದ ಮಾಹಿತಿ ದೊರೆಯುತ್ತಿತ್ತು. ಆದರೆ ಇಲ್ಲಿ ಇಂಗ್ಲಿಷ ಪದವಿಲ್ಲದೆ ಗೊಂದಲಗಳಿಗೆ ಅವಕಾಶವಾಗುತ್ತದೆ.

ಡಾ.ಸಿ.ಕೆ.ರೇಣುಕಾರ್ಯ ಇವರು ಸಂಪಾದಿಸಿದ ಪ್ರಥಮ ಪಿಯುಸಿ ಪಠ್ಯದ ಮೊದಲನೆ ಅಧ್ಯಾಯದ ಪ್ರಸ್ತಾವನೆ ಎನ್ನುವಲ್ಲಿ ಅರ್ಥಶಾಸ್ತ್ರದ ವ್ಯಾಖ್ಯೆಗಳು ಎಂದು ಉಪ ಶೀರ್ಷಿಕೆಯಿಂದ ಪ್ರಾರಂಭಿಸಲ್ಪಟ್ಟಿದೆ. ಈ ಭಾಗದಲ್ಲಿ ಹೇಳಲೇಬೇಕಾದ ಅರ್ಥಶಾಸ್ತ್ರದ ಮೂಲಪದಗಳ ಪರಿಚಯ ಪುಸ್ತಕದ ಯಾವ ಭಾಗದಲ್ಲಿಯೂ ನಮೂದು ಆಗಿರುವುದಿಲ್ಲ. ಮೂರನೇ ಪುಟದಲ್ಲಿ ಪುನಃ ಅರ್ಥಶಾಸ್ತ್ರದ ವ್ಯಾಖ್ಯೆ ಎಂದಿದ್ದಾರೆ. ಇಲ್ಲಿ ಸಂಪತ್ತಿನ ವ್ಯಾಖ್ಯಾನದ ಬಗ್ಗೆ ವಿವರಣೆ ನೀಡಿರುತ್ತಾರೆ. ಆದರೆ ಸಂಪತ್ತಿನ ವ್ಯಾಖ್ಯಾನದ ಅಡಿಯಲ್ಲಿ ಅದರ ಬಗ್ಗೆ ವಿವರಣೆ ಇರುವ ಬದಲಿ ಟೀಕೆಗಳನ್ನು ಪ್ರಕಟಿಸಲಾಗಿದೆ. ಇದರಿಂದ ಓದುಗನಿಗೆ ತುಂಬಾ ತೊಂದರೆಯಾಗುತ್ತದೆ. ಅನುವಾದಕರು ಅರ್ಥಶಾಸ್ತ್ರದ ಅರ್ಥವನ್ನು ಅದರ ಮೂಲ ಪದದೊಂದಿಗೆ ವಿವರಣೆ ನೀಡಿದ್ದರೆ. ಇನ್ನೂ ಹೆಚ್ಚಿನ ಪ್ರಯೋಜನವಾಗುತಿತ್ತೆಂದು ವಿನಂತಿಸಲಾಗಿದೆ.

" Micro ಎಂಬ ಪದವು Mikros ಎಂಬ ಗ್ರೀಕ್ ಪದದಿಂದ ಹುಟ್ಟಿಕೊಂಡಿದೆ, Mikros ಎಂದರೆ ಚಿಕ್ಕದು ಎಂದರ್ಥ. ಇದನ್ನು ಸೂಕ್ಷ್ಮ ಎಂತಲೂ ಹೇಳಬಹುದು ಅದುದರಿಂದ ಅರ್ಥಶಾಸ್ತ್ರದ ಒಂದು ಚಿಕ್ಕ ಭಾಗದ ಅಭ್ಯಾಸವನ್ನು ಅದು ಮಾಡುತ್ತದೆ. ಸಂಪೂರ್ಣ ಅರ್ಥವ್ಯವಸ್ಥೆ ಅದರ ಕ್ಷೇತ್ರವಲ್ಲ. ಅರ್ಥವ್ಯವಸ್ಥೆಯ ಬಿಡಿ ಬಿಡಿಯಾದ ಘಟಕಗಳನ್ನು ಅದು ತನ್ನ ಅಧ್ಯಯನ ವಿಷಯವನ್ನಾಗಿ ಮಾಡಿಕೊಂಡಿದೆ. ಬಿಡಿ ಘಟಕವನ್ನು ಅದು ಸೂಕ್ಷ್ಮವಾಗಿ ಪರಿಶೀಲಿಸುತ್ತದೆ.

ಪ್ರೊ. ಮ್ಯಾಕ್‌ಕ್ಯಾನಲ್ ಹೇಳುವಂತೆ "ಸೂಕ್ಷ್ಮ ಅರ್ಥಶಾಸ್ತ್ರವು ನಿರ್ದಿಷ್ಟ ಆರ್ಥಿಕ ಘಟಕಗಳನ್ನು ಅಧ್ಯಯನಕ್ಕಾಗಿ ಎತ್ತಿಕೊಂಡು ಅವುಗಳ ಕಾಯವಿಧಾನಗಳನ್ನು ವಿಸ್ತಾರವಾಗಿ ಪರಿಶೀಲಿಸುತ್ತದೆ." ಪ್ರೊ. ಬೋಲ್ಡಿಂಗ್ ಹೇಳುವಂತೆ "ವ್ಯಕ್ತಿಗಳ, ಸಂಸ್ಥೆಗಳ, ಮನೆವಾರ್ತೆಗಳ ಬೇರೆ ಬೇರೆ ಬೆಲೆಗಳ, ಬೇರೆ ಬೇರೆ ಕೈಗಾರಿಕೆಗಳ ಅಧ್ಯಯನವೇ ಸೂಕ್ಷ್ಮ ಅರ್ಥಶಾಸ್ತ್ರವಾಗಿದೆ."

ಬ್ರೂಮೆನ್ ಅವರ ಮಾತಿನಲ್ಲಿ "ಸೂಕ್ಷ್ಮ ಅರ್ಥಶಾಸ್ತ್ರವು ಸರಕುಗಳ ಮಾರುಕಟ್ಟೆಯ ಕಾರ್ಯನಿರ್ವಹಣೆಯನ್ನು ಮತ್ತು ಖರೀದಿದಾರ ಹಾಗೂ ವಿಕ್ರಯದಾರರ ವೈಯಕ್ತಿಕ

ವರ್ತನೆಯನ್ನು ವಿವರಿಸುವ ಉದ್ದೇಶವನ್ನು ಹೊಂದಿರುತ್ತದೆ.

ಪ್ರೊ. ಹನ್‌ಸೆನ್ ಅವರ ಮಾತಿನಲ್ಲಿ "ಸಂಸ್ಥೆಗಳು, ಅವುಗಳ ಉತ್ಪಾದನೆ ಮತ್ತು ವೆಚ್ಚಗಳು ಸರುಕುಗಳ ಉತ್ಪಾದನೆ ಮತ್ತು ಬೆಲೆ ನಿಗಧಿ ಮತ್ತು ವ್ಯಕ್ತಿಗಳ ಮಜೂರಿ, ಇತ್ಯಾದಿಗಳಿಗೆ ಸಂಬಂಧಿಸಿದ ಅರ್ಥಶಾಸ್ತ್ರದ ಅಂಗವೇ ಸೂಕ್ಷ್ಮ ಅರ್ಥಶಾಸ್ತ್ರವಾಗಿದೆ."

ಪ್ರೊ. ಗಾರ್ಡ್‌ನರ್ ಆಕ್ಲೆ ಅವರ ಮಾತಿನಲ್ಲಿ "ಸೂಕ್ಷ್ಮ ಅರ್ಥಶಾಸ್ತ್ರವು ಕೈಗಾರಿಕೆಗಳ ನಡುವೆ ಒಟ್ಟು ಉತ್ಪಾದನೆಯನ್ನು ಕೈಗಾರಿಕೆಗಳು, ಉತ್ಪನ್ನಗಳು ಮತ್ತು ಸಂಸ್ಥೆಗಳ ನಡುವೆ ವಿಭಜಿಸುವುದು ಮತ್ತು ಪೈಪೋಟಿ ನಡೆಸುವ ಗುಂಪುಗಳ ನಡುವೆ ಸಂಪನ್ಮೂಲಗಳ ಹಂಚಿಕೆಯೊಂದಿಗೆ ಸಂಬಂಧವನ್ನು ಹೊಂದಿರುತ್ತದೆ." ಅದು ನಿರ್ದಿಷ್ಟ ಸರಕು ಮತ್ತು ಸೇವೆಗಳ ಸಾಪೇಕ್ಷವಾದ ಬೆಲೆಗಳಲ್ಲಿ ಆಸಕ್ತಿಯನ್ನು ಹೊಂದಿದೆ. ಉಕ್ಕು, ಸೀಮೆಂಟ್, ಸಕ್ಕರೆ ಮುಂತಾದ ಬೇರೆ ಬೇರೆ ವಸ್ತುಗಳ ಬೆಲೆಗಳನ್ನು ಹತ್ತಿಬಟ್ಟೆ, ಸಕ್ಕರೆ ಮುಂತಾದ ಬೇರೆ ಬೇರೆ ಕೈಗಾರಿಕೆಗಳಲ್ಲಿನ ಕೂಲಿಗಳನ್ನು ಸಕ್ಕರೆ, ಕಬ್ಬಿಣ, ಉಕ್ಕು, ಹತ್ತಿ ಬಟ್ಟೆ ಮುಂತಾದ ಕೈಗಾರಿಕೆಗಳಲ್ಲಿ ಪ್ರತಿಯೊಂದರ ಉತ್ಪಾದನೆಯ ಮೊತ್ತವನ್ನು ಕಬ್ಬಿಣ ಮತ್ತು ಉಕ್ಕು ಸಿಮೆಂಟು, ರಸಗೊಬ್ಬರ ಮುಂತಾದ ಕೈಗಾರಿಕೆಗಳ ಪ್ರತಿಯೊಂದರಲ್ಲಿ ತೊಡಗಿಸಿದ ಬಂಡವಾಳವನ್ನು (ಹೂಡಿಕೆಯನ್ನು) ಪ್ರತಿಯೊಬ್ಬರ ಆದಾಯವನ್ನು, ಪ್ರತಿಯೊಂದು ವಸ್ತುವಿಗಿರುವ ಬೇಡಿಕೆಯನ್ನು ಪ್ರತಿಯೊಂದು ವಸ್ತುವಿನ ಪೂರೈಕೆಯನ್ನು ಸೂಕ್ಷ್ಮ ಅರ್ಥಶಾಸ್ತ್ರವು ತನ್ನ ಅಧ್ಯಯನ ವಿಷಯವನ್ನಾಗಿ ಮಾಡಿಕೊಂಡಿದೆ. ಅದು ಎಲ್ಲಾ ವಸ್ತುಗಳ ಒಟ್ಟು ಬೇಡಿಕೆಯನ್ನಾಗಲಿ, ಎಲ್ಲಾ ವಸ್ತುಗಳ ಒಟ್ಟು ಪೂರೈಕೆಯನ್ನಾಗಲಿ ದೇಶದ ಸಾಮಾನ್ಯ ಬೆಲೆಯ ಮಟ್ಟವನ್ನಾಗಲಿ, ದೇಶದ ಸಾಮಾನ್ಯ ಕೂಲಿಯ ಮಟ್ಟವನ್ನಾಗಲಿ, ಎಲ್ಲಾ ಕೈಗಾರಿಕೆಗಳ ಉತ್ಪಾದನೆಯ ಮೊತ್ತವನ್ನಾಗಲಿ, ಎಲ್ಲಾ ಕೈಗಾರಿಕೆಗಳಲ್ಲಿನ ಒಟ್ಟು ನಕರಿಗಳನ್ನಾಗಲಿ, ಒಟ್ಟು ಉಳಿತಾಯವನ್ನಾಗಲಿ, ಕೈಗಾರಿಕೆಗಳಲ್ಲಿ ತೊಡಗಿಸಿದ ಒಟ್ಟು ಬಂಡವಾಳವನ್ನಾಗಲಿ, ರಾಷ್ಟ್ರೀಯ ಆದಾಯವನ್ನಾಗಲಿ ತನ್ನ ಅಧ್ಯಯನ ವಿಷಯವನ್ನಾಗಿ ಮಾಡಿಕೊಂಡಿಲ್ಲ." [28]

ಅನುವಾದಕರು ಸರಿಯಾದಂತ ಮಾಹಿತಿಯನ್ನು ವಿವರಣೆಯೊಂದಿಗೆ ನೀಡಿದ್ದಾರೆ ಅಧ್ಯಯನಕಾರರಿಗೆ ತುಂಬಾ ಉಪಯುಕ್ತವಾಗುತ್ತದೆ. ಇನ್ನಷ್ಟು ಮಾಹಿತಿ ಕೊಡುವ ಪ್ರಯತ್ನ ಮಾಡಿದರೆ ಅನುಕೂಲ.

"ಅಂಶಲಕ್ಷಿ ಅರ್ಥಶಾಸ್ತ್ರದಲ್ಲಿ ಸಣ್ಣ ಸಣ್ಣ ಆರ್ಥಿಕ ವಿಷಯವನ್ನು ಕೂಲಂಕಷವಾಗಿ ಚರ್ಚಿಸಲಾಗುತ್ತದೆ. ಉದಾಹರಣೆಗೆ ಒಬ್ಬ ಅನುಭೋಗಿ ಹೇಗೆ ವರ್ತಿಸುತ್ತಾನೆ, ಅವನು ತನ್ನ ಮಿತವಾದ ಆದಾಯದಿಂದ ಹೇಗೆ ಪರಮಾವಧಿ ತೃಪ್ತಿಯನ್ನು ಪಡೆಯುತ್ತಾನೆ ಒಂದು ವಸ್ತುವಿನ ಬೆಲೆ ಹೇಗೆ ನಿಗಧಿಯಾಗುತ್ತದೆ, ಒಂದು ಕಾರ್ಖಾನೆ ಹೇಗೆ ಸಮತೋಲನವನ್ನು ಮುಟ್ಟುತ್ತದೆ, ಇತ್ಯಾದಿ ವಿಷಯಗಳನ್ನು ಚರ್ಚಿಸಲಾಗುತ್ತದೆ. ಅಂದರೆ ಇಡೀ ರಾಷ್ಟ್ರೀಯ ಆರ್ಥಿಕ

ಚಟುವಟಿಕೆಗಳನ್ನು ಸಮಗ್ರವಾಗಿ ಈ ಭಾಗದಲ್ಲಿ ಚರ್ಚಿಸಲಾಗುವುದಿಲ್ಲ. ಬದಲಿಗೆ ರಾಷ್ಟ್ರೀಯ ಆರ್ಥಿಕ ಚಟುವಟಿಕೆಗಳನ್ನು ಸಣ್ಣ ಸಣ್ಣ ಭಾಗಗಳಾಗಿ ವಿಂಗಡಿಸಿಕೊಂಡು ಪ್ರತಿಯೊಂದು ವಿಭಾಗವನ್ನು ವಯಕ್ತಿಕವಾಗಿ ಅಭ್ಯಾಸ ಮಾಡಲಾಘುತ್ತದೆ. ಕ್ಲಾಸಿಕಲ್ ಪಂಥದ ಚಿಂತಕರ ಬಹುಭಾಗದ ವಿಶ್ಲೇಷಣೆ ಅಂಶಲಕ್ಷಿ ಅರ್ಥಶಾಸ್ತ್ರಕ್ಕೆ ಸಂಬಂಧಪಟ್ಟಿದೆ. ಏಕೆಂದರೆ ಅವರು ವಯಕ್ತಿಕ ಘಟಕಗಳಿಗೆ ಸಂಬಂಧಿಸಿದ, ಆರ್ಥಿಕ ಚಟುವಟಿಕೆಗಳ ವಿಶ್ಲೇಷಣೆಗೆ ಹೆಚ್ಚಿನ ಮಹತ್ವ ನೀಡಿದ್ದರು. ಮತ್ತೊಂದು ಉದಾಹರಣೆ ನೀಡುವುದಾದರೆ ಪ್ರೊ. ಮಾರ್ಷಲ್‌ರವರ 'ಪ್ರಿನ್ಸಿಪಲ್ಸ್ ಆಫ್ ಎಕನಾಮಿಕ್ಸ್' ಮುಖ್ಯವಾಗಿ ಅಂಶಲಕ್ಷಿ ಅರ್ಥಶಾಸ್ತ್ರವಾಗಿದೆ. ಅವರ ಪ್ರಸಿದ್ಧ ಸಿದ್ಧಾಂತಗಳಾದ ಸಮಸೀಮಾಂತ ತುಷ್ಟಿಗುಣ ಮೀಮಾಂಸೆ, ಅನುಭೋಗಿ ಅಧಿಶೇಷ ಮುಂತಾದವು ಅಂಶಲಕ್ಷಿ ಅರ್ಥಶಾಸ್ತ್ರಕ್ಕೆ ನಿರ್ದಿಷ್ಟ ಉದಾಹರಣೆಗಳು." [29]

ಅನುವಾದಕರು ಅನುವಾದವನ್ನು ಮಾಡುವ ಪೂರ್ವದಲ್ಲಿ ತಮ್ಮ ಅನುಭವವನ್ನು ಇದರೊಂದಿಗೆ ಬೆರಿಸಿರುವುದು ಕಂಡು ಬರುತ್ತದೆ ಇವರು ಮೂಲ ಇಂಗ್ಲಿಷ ಪದವನ್ನು ಜೊತೆಯಲ್ಲಿಯೆ ನೀಡಿದ್ದರೇ. ಅಧ್ಯಯನಕಾರರಿಗೆ ಅಧಿಕ ಉಪಯುಕ್ತತೆ ಮತ್ತು ಪರಿಣಾಮಕಾರಿಯಾಗುತ್ತಿತ್ತು. ನೀಡಿರುವ ಉದಾಹರಣೆ ಪ್ರಾದೇಶಿಕವಾಗಿ ಹೇಳುವ ಭಾಷೆ ಸಾರ್ವತ್ರಿಕವಾಗಿರುವಂತೆ ಕಂಡು ಬರುವುದಿಲ್ಲ ಎಂಬುದನ್ನು ಹೇಳಬಯಸುತೇನೆ. ಈ ಅನುವಾದಕರು ಅಂಶಲಕ್ಷಿ ಎಂದು ಹೇಳಿರುತ್ತಾರೆ. ಆದರೆ ಇವರು 'ಸೂಕ್ಷ್ಮ' ಎನ್ನುವ ಪದವನ್ನು ಎಲ್ಲಿಯೂ ಬಳಸಿರುವುದಿಲ್ಲ. ಅಲ್ಲದೆ ಇವರು Micro ಪದದ ಮೂಲದ ಬಗ್ಗೆ ಮತ್ತು ಅದಕ್ಕೆ ಇರಬಹುದಾದ ಅರ್ಥಗಳ ಪಟ್ಟಿಯನ್ನು ನೀಡಿದ್ದರೆ ಇನ್ನಷ್ಟು ಸಹಾಯಕಾರಿಯಾಗುತ್ತಿತ್ತು.

## ಕೊನೆ ಟಿಪ್ಪಣಿಗಳು


1. ಹೆಚ್ಚ್‌ಆರ್ ಕೃಷ್ಣಮೂರ್ತಿ ಹೊಸಬೀಡು, ಭಾರತದ ಆರ್ಥಿಕ ಅಭಿವೃದ್ಧಿ, ಪು : 3–5
2. ಸಿ.ಕೆ. ರೇಣುಕಾರ್ಯ, ಸಂ. ಅರ್ಥಶಾಸ್ತ್ರ ಪಿಯುಸಿ ಎರಡನೇ ವರ್ಷ, ಪು : 2–3
3. ಕೆ.ಡಿ ಬಸವಾ, ಭಾರತದ ಆರ್ಥಿಕ ಅಭಿವೃದ್ಧಿ, ಪು : 1.1 – 1.3
4. R. Ramakrishnaiah, Economic development of India, Page :1-2
5. ಹೆಚ್ಚ್‌ಆರ್ ಕೃಷ್ಣಮೂರ್ತಿ ಹೊಸಬೀಡು, ಭಾರತದ ಆರ್ಥಿಕ ಅಭಿವೃದ್ಧಿ, ಪು :
6. ಸಿ.ಕೆ.ರೇಣುಕಾರ್ಯ, ಸಂ. ಅರ್ಥಶಾಸ್ತ್ರ ಪಿ.ಯು.ಸಿ ಎರಡನೇ ವರ್ಷ, ಪು : 3–5
7. ಕೆ.ಡಿ ಬಸವಾ, ಭಾರತದ ಆರ್ಥಿಕ ಅಭಿವೃದ್ಧಿ, ಪು : 1.4 – 1.5
8. R. Ramakrishnaiah, Economic development of India, Page :2-3
9. ಹೆಚ್ಚ್‌ಆರ್ ಕೃಷ್ಣಮೂರ್ತಿ ಹೊಸಬೀಡು, ಭಾರತದ ಆರ್ಥಿಕ ಅಭಿವೃದ್ಧಿ, ಪು :
10. ಸಿ.ಕೆ. ರೇಣುಕಾರ್ಯ, ಸಂ. ಅರ್ಥಶಾಸ್ತ್ರ ಪಿಯುಸಿ ಎರಡನೇ ವರ್ಷ, ಪು : 5–7

11. ಕೆ.ಡಿ ಬಸವಾ, ಭಾರತದ ಆರ್ಥಿಕ ಅಭಿವೃದ್ಧಿ, ಪು : 1.5
12. R. Ramakrishnaiah, Economic development of India, Page : 3-4
13. ಹೆಚ್ಚ್‌ಆರ್ ಕೃಷ್ಣಮೂರ್ತಿ ಹೊಸಬೀಡು, ಭಾರತದ ಆರ್ಥಿಕ ಅಭಿವೃದ್ಧಿ, ಪು : 11–12
14. ಆರ್.ರಾಮಕೃಷ್ಣಯ್ಯ, ಭಾರತದ ಆರ್ಥಿಕ ಅಭಿವೃದ್ಧಿ, ಪು : 5 – 6
15. ಹೆಚ್ಚ್‌ಆರ್ ಕೃಷ್ಣಮೂರ್ತಿ ಹೊಸಬೀಡು, ಭಾರತದ ಆರ್ಥಿಕ ಅಭಿವೃದ್ಧಿ, ಪು : 38 –45
16. ಆರ್.ರಾಮಕೃಷ್ಣಯ್ಯ, ಭಾರತದ ಆರ್ಥಿಕ ಅಭಿವೃದ್ಧಿ, ಪು : 15 – 17
17. ಅದೇ ಪು : 18 – 20
18. ಹೆಚ್ಚ್‌ಆರ್ ಕೃಷ್ಣಮೂರ್ತಿ ಹೊಸಬೀಡು, ಭಾರತದ ಆರ್ಥಿಕ ಅಭಿವೃದ್ಧಿ, ಪು : 46–48
19. ಅದೇ ಪುಟ : 101, 105, 106
20. ಸಿ.ಕೆ. ರೇಣುಕಾರ್ಯ, ಸಂ. ಅರ್ಥಶಾಸ್ತ್ರ ಪಿಯುಸಿ ಎರಡನೇ ವರ್ಷ, ಪು : 69–70
21. ಪಾರ್ಶ್ವನಾಥ ಅಜ್ರಿ, ಅನು:ಭಾರತದ ಆರ್ಥಿಕಾಭಿವೃದ್ಧಿ, ಪು : 96
22. ಕೆ.ಡಿ ಬಸವಾ, ಭಾರತದ ಆರ್ಥಿಕ ಅಭಿವೃದ್ಧಿ, ಪು : 2.9
23. ಪಾರ್ಶ್ವನಾಥ ಅಜ್ರಿ, ಅನು:ಭಾರತದ ಆರ್ಥಿಕಾಭಿವೃದ್ಧಿ, ಪು : 236
24. ಕೆ.ಡಿ ಬಸವಾ, ಭಾರತದ ಆರ್ಥಿಕ ಅಭಿವೃದ್ಧಿ, ಪು : 3.40
25. ಹೆಚ್ಚ್‌ಆರ್ ಕೃಷ್ಣಮೂರ್ತಿ ಹೊಸಬೀಡು, ಭಾರತದ ಆರ್ಥಿಕ ಅಭಿವೃದ್ಧಿ, ಪು: 214–215
26. ಹೆಚ್ಚ್‌ಆರ್ ಕೃಷ್ಣಮೂರ್ತಿ ಹೊಸಬೀಡು, ಮೂಲ ಆರ್ಥಿಕ ಸಿದ್ಧಾಂತ, ಪು : 2
27. ಪಾರ್ಶ್ವನಾಥ ಅಜ್ರಿ, ಅನು:ಅರ್ಥಶಾಸ್ತ್ರದ ಮೂಲ ಅಂಶಗಳು, ಪು : 1
28. ಅದೇ ಪುಟ : 38 –39
29. ಸಿ.ಕೆ. ರೇಣುಕಾರ್ಯ, ಸಂ. ಅರ್ಥಶಾಸ್ತ್ರ ಪಿಯುಸಿ ಮೊದಲನೇ ವರ್ಷ, ಪು : 20

# ಅಧ್ಯಾಯ ಐದು

# ಉಪಸಂಹಾರ

# 5. ಉಪಸಂಹಾರ

ಕನ್ನಡ ಮಾಧ್ಯಮದಲ್ಲಿ ಪ್ರಕಟವಾದ ಮೊದಲನೆಯ ವರ್ಷದ ಮತ್ತು ಎರಡನೇ ವರ್ಷದ ಪಿಯುಸಿ ತರಗತಿಗಳ ಅರ್ಥಶಾಸ್ತ್ರ ಪಠ್ಯಪುಸ್ತಕಗಳನ್ನು ಅನುವಾದದ ಹಿನ್ನಲೆಯಲ್ಲಿ ಅಧ್ಯಯನ ಕೈಗೊಂಡಿರುತ್ತೇನೆ, ಅಧ್ಯಯನಕ್ಕೆ ಬೇಕಾಗುವ ಮಾಹಿತಿಗಳನ್ನು ಸಂಗ್ರಹಿಸಲು ಉಪನ್ಯಾಸಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಪ್ರಶ್ನಾವಳಿಗಳನ್ನು ರಚಿಸಿಕೊಂಡಿದ್ದೇನು. ಇವುಗಳನ್ನು ಅಂಚೆಯ ಮೂಲಕ ಮತ್ತು ಅನುಕೂಲವಿದ್ದ ಕಡೆಗೆ ಮುದ್ದಾಂ ನೀಡಿ ಮಾಹಿತಿ ಪಡೆದು ಈ ಕೆಳಗಿನಂತೆ ಕಂಡುಕೊಂಡ ಪ್ರಮುಖ ಅಂಶಗಳ ಬಗ್ಗೆ ಹೇಳಬಯಸುತ್ತೇನೆ.

**ಪ್ರತಿಯೊಬ್ಬ ಉಪನ್ಯಾಸಕರು ಒಂದಕ್ಕಿಂತ ಹೆಚ್ಚು ಪಠ್ಯಪುಸ್ತಕಗಳನ್ನು ಬಳಸುವುದು ಒಳ್ಳೆಯದು.** ಕಾರಣ ಯಾವ ಒಂದು ಪಿಯುಸಿ ಅರ್ಥಶಾಸ್ತ್ರದ ಪಠ್ಯಪುಸ್ತಕವು ಪರಿಪೂರ್ಣವಾಗಿರುವುದಿಲ್ಲ. ಒಂದು ಪಠ್ಯಪುಸ್ತಕದಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ಅಂಕಿ ಸಂಖ್ಯೆಗಳನ್ನು ಪೂರೈಸಿದ್ದರೆ, ಇನ್ನೊಂದು ಪಠ್ಯಪುಸ್ತಕದಲ್ಲಿ ಇವುಗಳ ಪೂರೈಕೆ ಇರುವುದಿಲ್ಲ. ಒಂದು ಪಠ್ಯಪುಸ್ತಕದಲ್ಲಿ ಮಾಹಿತಿಯು ಸಮಗ್ರವಾಗಿದ್ದರೆ ಇನ್ನೊಂದು ಪಠ್ಯಮುಸ್ತಕದಲ್ಲಿ ತುಂಬಾ ಕಡಿಮೆ ಮಾಹಿತಿ ಇರುತ್ತದೆ. ಮತ್ತೊಂದು ಪಠ್ಯಪುಸ್ತಕದಲ್ಲಿ ಪದಗಳಿಗೆ ಅಗತ್ಯವಾಗಿ ಹೇಳಲೇಬೇಕಾದ ಅರ್ಥವನ್ನು ಹೇಳಿರುವುದಿಲ್ಲ. ಇನ್ನೂ ಕೆಲವು ಪಠ್ಯಮುಸ್ತಕಗಳಲ್ಲಿ ಪ್ರಮುಖ ಅಂಶಗಳನ್ನು ತಿಳಿಸಿರುವುದಿಲ್ಲ, ಮತ್ತೆ ಕೆಲವು ಪಠ್ಯಪುಸ್ತಕಗಳಲ್ಲಿ ಮುಖ್ಯಾಂಶಗಳಿಗೆ ವಿವರಣೆಯೆ ಇರುವುದಿಲ್ಲ. ಅಷ್ಟೇ ಏಕೆ ಒಂದೆ ಪಠ್ಯಪುಸ್ತಕದ ಬೇರೆ ಬೇರೆ ಅಧ್ಯಾಯಗಳಿಗೆ ಸಂಬಂಧಿಸಿದಂತೆ ಒಂದೇ ರೀತಿಯಾಗಿ ಅಂಕಿ ಅಂಶ ಮತ್ತು ಮಾಹಿತಿಗಳನ್ನು ಪೂರೈಸಿರುವುದಿಲ್ಲ. ಅದರಂತೆ ಒಂದು ಅಧ್ಯಾಯಕ್ಕೆ ಸಂಬಂಧಿಸಿದ ಎಲ್ಲಾ ಅಂಶಗಳು ಪರಿಪೂರ್ಣವಾಗಿ ಪೂರೈಸಲ್ಪಟ್ಟಿದ್ದರೆ, ಇನ್ನೊಂದು ಅಧ್ಯಾಯ ಕೆಲವು ಅಂಶಗಳ ಮತ್ತೊಂದು ಅಧ್ಯಾಯ ಹಲವು ಅಂಶಗಳ ಕೊರತೆಗಳನ್ನು ಅನುಭವಿಸುವುದು ಕಂಡುಬರುತ್ತದೆ. ಅದರಂತೆ ಇನ್ನೂ ಕೆಲವು ಪಠ್ಯಮುಸ್ತಕಗಳಲ್ಲಿ ಪಠ್ಯಕ್ರಮಕ್ಕಿಂತಲೂ ಅತ್ಯಧಿಕ ಮಾಹಿತಿ ಮತ್ತು ಅಂಕಿ ಅಂಶಗಳನ್ನು ಪೂರೈಸಿರುತ್ತಾರೆ. ಇದರಿಂದಾಗಿ ನಿಗಧಿತ ಅವಧಿಗೆ ಪಠ್ಯಕ್ರಮವನ್ನು ಅಧ್ಯಯನ ಮಾಡಲು ಮತ್ತು ಪೂರೈಸಲು ಕ್ರಮವಾಗಿ ವಿದ್ಯಾರ್ಥಿಗಳಿಗ ಹಾಗೂ ಅಧ್ಯಾಪಕರುಗಳಿಗೆ ಸಾಧ್ಯವಾಗದು. ಈ ಕಾರಣದಿಂದಾಗಿ ಒಂದಕ್ಕಿಂತ

ಹೆಚ್ಚು ಪಠ್ಯಪುಸ್ತಕಗಳನ್ನು ಬಳಸುವುದರಿಂದ ಪರಸ್ಪರ ಅವುಗಳ ತುಲನೆಯ ಮೂಲಕ ಸಮರ್ಪಕವಾಗಿ ಬೋಧಿಸಲು ಮತ್ತು ಅಧ್ಯಯನ ಮಾಡಲು ಅನುಕೂಲವಾಗುತ್ತದೆ.

ಬಳಸಿದ ಭಾಷೆಯ ದೃಷ್ಟಿಯಿಂದಲೂ ಒಂದಕ್ಕಿಂತ ಹೆಚ್ಚು ಪಠ್ಯಪುಸ್ತಕಗಳನ್ನು ಬಳಸುವುದು ಸೂಕ್ತವೆನಿಸುತ್ತದೆ. **ಒಂದು ಪಠ್ಯಪುಸ್ತಕದಲ್ಲಿ ಇಂಗ್ಲಿಷ ಪದದಿಂದ ಅನುವಾದಿಸಿದ ಕನ್ನಡ ಪದವು ಇನ್ನೊಂದು ಕನ್ನಡ ಮಾಧ್ಯಮದ ಪಠ್ಯಪುಸ್ತಕದಲ್ಲಿನ ಪದಕ್ಕಿಂತ ಬೇರೆಯೆ ಆಗಿರುತ್ತದೆ. ಉದಾ** : Sex compositionಗೆ ಲಿಂಗ ರಚನೆ, ಲಿಂಗ ಸಂಯೋಜನೆ, ಲಿಂಗಾನುಪಾತ, ಲೈಂಗಿಕ ಅನುಪಾತ, ಸ್ತ್ರೀ ಪುರುಷರ ಅನುಪಾತ ಇತ್ಯಾದಿಗಳು. ವಿದ್ಯಾರ್ಥಿ ಅಥವಾ ಉಪನ್ಯಾಸಕರು ಒಂದೇ ಒಂದು ಕನ್ನಡ ಮಾಧ್ಯಮದ ಪಠ್ಯ ಪುಸ್ತಕ ಬಳಸಿದ್ದರೆ, ಆ ಪುಸ್ತಕದಲ್ಲಿ 'ಲೈಂಗಿಕ ಅನುಪಾತ' ಎಂದು ಇದ್ದರೆ ತಪ್ಪು ಮಾಹಿತಿ ಪಡೆದಂತಾಗುತ್ತದೆ. ಕಾರಣ 'ಲಿಂಗ' ಮತ್ತು 'ಲೈಂಗಿಕ' ಈ ಎರಡು ಪದಗಳ ನಡುವೆ ಅಂತರವಿದೆ. ಇವು ಪರಸ್ಪರ ಬೇರೆ ಬೇರೆಯಾದ ಅರ್ಥವನ್ನು ನೀಡುತ್ತವೆ. ಇದರಿಂದಾಗಿ ಅಧ್ಯಯನಕಾರರು ವಿಷಯ ವಿಶ್ಲೇಷಣೆ ಮಾಡುವಲ್ಲಿ ತೊಂದರೆ ಅನುಭವಿಸಬೇಕಾಗುತ್ತದೆ. ಈ ಕಾರಣದಿಂದಾಗಿ ಒಂದಕ್ಕಿಂತ ಹೆಚ್ಚು ಪಠ್ಯ ಪುಸ್ತಕ ಬಳಸುವುದು ಸರಿ ಎನಿಸುತ್ತದೆ.

ಅನುವಾದಕರು **ಕನ್ನಡ ಮಾಧ್ಯಮದ ಪಠ್ಯಪುಸ್ತಕದಲ್ಲಿ ತೀರಾ ಅಗತ್ಯವಿದ್ದ ಕಡೆಗೆ ಮತ್ತು ಪ್ರಮುಖ ಅಂಶಗಳ ಮುಂದೆ ಆವರಣದಲ್ಲಿ ಇಂಗ್ಲಿಷ ಪದವನ್ನು ನೀಡುವುದು ಅತ್ಯಗತ್ಯ** ಎನ್ನಿಸುತ್ತದೆ. ಕೆಲವು ಅನುವಾದಕರು ಈ ವಿಷಯವನ್ನು ಗ್ರಹಿಸಿಯೆ ನಿರ್ವಹಿಸಿರುತ್ತಾರೆ. ಆದರೆ ಬಹುತೇಕ ಅನುವಾದಕರು ಈ ಅಂಶವನ್ನು ಗಮನಿಸಿರುವುದಿಲ್ಲ. ದಯವಿಟ್ಟು ಇನ್ನು ಮುಂದೆಯಾದರೂ ಈ ವಿಚಾರವನ್ನು ಪರಾಮರ್ಶಿಸಬೇಕು.

ಕನ್ನಡ ಮಾಧ್ಯಮದಲ್ಲಿ ಅರ್ಥಶಾಸ್ತ್ರವನ್ನು ಅನುವಾದಿಸಿದ ಎಲ್ಲಾ ಅನುವಾದಕರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ಕನ್ನಡ ಸಾರಸತ್ವ ಲೋಕಕ್ಕೆ ಅವರ ಕೊಡುಗೆ ಅಪಾರ ಅವರೆಲ್ಲ ಸಾಕಷ್ಟು ಶ್ರಮವಹಿಸಿದ್ದರಿಂದಲೇ ಕೃತಿ ರಚನೆ ಸಾಧ್ಯ. ಇದನ್ನು ಎಂದಿಗೂ ಮರೆಯುವಂತಿಲ್ಲ. ಅನುವಾದಕರಲ್ಲಿ ವಿನಂತಿಸಿಕೊಳ್ಳುವುದೆನೆಂದರೆ, ತಾವು **ಬಳಸಿದ ಮೂಲ ಕೃತಿಗಳ ಪಟ್ಟಿಯನ್ನು ನೀಡಲೇಬೇಕು,** ಅದರೊಂದಿಗೆ ಹೊಲಿಸಿ ಅಧ್ಯಯನ ಮಾಡಲು ಎಲ್ಲರಿಗೂ ಎಲ್ಲಾ ಸಂದರ್ಭದಲ್ಲಿ ಆಗದಿದ್ದರೂ ಸಹ ಅಧ್ಯಯನ ಸಂದರ್ಭದಲ್ಲಿ ಏನಾದರೂ ತೊಡುಕು ಸಂಶಯ ಬಂದಲ್ಲಿ ಪರಿಹಾರ ಕಂಡುಕೊಳ್ಳುವಲ್ಲಿ ಸಹಯಕಾರಿಯಾಗುತ್ತದೆಂಬುದು ನನ್ನ ನಂಬಿಕೆಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಸಮಾಜ ವಿಜ್ಞಾನಗಳಲ್ಲಿ ಒಂದಾದ **ಅರ್ಥಶಾಸ್ತ್ರದ ವಿಷಯ ವ್ಯಾಪ್ತಿ ವಿಸ್ತೃತವಾಗಿರುವ ಕಾರಣದಿಂದಾಗಿ ನಿರ್ದಿಷ್ಟ ಪಠ್ಯಪುಸ್ತಕ ಸಾಧ್ಯವಾಗುವುದಿಲ್ಲ** ಎಂಬುದನ್ನು ಮಾಹಿತಿ ನೀಡಿದ ಉಪನ್ಯಾಸಕರು ತಿಳಿಸಿರುವುದಾಗಿ ಕಂಡು ಬರುತ್ತದೆ. ಆದರೆ ವಿಷಯ ಒಂದೆಯಾದರೂ ಸಹ ಅನುವಾದಕರ ವಿಷಯ ವಿಶ್ಲೇಷಣೆಯಲ್ಲಿ ಭಿನ್ನತೆಗಳನ್ನು ಗಮನಿಸಿದಾಗ ನಿರ್ದಿಷ್ಟ ಪಠ್ಯಪುಸ್ತಕ

ಇರಬೇಕೆಂದು ಮಾಹಿತಿ ನೀಡಿದವರಲ್ಲಿ 80% ಉಪನ್ಯಾಸಕರು ವ್ಯಕ್ತಪಡಿಸಿದ್ದಾರೆ. ಇದಕ್ಕೆ ಕೆಲವರು ಉದಾಹರಣೆಯ ಮೂಲಕ ತಮ್ಮ ಅಭಿಪ್ರಾಯವನ್ನು ಸಮರ್ಥಿಸಿರುತ್ತಾರೆ.

ಕನ್ನಡ ಮಾಧ್ಯಮದಲ್ಲಿನ ಅರ್ಥಶಾಸ್ತ್ರದ ಪಠ್ಯಪುಸ್ತಕಗಳ ಬಳಕೆಯ ಪ್ರಮಾಣವು ಬೇರೆ ಬೇರೆಯಾಗಿರುವುದನ್ನು ಸಹ ಮಾಹಿತಿಗಳಿಂದ ಕಂಡುಕೊಂಡಿದ್ದೇನೆ. ಎಚ್.ಆರ್. ಕೃಷ್ಣಮೂತಿ ಹೊಸಬೀಡು ಇವರ ಪಠ್ಯಪುಸ್ತಕಗಳನ್ನು ಅತ್ಯಧಿಕ ಸಂಖ್ಯೆಯಲ್ಲಿ ಬಳಸುವುದು ಸಂಗ್ರಹಿಸಿದ ಮಾಹಿತಿಗಳಿಂದ ಲಭ್ಯವಾಗಿದೆ. ಅದರಂತೆ ಕೆ.ಡಿ.ಬಸವಾ ಮತ್ತು ಆರ್. ರಾಮಕೃಷ್ಣಯ್ಯ ಇವರಿಬ್ಬರ ಪಠ್ಯಪುಸ್ತಕಗಳನ್ನು ಸಮಪ್ರಮಾಣದಲ್ಲಿ ಉಪಯೋಗಿಸುತ್ತಿರುವುದು ಮಾಹಿತಿಯಿಂದ ಗೊತ್ತಾಗಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಎಚ್.ಆರ್. ಕೃಷ್ಣಮೂತಿ ಹೊಸಬೀಡು ಇವರು ಪ್ರಾರಂಭದಲ್ಲಿ ಅಗತ್ಯ ಅಂಕಿ ಅಂಶಗಳೊಂದಿಗೆ ಹೊಸ ವಿಧಾನದಿಂದ ಪಠ್ಯಪುಸ್ತಕ ರಚನೆಗೆ ತೊಡಗಿ ಬಹುತೇಕರನ್ನು ತಮ್ಮತ್ತ ಸೆಳೆದುಕೊಂಡರು. ಆದರೆ ಈಗ ಅತಿಯಾದ ಮಾಹಿತಿಗಳ ಸೇರ್ಪಡೆಯಿಂದಾಗಿ ಪಠ್ಯಪುಸ್ತಕವು ಹೊರೆಯಾಗಿದೆ ಎಂಬ ವಿಚಾರವು ಸಹ ವ್ಯಕ್ತವಾಗಿದೆ. ತುಂಬಾ ಹೆಸರು ಮಾಡಿದ್ದ ಕೆ.ಡಿ.ಬಸವಾ ಅವರು ಮೊದಲಿನಂತೆ ವಿಷಯದ ಗುಣಮಟ್ಟ ಮತ್ತು ನವಿನತೆಯನ್ನು ಅನುಸರಿಸದ ಕಾರಣ ಅವರ ಪಠ್ಯಪುಸ್ತಕಗಳು ಉಪನ್ಯಾಸಕರನ್ನು ಮತ್ತು ವಿದ್ಯಾರ್ಥಿಗಳನ್ನು ಆಕರ್ಷಿಸುವಲ್ಲಿ ವಿಫಲವಾಗಿರುವುದಾಗಿ ಹೇಳಿದ್ದಾರೆ. ಆರ್. ರಾಮಕೃಷ್ಣಯ್ಯನವರ ಪಠ್ಯಪುಸ್ತಕಗಳು ತುಂಬಾ ಆಕರ್ಷಕ ರೀತಿಯಲ್ಲಿ ಅಗತ್ಯ ಮಾಹಿತಿಗಳಿಗೆ ಸಿಮೀತವಾದ ಕಾರಣ ಪರೀಕ್ಷಾ ದೃಷ್ಟಿಯಿಂದಲೂ ಸುಲಭ ಮತ್ತು ಸರಳವಾಗಿದೆ. ಅದು ಪ್ರಚಾರದ ಕೊರತೆಯಿಂದ ಮೊದಲ ಸ್ಥಳದಲ್ಲಿರಬೇಕಾದದ್ದು ಹಿಂದೆ ಇದೆ ಎಂಬುದನ್ನು ಮತ್ತೆ ಕೆಲವರು ಅಭಿಪ್ರಾಯ ಮಂಡಿಸಿದ್ದಾರೆ. ನನ್ನ ಅಧ್ಯಯನದಲ್ಲಿ ಉಳಿದಂತೆ ಅಲ್ಲಲ್ಲಿ ಅನುವಾದದ ಮೂಲಕ ಕನ್ನಡದಲ್ಲಿ ಅರ್ಥಶಾಸ್ತ್ರದ ಪಠ್ಯಪುಸ್ತಕಗಳು ಪ್ರಕಟವಾಗಿ ತಮ್ಮ ಸುತ್ತ ಮುತ್ತಲಿನವರಿಗೆ ತಲುಪಲು ಶ್ರಮಿಸುತ್ತಿರುವುದಾಗಿ ತಿಳಿದು ಬರುತ್ತದೆ.

ನನ್ನ ಅಧ್ಯಯನ ಸಂದರ್ಭದಲ್ಲಿ ಕಂಡುಕೊಂಡ ಮತ್ತೊಂದು ಪ್ರಮುಖ ಅಂಶವೆಂದರೆ **ವಿದ್ಯಾರ್ಥಿಗಳಲ್ಲಿ ವಿಸ್ತ್ರತ ಅಧ್ಯಯನದ ಕೊರತೆ**. ಪಠ್ಯಪುಸ್ತಕಗಳಲ್ಲಿ ಇರುವ ವಿಷಯವನ್ನು ಹೇಗೆ ಟಿಪ್ಪಣಿ ರೂಪದಲ್ಲಿ ಸಂಗ್ರಹಿಸಿಟ್ಟುಕೊಂಡು ಅಧ್ಯಯನ ಮಾಡಬೇಕೆಂಬುದನ್ನು ತಿಳಿಸುವ ಸಲುವಾಗಿ ಮತ್ತು ವಿಷಯವನ್ನು ಸರಿಯಾಗಿ ಗ್ರಹಿಸಲು ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಗಣಿತದಂಥ ಕೆಲವು ಕಠಿಣ ವಿಚಾರಗಳ ಬೋಧನೆಯೊಂದಿಗೆ ತರಗತಿಯಲ್ಲಿ ಟಿಪ್ಪಣಿ ನೀಡುತ್ತಿರುವುದಾಗಿ ಉಪನ್ಯಾಸಕರಿಂದ ತಿಳಿದು ಬರುತ್ತದೆ. ಬಹುತೇಕ ವಿದ್ಯಾರ್ಥಿಗಳು ತಮ್ಮ ತರಗತಿಯ ಉಪಾಧ್ಯಯರು ನೀಡುವ ಪಾಠ ಟಿಪ್ಪಣೆಗೆ ಮೀಸಲಾಗಿದ್ದಾರೆ ಹೆಚ್ಚಿನ ಓದಿನತ್ತ ಅವರು ಗಮನಿಸದಿರುವುದು ತೀಳಿದು ಬಂದಿದೆ. ಕೆಲವರು ಪಠ್ಯಪುಸ್ತಕವನ್ನು ಕೊಂಡು ಕೊಳ್ಳದಿರುವುದು ಸಹ ಗೊತ್ತಾಗಿದೆ. ಆರ್ಥಿಕ ಸಂಕಷ್ಟದಿಂದಾಗಿ ಅಧಿಕ ಬೆಲೆಯುಳ್ಳ ಐಚ್ಚಿಕ ವಿಷಯಗಳ ಪಠ್ಯಪುಸ್ತಕ ಖರೀದಿಸದಿರುವುದು ಒಂದು ವಿಚಾರವಾದರೆ, ಮತ್ತೊಂದು

ವಿಚಾರವೆಂದರೆ ಅವುಗಳನ್ನು ಓದಲು ಸಮಯ ಸಾಕಾಗದಿರುವುದು. ವಿಶೇಷವಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ತಮ್ಮ ಹಳ್ಳಿಗಳಿಂದ ಬಸ್ಸಿನ ಮೂಲಕ ಕಾಲೇಜುಗಳಿಗೆ ಬಂದು ಪುನಃ ಬಸ್ಸಿಗಾಗಿ ಕಾದು ಮನೆ ತಲುಪುವ ವೇಳೆಗೆ ಸುಸ್ತಾಗಿರುತ್ತಾರೆ, ಅಂದರೆ ವೇಳೆಗೆ ಸರಿಯಾಗಿ ಬಸ್ಸುಗಳು ಇಲ್ಲದಿರುವುದು, ಹಸಿವಿನ ಬಾಧೆಯು ಒಂದು ಕಾರಣವೇ ಸರಿ. ಬಡತನದಿಂದಾಗಿ ಸಮತೋಲನ ಆಹಾರ ಸೇವನೆ ಇಲ್ಲದೆ ಅಶಕ್ತರಾಗಿರುವ ಇಂದಿನ ವಿದ್ಯಾರ್ಥಿಗಳು ಮಾನಸಿಕವಾಗಿ, ಬೌದ್ಧಿಕವಾಗಿ ಮತ್ತು ದೈಹಿಕವಾಗಿ ಸಬಲರಲ್ಲದವರೆಂಬುದನ್ನು ಸಹ ತಳ್ಳಿಹಾಕುವ ವಿಷಯವಲ್ಲ. ಇದರಿಂದಾಗಿ ಅವರು ಬೇಗನೆ ದಣಿಯುತ್ತಾರೆ/ ಆಯಾಸಗೊಳ್ಳುತ್ತಾರೆ. ಮತ್ತೊಂದು ಪ್ರಮುಖ ಅಂಶವೆಂದರೆ ವಿದ್ಯಾರ್ಥಿಗಳಲ್ಲಿ ಹತಾಶಯ ಭಾವನೆಗಳಿರುವುದು, ಎಷ್ಟು ಓದಿದರೂ ಸರಕಾರಿ ಉದ್ಯೋಗ ದೊರೆಯಲಾರದು ಎನ್ನುವ ಒಂದು ಗುಂಪಾದರೆ, ಇನ್ನೊಂದು ಮುಂದಿನ ಶಿಕ್ಷಣ ಪಡೆಯುವ ಸಾಮರ್ಥ್ಯ ತಮ್ಮ ಕುಟುಂಬದಿಂದಾಗದು ಎಂಬುದು. ಸ್ವ ಉದ್ಯೋಗ ಕೈಗೊಳ್ಳಲು ತಾವು ಕುಟುಂಬದಿಂದ ಶಕ್ತರಲ್ಲ ಹಾಗೂ ಸರಕಾರದಿಂದ ಪಡೆಯಲು ಶಿಫಾರಸ್ಸು ವಗೈರೆ ಆಗದು, ಒಂದೆರಡು ವರ್ಷ ಓದಬೇಕಾಗಿದೆ ಓದೋಣ ಎನ್ನುವ ನೆಪದಿಂದ ಕಾಲೇಜಿಗೆ ಸೇರಿದ ಮತ್ತೊಂದು ಗುಂಪು ಇದೆ. ಎನೇ ಇದ್ದರೂ ಉಪನ್ಯಾಸಕರು, **ವಿಸ್ತೃತ ಓದಿನಿಂದಾಗಿ, ಬಹುಮುಖ ಪ್ರತಿಭೆಯವರಾಗಿ ಆಯ್ಕೆ ಉತ್ತರ ನೀಡಲು ಸಾಧ್ಯವಾಗುತ್ತದೆಂ**ಬುದನ್ನು ತಮ್ಮ ಉಪನ್ಯಾಸದಲ್ಲಿ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ತಿಳಿಸಲು ವಿನಂತಿಸಲಾಗಿದೆ. ಅಲ್ಲದೆ ಸೀಮಿತ ಓದಿನಿಂದ ಆಯ್ಕೆಯ ಉತ್ತರ ನೀಡಲು ಸಾಧ್ಯವಾಗದು ಎಂಬುದನ್ನು ಮೇಲಿಂದ ಮೇಲೆ ಬೋಧನೆಯ ಸಂದರ್ಭದಲ್ಲಿಯೇ ತಿಳಿಸಿದರೆ ವಿದ್ಯಾರ್ಥಿಗಳು ಅಧಿಕ ಉತ್ತರ ಬರೆಯದಿದ್ದರೂ, ಇಲ್ಲವೆ ಪೂರ್ಣ ಓದಿನಲ್ಲಿ ತೊಡಗದಿದ್ದರೂ ಪುಸ್ತಕ ಓದುವ ಕಡೆಗೆ ವಾಲುತ್ತಾರೆ ಎಂಬುದನ್ನು ಮರೆಯುವ ಆಗಿಲ್ಲ. **ಉಪನ್ಯಾಸಕರು ತಮ್ಮ ಉಪನ್ಯಾಸದ ಮಾದರಿಯನ್ನು ಬದಲಾವಣೆ ಮಾಡಿಕೊಳ್ಳಲು ಸವಿನಯ ಪ್ರಾರ್ಥನೆ,** ಉಪನ್ಯಾಸಕರು ಕನ್ನಡದ ಜೊತೆಗೆ ಇಂಗ್ಲಿಷ ಮಾಧ್ಯಮದಲ್ಲಿಯೂ ವಿಷಯವನ್ನು ವಿಶ್ಲೇಷಣೆ ಮಾಡುವುದರಿಂದ ವಿದ್ಯಾರ್ಥಿಗಳಲ್ಲಿ ವಿಸ್ತೃತ ಓದಿನ ಅಭಿರುಚಿ ಮೂಡಿಸಿಕೊಳ್ಳಲು ಉಪನ್ಯಾಸಕರೆ ಅವರಿಗೆ ಮಾದರಿಯಾಗುವ ಸಾಧ್ಯತೆಗಳಿವೆ.

**ಪದವಿ ಪೂರ್ವ ಕಾಲೇಜಿನಲ್ಲಿ ಗ್ರಂಥಾಲಯಗಳ ಕೊರತೆ ಇರುವುದಲ್ಲದೆ** ದಾನಿಗಳಿಂದ ಸಂಗ್ರಹಿಸಿದ ಇಲ್ಲವೆ ಇಲಾಖೆಯಿಂದ ಪೂರೈಸಲ್ಪಟ್ಟ ಪುಸ್ತಕಗಳನ್ನು ಸಕಾಲಕ್ಕೆ ವಿದ್ಯಾರ್ಥಿಗಳಿಗೆ ವಿತರಣೆ ಮಾಡುವ **ಗ್ರಂಥ ಪಾಲಕರ ನೇಮಕಾತಿ ಇಲ್ಲದಿರುವುದು ವಿದ್ಯಾರ್ಥಿಗಳ ಓದಿನ ಅಭಿರುಚಿ ಕಡಿಮೆಯಾಗುವ** ಕಾರಣಗಳಲ್ಲಿ ಒಂದು. ಉಪನ್ಯಾಸಕರು ತಮ್ಮ ಪಾಠದೊಂದಿಗೆ ಹೆಚ್ಚಿನ ಈ ಪುಸ್ತಕ ವಿತರಣೆಯ ಕೆಲಸವನ್ನು ಸಕಾಲಕ್ಕೆ ಮತ್ತು ಸರಿಯಾಗಿ ನಿರ್ವಹಿಸಲು ಅನುಕೂಲವಾಗುವುದಿಲ್ಲ. ಅಲ್ಲದೆ ಅರ್ಥಶಾಸ್ತ್ರಗಳಂತ ಸಮಾಜ ವಿಜ್ಞಾನಗಳ ಶಬ್ದಕೋಶಗಳ ಕೊರತೆಯು ಸಹ ಒಂದು ಸಮಸ್ಯೆಯೆ.

ಒಟ್ಟಾರೆ ಕನ್ನಡ ಮಾಧ್ಯಮದ ಅರ್ಥಶಾಸ್ತ್ರ ಪಠ್ಯಪುಸ್ತಕಗಳಲ್ಲಿ ಇರಬಹುದಾದ ಅನುವಾದ ಮತ್ತಿಯ ಸಮಸ್ಯೆಗಳ ಪಟ್ಟಿ ಬಿಟ್ಟರೆ ತುಂಬಾ ವಿಸ್ತೃತವಾಗುತ್ತಾ ಹೋಗುತ್ತದೆ. ಇದನ್ನು ಸಕಾಲಕ್ಕೆ ಕಡಿಮೆ ಮಾಡಲು ಸಂಬಂಧಿಸಿದ ಅನುವಾದಕರು ಗಮನಿಸಲು ಕಳಕಳಿಯ ವಿನಂತಿ.

ಆರ್ಥಿಕವಾಗಿ ಸಂಕಷ್ಟದಲ್ಲಿರುವ ಹಾಗೂ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ **ಪಾಲಕರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಲು** ವಿನಂತಿಸಿಕೊಳ್ಳುತ್ತಾ ಸರಕಾರದ ವಿವಿಧ ಸೌಲಭ್ಯಗಳನ್ನು ಪಡೆದುಕೊಳ್ಳುವ ಮೂಲಕ ಮಕ್ಕಳ ಶ್ರೇಯಸ್ಸನ್ನು ಬಯಸುವಂತೆ ಕೇಳಿಕೊಳ್ಳುತ್ತೇನೆ.

ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರು ಪ್ರಕಟಿಸಿದ ಪ್ರಥಮ ಮತ್ತು ದ್ವಿತೀಯ ವರ್ಷದ ಅರ್ಥಶಾಸ್ತ್ರ ಪಠ್ಯಪುಸ್ತಕಗಳನ್ನು ವಿಷಯ ತಜ್ಞರು ಹಾಗೂ ಅನುಭವಿಗಳು ಈ ಪುಸ್ತಕಗಳನ್ನು ರಚಿಸಿರುತ್ತಾರೆ. ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರು ಅಧಿಕೃತ ಪಠ್ಯಪುಸ್ತಕಗಳೆಂದು ಘೋಷಣೆ ಮಾಡಿದೆ. ಈ ಪುಸ್ತಕಗಳಲ್ಲಿ ಬಳಸಿರುವ ಭಾಷೆ, ನೀಡಿರುವ ಉದಾಹರಣೆಗಳು, ಸೂತ್ರ ಈ ಮೊದಲಾದವುಗಳಲ್ಲಿ ಕೆಲವು ಅತ್ಯಂತ ಉನ್ನತಮಟ್ಟದಲ್ಲಿ ಇರುವುದು ಅಧ್ಯಯನದಿಂದ ತಿಳಿದು ಬರುತ್ತದೆ. ಈ ಪ್ರೌಢಿಮೆ ಪದವಿ ತರಗತಿಗೆ ಸೂಕ್ತವೆನಿಸುತ್ತದೆ. ಆದರೆ ಪದವಿ ಪೂರ್ವ ತರಗತಿಗಳ ಮಕ್ಕಳ ಬೌದ್ಧಿಕ ಮಟ್ಟವು ಇನ್ನೂ ಈ ಹಂತವನ್ನು ತಲುಪುದಿರುವ ಕಾರಣ ಇನ್ನಷ್ಟು ಭಾಷೆಯ ಪ್ರೌಢಿಮೆಯನ್ನು ಕಡಿಮೆ ಮಾಡಿದರೆ ಒಳ್ಳೆಯದೆಂದು ನನ್ನ ಭಾವನೆ.

ಕನ್ನಡ ಮಾಧ್ಯಮದಲ್ಲಿನ ಅರ್ಥಶಾಸ್ತ್ರ ಪಠ್ಯಪುಸ್ತಕಗಳಲ್ಲಿ ಮುದ್ರಣ ದೋಷಗಳು ಸಹ ಕಂಡು ಬಂದಿವೆ. ಲಕ್ಷಾಂತರ ವಿದ್ಯಾರ್ಥಿಗಳು ಈ ಪಠ್ಯಪುಸ್ತಕಗಳನ್ನು ಬಳಸತ್ತಾರೆ ಕಾರಣ **ಮುದ್ರಣ ಕಾಲಕ್ಕೆ ದೋಷಗಳನ್ನು ಸರಿಪಡಿಸಿ ಅಂತಿಮವಾಗಿ ಮುದ್ರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡುವುದು ತುಂಬಾ ಸೂಕ್ತವೆಂದು** ಎಲ್ಲಾ ಅನುವಾದಕ ಮಹನೀಯರಲ್ಲಿ ಈ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

# ಅನುಬಂಧ

## ಅನುಬಂಧ

## ಗ್ರಂಥಋಣ


1. ಕೆಂಪಯ್ಯ ಜಿ.ಎನ್, ಭಾರತದ ಆರ್ಥಿಕ ಅಭಿವೃದ್ಧಿ, ಭಾಗ್ಯಶ್ರೀ ಪ್ರಕಾಶನ ತುಮಕೂರ, ಜೂನ್ 2008
2. ಕೃಷ್ಣಮೂರ್ತಿ ಹೆಚ್ಚ್.ಆರ್. ಹೊಸಬೀಡು, ಭಾರತದ ಆರ್ಥಿಕ ಅಭಿವೃದ್ಧಿ, ಸಪ್ನಬುಕ್ ಹೌಸ್ ಗಾಂಧಿ ನಗರ, ಬೆಂಗಳೂರು. ಆಗಷ್ಟ 2005
3. ಕೃಷ್ಣಮೂರ್ತಿ ಹೆಚ್ಚ್.ಆರ್., ಹೊಸಬೀಡು, ಮೂಲ ಆರ್ಥಿಕ ಸಿದ್ಧಾಂತ, ಸಪ್ನಬುಕ್ ಹೌಸ್ ಗಾಂಧಿ ನಗರ, ಬೆಂಗಳೂರು. ಸಪ್ಟಂಬರ್ – 2004
4. ಕೃಷ್ಣಯ್ಯಗೌಡ ಎಚ್.ಆರ್., ಭಾರತದ ಆರ್ಥಿಕಾಭಿವೃದ್ಧಿ, ವಿದ್ಯಾಪ್ರಕಾಶನ ಗದಗ, 2005
5. ಗೌಡ ಎನ್.ಕೆ., ಅರ್ಥಶಾಸ್ತ್ರದ ಪರಿಚಯ, ಆದಿತ್ಯ ಪ್ರಕಾಶನ, ಡಾವಣಗೇರಿ, 2004
6. ಗೌಡ ಎನ್.ಕೆ., ಆರ್ಥಿಕಾಭಿವೃದ್ಧಿ ಪಥದಲ್ಲಿ ಭಾರತ, ಆದಿತ್ಯ ಪ್ರಕಾಶನ, ಡಾವಣಗೇರಿ, 2005
7. ಜವಳಿ ಬಿ.ಜಿ. ಪ್ರಜಾವಣಿ ಕನ್ನಡ ದಿನಪತ್ರಿಕೆ ಕ್ರೀಡಾ ಪುರವಣಿ ದಿನಾಂಕ : 16/9/2008,
8. ಪಾರ್ಶ್ವನಾಥ ಅಜ್ರಿ, ಅನು : ಅರ್ಥಶಾಸ್ತ್ರದ ಮೂಲ ಅಂಶಗಳು, ಯುನೈಟೆಡ್ ಪಬ್ಲಿಶರ್ಸ್ ಅಲ್ಲೈಮಾನ್ ಕಂಪೌಂಡ್, ಜೆಪ್ಪು, ಮಂಗಳೂರು, ಜೂನ್–2005
9. ಪಾರ್ಶ್ವನಾಥ ಅಜ್ರಿ, ಅನು : ಭಾರತದ ಆರ್ಥಿಕ ಅಭಿವೃದ್ಧಿ, ಯುನೈಟೆಡ್ ಪಬ್ಲಿಶರ್ಸ್ ಅಲ್ಲೈಮಾನ್ ಕಂಪೌಂಡ್, ಜೆಪ್ಪು, ಮಂಗಳೂರು, ಜೂನ್–2005
10. ಬಸವಾ ಕೆ.ಡಿ, ಭಾರತದ ಆರ್ಥಿಕ ಅಭಿವೃದ್ಧಿ, ವಿದ್ಯಾವಾಹಿನಿ ಪ್ರಕಾಶನ, ಮೇ – 2005
11. ಬಸವಾ ಕೆ.ಡಿ, ಅರ್ಥಶಾಸ್ತ್ರ, ವಿದ್ಯಾವಾಹಿನಿ ಪ್ರಕಾಶನ, ಮೇ – 2004
12. ಮಾಳವಾಡ ಸ.ಸ., ಅರ್ಥಶಾಸ್ತ್ರ ಪರಿಚಯ, ಗೌರವ ನಿರ್ದೇಶಕರು ಪಠ್ಯಪುಸ್ತಕ ನಿರ್ದೇಶನಾಲಯ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 1969
13. ರಾಮಕೃಷ್ಣಯ್ಯ ಆರ್., ಭಾರತದ ಆರ್ಥಿಕ ಅಭಿವೃದ್ಧಿ, ಜಿಲ್ಲಾ ಅರ್ಥಶಾಸ್ತ್ರ ಅಧ್ಯಯನ ಕೇಂದ್ರ ತುಮಕೂರು, ನವೆಂಬರ್ 2006
14. ರೇಣುಕಾರ್ಯ ಸಿ.ಕೆ., ಸಂ: ಅರ್ಥಶಾಸ್ತ್ರ ಪಿ.ಯು.ಸಿ ಮೊದಲನೇ ವರ್ಷ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ 2004

15. ರೇಣುಕಾರ್ಯ ಸಿ.ಕೆ., ಸಂ: ಅರ್ಥಶಾಸ್ತ್ರ ಪಿ.ಯು.ಸಿ ಎರಡನೇ ವರ್ಷ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ 2006

16. ಹೊನಕೇರಿ ಪಿ.ಎಮ್. ಹಾಗೂ ಸಂಗಡಿಗರು, ಭಾರತದ ಆರ್ಥಿಕಾಭಿವೃದ್ಧಿ, ಚೇತನ ಬುಕ್ ಹೌಸ್ ಮೈಸೂರು, 2005

1. Department of Pre-university education Palace Road Bangalore, Economics Draft Revised Curriculum 2003 - 2004

2. MITHANI. D.M. AND OTHERS, Basic Economic Theory First Year PUC, Himalaya Publishing house Mubai, 2004

3. Ramakrishnaiah R. Economic development of India for Sec ond year PUc, Zill Arthashastra Adhyayana Kendra, Tumkur - January 2007

4. Raman B.S., Economics for first year PUC, United Publishers Jeppu, Mangalore, June -2005,

5. Raman B.S., Economics for Second year PUC, United Pub lishers Jeppu, Mangalore, Second Edition : June -2005